ಸಂಪುಟ: 14 Volume | ಸಂಚಿಕೆ: 19 Issue | ಪುಟಗಳು 08 Pages | ಬುಧವಾರ 22 ಏಪ್ರಿಲ್ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ನಾವು ಬಿಡುಗಡೆ, ಸ್ವಾತಂತ್ರ್ಯ ಪಡೆಯಬೇಕಾದದ್ದು ಅಜ್ಞಾನದಿಂದ, ಅಧರ್ಮದಿಂದ.

–ಬಿ.ಎಂ.ಶ್ರೀ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper


ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

ಅನುಭವ ಮಂಟಪ ಜಗತ್ತಿನ ಮೊದಲ ಸಂಸತ್ 6

ರುದ್ರಭೂಮಿ ಅಭಿವೃದ್ಧಿಗೆ ಧರ್ಮಸ್ಥಳದ ನೆರವು 7

ಬಸವಣ್ಣನವರ ಕಾಯಕ ತತ್ವ ಅನುಕರಣೀಯ 8



**ಚಿಕ್ಕಮಗಳೂರು ನಗರ ಗೃಹ ನಿರ್ಮಾಣ ಸಹಕಾರ ಸಂಘ ನೂರುವಸಂತ ಪೂರೈಸಿದ ಹಿನ್ನೆಲೆಯಲ್ಲಿ ಏರ್ಪಡಿಸಿದ್ದ ಸಂಘದ ನೂತನ ಕಟ್ಟಡ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಕನ್ನಡ ಸೇನೆ ಕರ್ನಾಟಕ ಚಿಕ್ಕಮಗಳೂರು ಜಿಲ್ಲಾ ಘಟಕದ ಅಧ್ಯಕ್ಷರಾದ ಪಿ.ಸಿ. ರಾಜೇಗೌಡರಿಗೆ ಸನ್ಮಾನಿಸಲಾಯಿತು.**

## ಮೋದಿ ಬಗ್ಗೆ ಎಐಸಿಸಿ ಅಧ್ಯಕ್ಷ ಕಿಡಿ ನುಡಿ

• ಮಲ್ಲಮ್ಮ ನುಡಿ ವಾರ್ತೆ ಚೆನ್ನೈ

ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೀಡಿರುವ ಹೇಳಿಕೆಯೊಂದು ಇದೀಗ ವಿವಾದದ ಕಿಡಿ ಹೊತ್ತಿಸಿದೆ.

ಚೆನ್ನೈನಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಟೆರರಿಸ್ಟ್ ಎಂದು ಕರೆದಿದ್ದಾರೆ. ಪ್ರಧಾನಿ ಮೋದಿ ಕುರಿತ ಎಐಸಿಸಿ ಅಧ್ಯಕ್ಷರ ಈ ಹೇಳಿಕೆ ತೀವ್ರ ವಿವಾದಕ್ಕೆ ಕಾರಣವಾಗುವ ಸಾಧ್ಯತೆ ದಟ್ಟವಾಗಿದೆ. ತಮಿಳುನಾಡಿನಲ್ಲಿ ಎಐಎಡಿಎಂಕೆ ಮತ್ತು ಬಿಜೆಪಿ ನಡುವಿನ ಮೈತ್ರಿಯ ಔಚಿತ್ಯವನ್ನು ಪ್ರಶ್ನಿಸಿದ ಮಲ್ಲಿಕಾರ್ಜುನ ಖರ್ಗೆ, ಸಮಾನತೆ, ನ್ಯಾಯದ ಮೇಲೆ ನಂಬಿಕೆ ಇರದ ಪಕ್ಷದೊಂದಿಗೆ ಎಐಎಡಿಎಂಕೆ ನಂಬಿಕೆ ಇಟ್ಟಿರುವುದು



ಆಶ್ಚರ್ಯ ಎಂದು ಗುಡುಗಿದ್ದಾರೆ. ನರೇಂದ್ರ ಮೋದಿ ಓರ್ವ ಭಯೋತ್ಪಾದಕ. ಅವರ ಪಕ್ಷ ಸಮಾನತೆ ಮತ್ತು ನ್ಯಾಯದಲ್ಲಿ ನಂಬಿಕೆ ಇಡುವುದಿಲ್ಲ. ಈ ಜನರು ಅವರೊಂದಿಗೆ ಕೈಜೋಡಿಸುತ್ತಿದ್ದಾರೆ ಎಂದರೆ ಅವರು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತಿದ್ದಾರೆ ಎಂದೇ ಅರ್ಥ ಎಂದು ಎಐಎಡಿಎಂಕೆ ಪಕ್ಷವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

## 140 ಕೋಟಿ ಭಾರತೀಯರಿಗೆ ಅವಮಾನ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಎಐಸಿಸಿ ರಾಷ್ಟ್ರೀಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರೇ, ಭಾರತದ ಹೆಮ್ಮೆಯ ಪ್ರಧಾನಮಂತ್ರಿಗಳಾದ ಆದರಣೀಯ ನರೇಂದ್ರ ಮೋದಿಜೀ ರವರನ್ನು ಟೀಕಿಸುವ ಭರದಲ್ಲಿ ನೀವು ಇಂದು ದೇಶದ 140 ಕೋಟಿ ಜನರನ್ನು ಹಾಗೂ ನಮ್ಮ ಪ್ರಜಾಪ್ರಭುತ್ವದ ಘನತೆಯನ್ನು ಅಪಮಾನಿಸಿದ್ದೀರಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ಆಕ್ಷೇಪಿಸಿದ್ದಾರೆ.

ಇದು ಸತತ ಮೂರನೇ ಬಾರಿಗೆ ಮೋದಿಜೀ ರವರನ್ನು ಭಾರತದ ಪ್ರಧಾನಮಂತ್ರಿಗಳ ಸ್ಥಾನದಲ್ಲಿ ಕೂರಿಸಿರುವ ದೇಶದ ಜನತೆಯ ತೀರ್ಪಿಗೆ ನೀವು ನೀಡುತ್ತಿರುವ ಗೌರವವೇ? ವಿಶ್ವದ 32ಕ್ಕೂ ಹೆಚ್ಚು



ದೇಶಗಳ ಅತ್ಯುನ್ನತ ಗೌರವಗಳಿಗೆ ಪಾತ್ರರಾಗಿ, ಭಾರತದ ಕೀರ್ತಿಯನ್ನು ಜಗತ್ತಿನ ಶಿಖರಕ್ಕೇರಿಸಿದ ಕೋಟ್ಯಂತರ ಭಾರತೀಯರ ಹೆಮ್ಮೆಯ ನಾಯಕನ ಬಗ್ಗೆ ಇಂತಹ ನಂಜಿನ, ವಿಷಕಾರಿ ಮಾತು ಸಲ್ಲ ಎಂದು ಸಾಮಾಜಿಕ ಜಾಲತಾಣದಲ್ಲಿ ಹಾಕಿದ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

## ಗುಂಡಿನ ದಾಳಿಗೆ ವ್ಯಕ್ತಿ ಬಲಿ

**ವಾಡಿ:** ಚಿತ್ತಾಪುರ ತಾಲೂಕಿನ ವಾಡಿಯಲ್ಲಿ ದುಷ್ಕರ್ಮಿಗಳು ನಡೆಸಿದ ಗುಂಡಿನ ದಾಳಿಗೆ ವ್ಯಕ್ತಿಯೊಬ್ಬ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ವಾಡಿ ಲಾರಿ ಓನರ್ಸ್ ಅಸೋಸಿಯೇಷನ್ನ ಮಾಜಿ ಅಧ್ಯಕ್ಷ ಇರ್ಫಾನ್ ಪಟೇಲ (43) ಕೊಲೆಯಾದವರು. ಇರ್ಫಾನ್ ಅವರು ಬಲರಾಮ ಚೌಕ್‌ನಿಂದ ಸ್ಕೂಟರ್ ಮೇಲೆ ವಾಡಿ ಪಟ್ಟಣದ ಕಡೆಗೆ ತೆರಳುತ್ತಿದ್ದಾಗ ದುಷ್ಕರ್ಮಿಗಳು ಕಾರಿನಿಂದ ಸ್ಕೂಟರ್ಗೆ ವೇಗವಾಗಿ ಡಿಕ್ಕಿ ಹೊಡೆದಿದ್ದಾರೆ. ಕೆಳಗೆ ಬಿದ್ದ ಇರ್ಫಾನ್ ಮೇಲೆ ಎರಡು ಸುತ್ತು ಗುಂಡು ಹಾರಿಸಿ ನಂತರ, ಮಚ್ಚು ಹಾಗೂ ಚಾಕುವಿನಿಂದ ಮುಖ ಮತ್ತು ಕುತ್ತಿಗೆಗೆ ಹಲವು ಬಾರಿ ಇರಿದು ಬರ್ಬರವಾಗಿ ಕೊಲೆಮಾಡಿದ್ದಾರೆ. ಘಟನೆ ನಂತರ ಆರೋಪಿಗಳು ಪರಾರಿಯಾಗಿದ್ದಾರೆ. ಪ್ರಕರಣ ದಾಖಲಾಗಿದೆ.

# ಅಂಕಿಗೆ ಸಿಗದ ಕೈ ಬೆಂಕಿ

### ಕಾಂಗೆಸ್‌ನಲ್ಲಿ ಒಂದು ಸಮುದಾಯದ ಮುನಿಸು | ಪಕ್ಷದ ಮೇಲೆ ವ್ಯತಿರಿಕ್ತ ಪರಿಣಾಮ | ಚಿಂತನ ಮಂಥನ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ದಾವಣಗೆರೆ ಉಪ ಚುನಾವಣೆ ಮುಗಿದರೂ ರಾಜ್ಯ ಕಾಂಗ್ರೆಸ್‌ನಲ್ಲಿ ಅಸಮಾಧಾನದ ಬೆಂಕಿ ಆರದಾಗಿದೆ. ಚುನಾವಣೆ ಫಲಿತಾಂಶಕ್ಕೂ ಮುನ್ನವೇ ಸಿದ್ದರಾಮಯ್ಯ ಆಪ್ತರಿಗೆ ಹಿನ್ನಡೆಯಾಗಿದೆ. ಅಬ್ದುಲ್ ಜಬ್ಬಾರ್, ನಸೀರ್ ಅಹ್ಮದ್ ವಿರುದ್ಧ ಕ್ರಮ ಕೈಗೊಂಡಿದ್ದು ಮುಸ್ಲಿಂ ಸಮುದಾಯದ ಧರ್ಮಗುರುಗಳ ಕೆಂಗಣ್ಣಿಗೂ ಕಾರಣವಾಗಿದೆ.

**ಕುತೂಹಲ ಕೆರಳಿಸಿದ ಸಿಎಂ ನಡೆ:** ಬೈ ಎಲೆಕ್ಷನ್ ಬಳಿಕ ಜಮೀರ್ ಮೇಲೆಯೂ ಹೈಕಮಾಂಡ್ ಕ್ರಮದ ತೂಗುಗತ್ತಿ ಇದೆ. ಇಂತಹ ಸಂದರ್ಭದಲ್ಲಿ ಸಿಎಂ ಸಿದ್ದರಾಮಯ್ಯ ಅವರ ಮೌನ ಸಾಕಷ್ಟು ಚರ್ಚೆಗೆ ಎಡೆ ಮಾಡಿಕೊಟ್ಟಿದೆ. ಆದರೆ, ಸಿಎಂ ಅವರ ಈ ನಡೆಯ ಹಿಂದೆ ಕೆಲವೊಂದು ಪ್ರಬಲ ಕಾರಣಗಳು ಇವೆ ಎಂಬ ವಿಶ್ಲೇಷಿಲಾಗುತ್ತಿದೆ.

**ಸಮಯ ಬಂದಾಗ ಮಾತಾಡ್ತಾರೆ:** ಸಿಎಂ ಆಪ್ತ ಹಾಗೂ ಸಚಿವ ಜಮೀರ್ ಅಹ್ಮದ್ ಈ ಕುರಿತು ಪ್ರತಿಕ್ರಿಯೆ ನೀಡಿ, ಟಗರು ಎಂದಿಗೂ ಗುಟುರು ಹಾಕುತ್ತದೆ. ಸಿಎಂ ಸಿದ್ದರಾಮಯ್ಯ ಅವರು ಮೊದಲಿಗಿಂತಲೂ ಈಗ ಇನ್ನೂ ಚೆನ್ನಾಗಿದ್ದಾರೆ. ಅವರು ಸಮಯ ಬಂದಾಗ, ಎಲ್ಲವುದನ್ನೂ ಮಾತನಾಡುತ್ತಾರೆ ಎಂದು ಉತ್ತರಿಸಿದ್ದಾರೆ.







### ರಾಹುಲ್‌ಗೆ ಉಲೆಮಾಗಳ ಪತ್ರ

ರಾಜ್ಯಕಾಂಗ್ರೆಸ್‌ನಲ್ಲಿ ಮುಸ್ಲಿಮ್ ಸಮುದಾಯಕ್ಕೆ ತುಂಬಾ ಅನ್ಯಾಯವಾಗತೊಡಗಿದೆ ಎಂದು ಧರ್ಮಗುರುಗಳಾದ ಉಲೆಮಾಗಳು ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿಗೆ ಪತ್ರಬರೆದಿರುವುದು ಚರ್ಚೆಗೆ ಗ್ರಾಸವಾಗಿದೆ. ಅವರ ಪ್ರಕಾರ, ನಮಗೆ ಎಷ್ಟೋ ಆಯ್ಕೆಗಳಿ ದ್ದರೂ, ಕಾಂಗ್ರೆಸ್‌ಬಗ್ಗೆ ನಮಗೆ ಅಭಿಮಾನವಿತ್ತು. ಆದರೆ ಇತ್ತೀಚಿನ ಬೆಳವಣಿಗೆ ನಮ್ಮ ಸಮುದಾಯಕ್ಕೆ ತುಂಬಾ ನೋವುಂಟು ಮಾಡಿದೆ ಎಂದು ವಿವರಿಸಿದ್ದಾರೆ.





### ದುಡುಕಿನ ನಿರ್ಧಾರ ಸಲ್ಲ..!

ಸದ್ಯ ರಾಜ್ಯ ಕಾಂಗ್ರೆಸ್ ನಲ್ಲಿ ನಾಯಕತ್ವ ಬದಲಾವಣೆ ಚರ್ಚೆಗಳು ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ಸಿದ್ದರಾಮಯ್ಯ ದುಡುಕಿನ ತೀರ್ಮಾನ ಕೈಗೊಳ್ಳುವುದು ಉಚಿತವಲ್ಲ. ಗೊಂದಲದ ಪರಿಸ್ಥಿತಿಯ ಲಾಭವನ್ನು ವಿರೋಧಿ ಬಣ ಪಡೆದುಕೊಳ್ಳುವ ಸಾಧ್ಯತೆ ಇದೆ. ಹಾಗಾಗಿ ಸಿದ್ದರಾಮಯ್ಯ ಎಚ್ಚರಿಕೆಯ ಹೆಜ್ಜೆ ಇಡುತ್ತಿದ್ದಾರೆ. ಹೈಕಮಾಂಡ್ ನಾಯಕರಿಗೆ ಸವಾಲು ಹಾಕದೆ ಸುಮ್ಮನಿದ್ದಾರೆ ಎನ್ನುತ್ತಿದೆ ಮೂಲ.

### ಸಿಎಂ ಅವರ ಮೇಲೆ ಮಾಟ..?

ಸಿಎಂ ಅವರ ಮೇಲೆ ಮಾಟ, ಮಂತ್ರ ಅಗಿರಬಹುದು ಅನಿಸ್ತಾ ಇದೆ. ಮನುಷ್ಯರ ಮೇಲೆ ಪರಿಣಾಮ ಆಗಬೇಕು ಅಂ–ದ್ರೆ ಅವರು ಆಸ್ತಿಕರಾಗಿರಬೇಕು ಅಂತ ಇಲ್ಲ. ಸಿಎಂ ಹಾಗೂ ನಾನು ಮಾಟ ಮಂತ್ರದಲ್ಲಿ ನಂಬಿಕೆ ಇಲ್ಲದವರು. ನಾನು ಸಿಎಂ ಅವರು ಅಸಹಾಯಕರು ಅಂತಾ ಹೇಳಿದ ಮೇಲೆ ಅವರು ಕರೆದು ಮಾತನಾಡಿದ್ದಾರೆ. ಗಟ್ಟಿಯಾಗಿ ನಿಲ್ಲಿ ಅಂತ ಹೇಳಿಸಿಕೊಳ್ಳುವಷ್ಟು ಅಸಹಾಯಕತೆ ಸಿಎಂಗೆ ಬಂದಿಲ್ಲ ಎಂದಿದ್ದಾರೆ ಶಾಸಕ ರಾಜಣ್ಣ.

### ಕೈಗೊಂಡಿದ್ದ ಕ್ರಮವೇ ವಾಪಸ್?

ಈ ಹಿಂದೆಯೂ ಹೀಗೆ ಅಮಾನತು ಆಗಿದ್ದವರು ಪಕ್ಷಕ್ಕೆ ವಾಪಸ್ ಆಗಿದ್ದಾರೆ. ಜಬ್ಬಾರ್ ಕೂಡ ಮರಳಬಹುದು. ಸದ್ಯ ಅವರನ್ನು ಹೊರತುಪಡಿಸಿ ಉಳಿದ ಯಾರ ಮೇಲೂ ಕ್ರಮ ಕೈಗೊಂಡಿಲ್ಲ. ಅಬ್ದುಲ್ ಜಬ್ಬಾರ್ ಸೇರಿದಂತೆ ಕೇವಲ ಅಲ್ಪಸಂಖ್ಯಾತ ನಾಯಕರ ಮೇಲಿನ ಕ್ರಮವು ಮುಸ್ಲಿಂ ಮತಗಳ ಮೇಲೆ ಖಂಡಿತ ಪರಿಣಾಮ ಬೀರಲಿದೆ. ಈ ಕಾರಣಕ್ಕೆ ನಾವೆಲ್ಲ ಮಧ್ಯಸ್ಥಿಕೆ ವಹಿಸಿದ್ದೇವೆ ಎಂದು ಸಚಿವ ಸತೀಶ ಜಾರಕಿಹೊಳಿ ಸ್ಪಷ್ಟಪಡಿಸಿದ್ದಾರೆ.



**ಜಗಜ್ಯೋತಿ ಬಸವೇಶ್ವರ ಸೇವಾ ಸಮಿತಿ (ರಿ) ಮಾಕಾ ಲೇಔಟ್ ಕಲಬುರಗಿ ವತಿಯಿಂದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬಾಬುರಾವ ಕೋಬಾಳ್, ಆಕಾಶವಾಣಿ ಕಲಾವಿದ ಸೂರ್ಯಕಾಂತ್ ಡುಮ್ಮಾ, ತಬಲಾವಾದಕ ಪ್ರಶಾಂತ್ ರೇವಯ್ಯ ಅವರಿಗೆ ವಚನಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.**

## ಬಸ್ ಡಿಕ್ಕಿ: ಮಹಿಳೆಯ ಸಾವು

**ಜೇವರಗಿ:** ಪಟ್ಟಣದ ಬಸ್ ನಿಲ್ದಾಣದಲ್ಲಿ ಹಲವು ವರ್ಷಗಳಿಂದ ಕಸ ಗುಡಿಸುತ್ತಿದ್ದ ಮಹಿಳೆಗೆ ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿಯೇ ಮೃತಪಟ್ಟಿದ್ದಾಳೆ. ಮಾನಮ್ಮ ಚಂದ್ರಕಾಂತ್ ಜೇವರ್ಗಿ(50) ಮೃತ ಮಹಿಳೆ. ಬಸ್ ನಿಲ್ದಾಣದಲ್ಲಿ ಕಸ ಹೊಡೆದು ಕಸ ಚೆಲ್ಲಿ ಬರುವಾಗ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಕಾಳಗಿ ಡಿಪೊಗೆ ಸೇರಿದ ಬಸ್ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಬಸ್ ಬೆಂಗಳೂರಿನಿಂದ ಕಲಬುರ್ಗಿ ಕಡೆ ಹೊರಟಿತ್ತು. ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪಿ ಎಸ್ ಐ ಗಜಾನಂದ್ ಬಿರಾದರ್ ತಿಳಿಸಿದ್ದಾರೆ.

## ವ್ಯಾಪಾರಸ್ಥರ ಸಮಸ್ಯೆ ಪರಿಹಾರಕ್ಕೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಬೀದಿ ವ್ಯಾಪಾರಸ್ಥರಿಗೆ ವ್ಯಾಪಾರ ಮಾಡಲು, ಜಾಗದ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿ ನಡೆದಿರುವ ಧರಣಿ ಸತ್ಯಾಗ್ರಹ ಎಂಟನೇ ದಿನಕ್ಕೆ ಕಾಲಿಟ್ಟಿದೆ. ಹೋರಾಟದ ನಡುವೆ ಜಗಜ್ಯೋತಿ ವಿಶ್ವಗುರು ಬಸವಣ್ಣನವರ 893 ನೇ ಜಯಂತಿಯನ್ನು ಆಚರಿಸಲಾಯಿತು. ಜಮಾತೆ ಇಸ್ಲಾಮಿನ ಹಿಂದ ಅಧ್ಯಕ್ಷ ಹುಸೇನ್‌ಸಾಬ್ ಮಾತನಾಡಿ, 12ನೇ ಶತಮಾನದಲ್ಲಿ ಬಸವಣ್ಣನವರು ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಲು ಹೋರಾಡಿದರು. 890 ವರ್ಷ ಕಳೆದರೂ ಜಾತಿ ವ್ಯವಸ್ಥೆ ಇನ್ನೂ ಮುಂದುವರೆದಿದೆ. ಎಲ್ಲ ಜಾತಿ ಧರ್ಮದವರು, ಪ್ರಗತಿಪರರು, ವಿದ್ಯಾವಂತರು ಜಾತಿ ವ್ಯವಸ್ಥೆ ವಿರುದ್ಧ ಹೋರಾಡಬೇಕೆಂದು ಕರೆಕೊಟ್ಟಿದ್ದಾರೆ.

ಬೀದಿಬದಿ ವ್ಯಾಪಾರಸ್ಥರು 16 ತಿಂಗಳಿಗಳಿಂದ ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಶಾಸಕರು ಹಾಗೂ ಜಿಲ್ಲಾಧಿಕಾರಿಗಳು ಬೇಗನೆ ಸಮಸ್ಯೆ ಬಗೆಹರಿಸಬೇಕೆಂದು ಒತ್ತಾಯಿಸಿದ್ದಾರೆ. ವಿದ್ಯುತ್ ಗುತ್ತೇದರ ಸಂಘದ ರಾಜ್ಯ ಉಪಾಧ್ಯಕ್ಷರಾದ ಅನ್ವರ್ ಸಾಬ್ ಮಾತನಾಡಿ, ಪಕ್ಷದ ರಾಜಕಾರಣಿಗಳು ಬೀದಿಬದಿ ವ್ಯಾಪಾರಸ್ಥರ ಸಮಸ್ಯೆಯನ್ನು ಬಗೆಹರಿಸದ್ದಿದ್ದರೆ, ನಗರಸಭೆ ಮತ್ತು ಎಲ್ಲಾ ಚುನಾವಣೆಯಲ್ಲಿ ಸರಿಯಾದ ಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.




# ಸಿಇಟಿ ಪರೀಕ್ಷೆ, ಮಕ್ಕಳೇ ಬೆಸ್ಟ್ ಆಫ್‌ಲಕ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆ (ಯುಜಿಸಿಇಟಿ–2026) ಸಂಬಂಧಿಸಿದಂತೆ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಅವರು ಅಭ್ಯರ್ಥಿಗಳಿಗೆ ಮತ್ತು ಪೋಷಕರಿಗೆ ಕೆಲವು ಪ್ರಮುಖ ಮಾರ್ಗಸೂಚಿಗಳನ್ನು ನೀಡಿದ್ದಾರೆ. ಈ ಬಾರಿಯ ಪರೀಕ್ಷೆಯು ರಾಜ್ಯದಾದ್ಯಂತ 745 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, 3,30,000 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಎಲ್ಲಾ ಅಭ್ಯರ್ಥಿಗಳು ಈಗಾಗಲೇ ಹಾಲ್ ಟಿಕೆಟ್ (ಪ್ರವೇಶಾತಿ ಪತ್ರ) ಡೌನ್ಲೋಡ್ ಮಾಡಿಕೊಂಡಿರಬೇಕು. ಒಂದು ವೇಳೆ ಮಾಡದಿದ್ದರೆ ತಕ್ಷಣವೇ ಮಾಡಿಕೊಳ್ಳಲು ಸೂಚಿಸಲಾಗಿದೆ. ಹಾಲ್ ಟಿಕೆಟ್ ಜತೆಗೆ ನೀಡಲಾಗಿರುವ ಸೂಚನೆಗಳನ್ನು ಕನಿಷ್ಠ 10 ನಿಮಿಷಗಳ ಕಾಲ ಗಮನವಿಟ್ಟು ಓದಬೇಕು ಎಂದಿದ್ದಾರೆ.



### ಬಯೋಮೆಟ್ರಿಕ್, ಫೋಟೊ ಪರಿಶೀಲನೆ

ಪರೀಕ್ಷಾ ಕೇಂದ್ರದಲ್ಲಿ ಅಪ್ಲೋಡ್ ಮಾಡಲಾದ ಫೋಟೋ ಮತ್ತು ಲೈವ್ ಫೋಟೋವನ್ನು ಕ್ಯೂಆರ್ ಕೋಡ್ ಸ್ಕ್ಯಾನ್ ಮೂಲಕ ಪರಿಶೀಲಿಸಲಾಗುತ್ತದೆ. ಬದಲಿ ಅಭ್ಯರ್ಥಿಗಳನ್ನು ತಡೆಯಲು ಈ ಕ್ರಮ ಕೈಗೊಳ್ಳಲಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಸ್ವಲ್ಪ ಬೇಗ ತಲುಪಬೇಕು ಎಂದು ವಿವರಿಸಿದ್ದಾರೆ.

ಅಭ್ಯರ್ಥಿಗಳ ಅನುಕೂಲಕ್ಕಾಗಿ ಪ್ರಾಕ್ಟೀಸ್ ಓಎಂಆರ್ ಶೀಟ್ ಅನ್ನು ವೆಬ್‌ಸೈಟ್‌ನಲ್ಲಿ ನೀಡಲಾಗಿದೆ. ಪರೀಕ್ಷೆಯ ದಿನ ಗೊಂದಲವಾಗದಂತೆ ಮೊದಲೇ ಅಭ್ಯಾಸ ಮಾಡಲು ಸಲಹೆ ನೀಡಲಾಗಿದೆ. ಆದರೆ, ಈ ಪ್ರಾಕ್ಟೀಸ್ ಓಎಂಆರ್ ಶೀಟ್ ಅನ್ನು ಪರೀಕ್ಷಾ ಕೇಂದ್ರಕ್ಕೆ ತೆಗೆದುಕೊಂಡು ಹೋಗುವ ಅಗತ್ಯವಿಲ್ಲ. ಪರೀಕ್ಷೆಯಲ್ಲಿ ಪಾರದರ್ಶಕತೆ ಕಾಪಾಡಲು ಸರಳವಾದ ಡ್ರೆಸ್ ಕೋಡ್ ಅನುಸರಿಸಬೇಕು ಎಂದು ಸೂಚಿಸಿದ್ದಾರೆ.

**ಇವುಗಳಿಗೆ ಅವಕಾಶ ಇಲ್ಲ:** ಫುಲ್ ಸ್ಲೀವ್ ಶರ್ಟ್, ಕಿವಿ ಮುಚ್ಚುವಂತಹ ಬಟ್ಟೆಗಳು, ದೊಡ್ಡದಾದ ಲೆದರ್ ಶೂಗಳು ಮತ್ತು ಯಾವುದೇ ಎಲೆಕ್ಟ್ರಾನಿಕ್ ಉಪಕರಣಗಳಿಗೆ ಅವಕಾಶವಿಲ್ಲ. ಅಭ್ಯರ್ಥಿಗಳು ಡ್ರೆಸ್ ಕೋಡ್ ಬಗ್ಗೆ ಅನಗತ್ಯ ಟೆನ್ಶನ್ ಮಾಡಿಕೊಳ್ಳದೆ ಸರಳವಾಗಿ ಪರೀಕ್ಷೆಗೆ ಹಾಜರಾಗಲು ಕೋರಲಾಗಿದೆ.

## ನಮ್ಮ ಅಭಿವೃದ್ಧಿ ಜನರಿಗೆ ಮುಟ್ಟಿದ. ಬಿಜೆಪಿಯ ಅಪಪ್ರಚಾರಕ್ಕೆ ಪ್ರಗತಿ ಕಾರ್ಯಗಳೇ ಉತ್ತರ: ಸಿ.ಎಂ ಸಿದ್ದರಾಮಯ್ಯ

# ಪಟ್ಟದ್ದೇವರ ಕಾರ್ಯ ಅವಿಸ್ಮರಣೀಯ



• **ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ**

ಸರಳ ಸಜ್ಜನಿಕೆಯ, ವಿನಯಶೀಲ ಶ್ರೇಷ್ಠರಾದ ನಾಡೋಜ ಡಾ। ಬಸವಲಿಂಗ ಪಟ್ಟದ್ದೇವರ ಕಾರ್ಯಗಳು ನಮ್ಮೆಲ್ಲರಿಗೂ ಮಾದರಿಯಾಗಿವೆ ಎಂದು ಶ್ರೀಮುರುಘಾಮಠ ಧಾರವಾಡದ ಡಾ। ಮಲ್ಲಿಕಾರ್ಜುನ ಮಹಾಸ್ವಾಮಿಗಳು ಪ್ರತಿಪಾದಿಸಿದರು. ಪಟ್ಟಣದ ಚನ್ನಬಸವಾಶ್ರಮದಲ್ಲಿ ಲಿಂ. ಡಾ।ಚನ್ನಬಸವ ಪಟ್ಟದ್ದೇವರ 27ನೇ ಸ್ಮರಣೊತ್ಸವ ಹಾಗು ವಚನ ಜಾತ್ರೆ 2026 ರ ನಿಮಿತ್ಯ ಆಯೋಜಿಸಿದ್ದ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮದ ದಿವ್ಯ ಸನ್ನಿಧಾನ ವಹಿಸಿ ಅವರು ಮಾತನಾಡಿದರು. ಶ್ರೀಗಳ ಅಂತರಂಗದಲ್ಲಿ ಮನುಕುಲದ ಸೃಷ್ಠಿ ಸಾಕಷ್ಟಿದೆ, ಆಚಾರ, ವಿಚಾರ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡ ಶ್ರೇಷ್ಠ ಪಟ್ಟಾಧ್ಯಕ್ಷರು ಅವರಾಗಿದ್ದಾರೆ. ತಮ್ಮ ಶಿಕ್ಷಣ ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳು ರಾಷ್ಟ್ರೀಯ ಶ್ರೇಷ್ಠ ಸಂಶೋಧಕರಾಗಿ ಹೊರಹೊಮ್ಮಬೇಕು ಎನ್ನುವ ದೂರ ದೃಷ್ಠಿ ಅವರದ್ದಾಗಿದೆ. ಬಸವಲಿಂಗ ಪಟ್ಟದ್ದೇವರಿಗೆ ಉತ್ತಮ ಉತ್ತರಾಧಿಕಾರಿಗಳಾಗಿ ಶ್ರೀ ಗುರುಬಸವ ಪಟ್ಟದ್ದೇವರು ಸಿಕ್ಕಿದ್ದು, ಈ ಮಠದ ಪರಂಪರೆ ಶ್ರೇಷ್ಠತೆಗೆ ಸಾಕ್ಷಿಯಾಗಿದೆ ಎಂದು ಹೇಳಿದರು. ಬೆಂಗಳೂರಿನ ಹಿರಿಯ ಚಿಂತಕ ಡಾ। ಗೋ.ರು.ಚನ್ನಬಸಪ್ಪ ರವರು ಗ್ರಂಥ ಲೋಕಾರ್ಪಣೆಮಾಡಿ ಮಾತನಾಡಿದರು. ಅಥಣಿಯ ಶ್ರೀ ಪ್ರಭುಚನ್ನಬಸವ ಮಹಾಸ್ವಾಮಿಗಳು ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿರಕ್ತಮಠ ಸೇಗುಣಸಿಯ ಶ್ರೀ ಡಾ। ಮಾಹಾಂತಪ್ರಭು ಮಹಾಸ್ವಾಮಿಗಳು ಅನುಭಾವನುಡಿ ನುಡಿದರು. ನಾಡೋಜ ಡಾ।ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಶ್ರೀ ಗುರುಬಸವ ಪಟ್ಟದ್ದೇವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಳಗಾವಿ ರುದ್ರಾಕ್ಷಿಮಠದ ಡಾ।ಅಲ್ಲಮಪ್ರಭು ಮಹಾಸ್ವಾಮಿಗಳು, ಪಾಂಡೋಮಟ್ಟಿ ಕಮ್ಮತ್ತಹಳ್ಳಿಯ ಡಾ।ಗುರುಬಸವ ಮಹಾಸ್ವಾಮಿಗಳು, ಚಿತ್ರದುರ್ಗದ ಬಸವಕುಮಾರ ಮಹಾಸ್ವಾಮಿಗಳು, ಗುಳೇದಗುಡ್ಡದ ಜಗದ್ಗುರು ಗುರುಸಿದ್ದ ಮಹಾಸ್ವಾಮಿಗಳು, ಹುಬ್ಬಳ್ಳಿಯ ಶ್ರೀ ಅಭಿನವ ಸಿದ್ಧಾರೂಢ ಮಹಾಸೌಅಮಿಗಳು, ಬಸವನಬಾಗೇವಾಡಿಯ ಶ್ರೀ ಪ್ರಸಿದ್ಧಲಿಂಗ ಸ್ವಾಮೀಜಿ, ಬೀಳಗಿಯ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮೀಜಿ ಸನ್ನಿಧಾನ ವಹಿಸಿದ್ದರು. ಕೃಷಿ ಸಚಿವರ ಆಪ್ತ ಕಾರ್ಯದರ್ಶಿ ಪ್ರಭಾಕರ ಎಚ್ ಬಸವಗುರುಪೂಜೆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಡಾ। ಸಂತೋಷಹಾನಗಲ್, ಡಾ। ಕೆ.ರವಿಂದ್ರನಾಥ, ಪ್ರಕಾಶ ಗಿರಮಲ್ಲನವರ, ಡಾ। ಕಲ್ಯಾಣರಾವ ಪಾಟೀಲ, ಗುರುಪ್ರಸಾದ ಬಿರಾದಾರ, ಬಸವರಾಜ ಖಂಡೇರಾವ, ರಜನಿಕಾಂತ ಚವ್ಹಾಣ, ವಿರಶೆಟ್ಟಿ ಬಾವುಗೆ, ಡಾ।ರಘುಶಂಕ ಭಾಂತಬ್ರಾ, ಸಚಿನ ಪರಬ, ಮಹೇಶ ಬನ್ನಾಳೆ ಉಪಸ್ಥಿತರಿದ್ದರು. ಇದೇವೇಳೆ ನಾಡೋಜ ಡಾ। ಬಸವಲಿಂಗ ಪಟ್ಟದ್ದೇವರು ವಿರಚಿತ ಶರಣಲೋಕ, ಅಮೃತ ಮಹೋತ್ಸವ ನೆನಪಿ ಸಂಪುಟ ಲಿಂಗಾಯತ ಸಂಕಥನ, ಡಾ। ಕಲ್ಯಾಣರಾವ ಪಾಟೀಲ ಸಂಪಾದಕತ್ವದ ಕಲ್ಯಾಣ ಕಾರುಣ್ಯ, ಮಹೇಶ ಬನ್ನಾಳೆ ವಿರಚಿತ ತ್ಯಾಗಮೂರ್ತಿ ಪರಮಪೂಜ್ಯ ಡಾ। ಬಸವಲಿಂಗ ಪಟ್ಟದ್ದೇವರು, ಡಾ।ಬಸವರಾಜ ಸಬರದ ವಿರಚಿತ ನಾಥರು ಶರಣರು ಸೂಫಿಗಳು, ಡಾ। ಸೋಮನಾಥ ಯಾಳವಾರ ವಿರಚಿತ ಸಾವಧಾನಿ, ಡಾ। ರಘುಶಂಕ ಭಾತಂಬ್ರಾ ವಿರಚಿತ ಬಸವಲೇಖ, ಗುರುನಾಥ ರಾಜಗೀರಾ ವಿರಚಿತ ಸರ್ವೆಜನೋ ಪುಸ್ತಕೋ ಭವಂತು ಗ್ರಂಥ ಲೋಕಾರ್ಪಣೆ ಮಾಡಲಾಯಿತು.

ಡಾ। ಮಹೇಶಕುಮಾರ ಬಡಿಗೇರ ಮತ್ತು ಕವಿತಾ ರಾಜಕುಮಾರ ಸ್ವಾಮಿ ಯವರಿಂದ ವಚನ ಸಂಗೀತ ನಡೆಯಿತು. ನವಲಿಂಗ ಪಾಟೀಲ ನಿರೂಪಿಸಿದರು. ನಾಗಯ್ಯಾ ಸ್ವಾಮಿ ವಂದಿಸಿದರು.

# ಮಹಾತ್ಮಾ ಬಸವೇಶ್ವರ ಜಾತ್ರಾ ಅದ್ದೂರಿ ಬೆಳ್ಳಿ ತೊಟ್ಟಿಲು ಮೆರವಣಿಗೆ



• **ಮಲ್ಲಮ್ಮ ನುಡಿ ವಾರ್ತೆ.ಬಸವಕಲ್ಯಾಣ**

ಬಸವಾದಿ ಶಿವಶರಣರ ನಾಡಿನಲ್ಲಿ ವಿಶ್ವಗುರು ಬಸವಣ್ಣನವರ ಕಾಯಕ ಭೂಮಿಯಲ್ಲಿ ಮಹಾತ್ಮಾ ಬಸವೇಶ್ವರರ 76. ನೇಯ ಜಾತ್ರಾ ಮಹೋತ್ಸವ ನಿಮಿತ್ತವಾಗಿ ಸೋಮವಾರ ಇಲ್ಲಿನ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಬಸವಣ್ಣನವರ ಮೂರ್ತಿಗೆ ಅಷ್ಟಗಂಧ ಪೂಜೆ ನಂತರ ಅಕ್ಕನ ಬಳಗದಿಂದ ವಚನ ಪಠಣ ನಂತರ ಬಸವಣ್ಣನವರ ಬೆಳ್ಳಿ ತೊಟ್ಟಿಲು ಮೆರವಣಿಗೆ ಚಾಲನೆ ನೀಡಲಾಯಿತು. ಇದೇ ಸಂದರ್ಭದಲ್ಲಿ ಸಹಾಯಕ ಆಯುಕ್ತರಾದ ಪ್ರಕಾಶ ಕುದರೆ. ಹುಲಸೂರಿನ ಪೂಜ್ಯ ಶ್ರೀ ಡಾ. ಶಿವಾನಂದ ಮಹಾಸ್ವಾಮಿಜಿ. ಪೂಜ್ಯ ಶ್ರೀ ಸಿದ್ದ ಬಸವ ಕಬೀರ ಮಹಾಸ್ವಾಮಿಜಿ. ಹರಳಯ್ಯಗವಿಯ ಪೂಜ್ಯ ಶ್ರೀ ಡಾ. ಗಂಗಾಂಬಿಕಾ ಅಕ್ಕ . ಸತ್ಯಕ್ಕ ತಾಯಿ .

ಸಾವಿತ್ರಿ ಶರಣು ಸಲಗರ. ನಿರ್ಮಲಾ ಶಿವಣಕರ್. ವಿಧಾನ ಪರಿಷತ್ ಸದಸ್ಯ ಎಂ. ಜಿ. ಮುಳೆ. ಬಿಡಿಪಿಸಿ ಅಧ್ಯಕ್ಷರಾದ ಅನೀಲ ಕುಮಾರ ರಗಟೆ. ಉಪಾಧ್ಯಕ್ಷರಾದ ಮಲ್ಲಿಕಾರ್ಜುನ ಕುರಕೋಟೆ. ಕೋಶಾಧ್ಯಕ್ಷರಾದ ಜಗನ್ನಾಥ ಖುಬಾ. ಕಾರ್ಯದರ್ಶಿಗಳಾದ ಅಶೋಕ ನಾಗರಳೆ. ಸಹ ಕಾರ್ಯದರ್ಶಿ ಬಸವರಾಜ ಬಾಲಕಿಲೆ ಹಾಗೂ ಸುನೀಲರಾಯವಾಡೆ. ನಿರ್ದೇಶಕರಾದ ಬಸವರಾಜ ಕೊರಕೆ. ಇರಣ್ಣಾಹಲಶೆಟ್ಟಿ. ಬದರಿನಾಥ ಪಾಟೀಲ. ವಿವೇಕಾನಂದ ಹೊದಲೂರೆ. ಬಸವರಾಜ ತೆ–ಂಡಾರೆ. ಮಲ್ಲಿಕಾರ್ಜುನ ಚಿರಡೆ. ಸುನೀಲ ಕುಮಾರ್ ಹೊಳಕುಂದೆ. ರಾಜಕುಮಾರ ಹೊಳಕುಂದೆ. ಪುಷ್ಪಾವತಿ ಮಾಮಾ. ವಿಶ್ವಸ್ಥ ಸಮಿತಿಯ ಅಧ್ಯಕ್ಷರಾದ ಶಶಿಕಾಂತ ದುರ್ಗೆ.

ಉಪಾಧ್ಯಕ್ಷರಾದ ಡಾ. ಜಿ. ಎಸ್. ಭುರಳೆ. ಕಾರ್ಯದರ್ಶಿ ನಾಗಯ್ಯಸ್ವಾಮಿ. ಕೋಶಾಧ್ಯಕ್ಷರಾದ ಶಿವರಾಜ ಶಾಶಟೆ. ಬಸವರಾಜ ಪಾಟೀಲ. ಸೋಮಶೇಖರ ವಸ್ತ್ರದ. ಮಲ್ಲಿಕಾರ್ಜುನ ಮಂಠಾಳೆ. ಮಾಜಿ ಶಾಸಕರಾದ ಮಲ್ಲಿಕಾರ್ಜುನ ಎಸ್ ಖೂಬಾ. ಪ್ರದೀಪ್ ವಾತಡೆ. ಅನೀಲ ಬುಸಾರೆ. ಸೂರ್ಯಕಾಂತ್ ಚಿಲ್ಲಾಬಟೆ. ವಿಜಯಕುಮಾರ ಮಂಠಾಳೆ. ಕೇಶಪಾ ಬಿರಾದಾರ. ಶಿವಕುಮಾರ ಬಿರಾದಾರ.

ನಂತರ ಭವ್ಯವಾದ ಮೆರವಣಿಗೆ ಯಲ್ಲಿ ಶರಣರ ವೇಷಧಾರಿಗಳಾದ ವಿಶ್ವಗುರು ಬಸವಣ್ಣನವರು. ಅಕ್ಕಮಹಾದೇವಿ. ಸೇರಿದಂತೆ ಶರಣರು ಮೆರವಣಿಗೆ ಶೋಭೆ ತಂದುಕೊಟ್ಟಿತು. ಅಲ್ಲದೆ ವಿವಿಧ ಕಲಾ ತಂಡಗಳು ವಾದ್ಯಗಳು ಕೋಲಾಟ. ಮಹಿಳೆಯರಿಂದ ಡೋಳ. ಆಟ. ವಿಧ್ಯಾರ್ಥಿಗಳಿಂದ ವಚನ ಗಾಯನ ನೃತ್ಯ ನಡೆಯಿತು. ವೈಭವದೊಂದಿದ ಸಾಗಿ ಬಂದ ಇ ಮೆರವಣಿಗೆಯು ಶ್ರೀ ಬಸವೇಶ್ವರ ದೇವಸ್ಥಾನ ದಿಂದ ಐತಿಹಾಸಿಕ ಕೋಟೆಯ ಮುಖಾಂತರ ಗಾಂಧಿ ಚೌಕ. ಬಸವೇಶ್ವರ ಚೌಕ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಚೌಕ ಮುಖಾಂತರ ಶಿವಶರಣ ಹರಳಯ್ಯ ವೃತ್ತದವರೆಗೆ ತಲುಪಿ ಮರಳಿ ಶ್ರೀ ಬಸವೇಶ್ವರ ದೇವಸ್ಥಾನಕ್ಕೆ ತಲುಪಿತು. ಈ ಮೆರವಣಿಗೆಯಲ್ಲಿ ಅನೇಕರು ಬಾಗವಹಿಸಿದರು.

# ಸಂಪಾದಕೀಯ

**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೋ: 9845028349**



## ಅಕಾಲಿಕ ಮಳೆ ಬಿದಿಗೆ ಬಂದ ಮಾವು ಬೆಳೆಗಾರರು ಸರ್ಕಾರ ಸ್ಪಂದಿಸಲಿ

**ಅಕಾಲಿಕ ಮಳೆಯ ಅಟ್ಟಹಾಸದಿಂದ ರಾಜ್ಯದ ಹಲವು ಭಾಗಗಳಲ್ಲಿ ಮಾವು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೂ ಬಿಟ್ಟಿದ್ದ ಮಾವಿನ ಮರಗಳು ಮಳೆಯ ತೀವ್ರತೆಯಿಂದ ಹಾನಿಗೊಳಗಾಗಿದ್ದು, ಫಲಧಾರಣೆ ಕುಂಠಿತವಾಗುವ ಭೀತಿ ಎದುರಾಗಿದೆ. ಕೆಲವೆಡೆ ಗಾಳಿ–ಮಳೆ ಸೇರಿ ಬಿದ್ದ ಪರಿಣಾಮ ಕಾಯಿ ಉದುರುವಿಕೆ ಹೆಚ್ಚಾಗಿ, ಬೆಳೆಗಾರರು ಆರ್ಥಿಕ ನಷ್ಟ ಅನುಭವಿಸುವಂತಾಗಿದೆ.**

**ಮಾವು ಬೆಳೆಗಾರರು ವರ್ಷಪೂರ್ತಿ ಶ್ರಮಿಸಿ ಉತ್ತಮ ಬೆಳೆಯನ್ನು ನಿರೀಕ್ಷಿಸುತ್ತಾರೆ. ಆದರೆ ಇಂತಹ ಅಕಾಲಿಕ ಮಳೆ ಅವರ ಕನಸುಗಳನ್ನು ನುಚ್ಚುನೂರಾಗಿಸುತ್ತದೆ. ಬೆಳೆ ಹಾನಿಯಾದಾಗ ತಕ್ಷಣವೇ ಸರ್ಕಾರ ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು ಅತ್ಯಂತ ಅಗತ್ಯ. ಹಾನಿಯ ಸಮೀಕ್ಷೆಯನ್ನು ತ್ವರಿತವಾಗಿ ನಡೆಸಿ, ನಷ್ಟಪರಿಹಾರವನ್ನು ವಿಳಂಬವಿಲ್ಲದೆ ರೈತರಿಗೆ ನೀಡಬೇಕು.**

**ಇದೇ ವೇಳೆ ಬೆಳೆ ವಿಮೆ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದು, ಎಲ್ಲಾ ರೈತರಿಗೆ ಅದರ ಲಾಭ ತಲುಪುವಂತೆ ಮಾಡಬೇಕು. ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ರೈತರಿಗೆ ಅಗತ್ಯ ಮಾರ್ಗದರ್ಶನ ನೀಡಬೇಕು. ಭವಿಷ್ಯದಲ್ಲಿ ಇಂತಹ ಅನಾಹುತಗಳಿಂದ ರಕ್ಷಣೆ ಪಡೆಯಲು ವಿಜ್ಞಾನಾಧಾರಿತ ಕೃಷಿ ವಿಧಾನಗಳ ಬಗ್ಗೆ ಜಾಗೃತಿ ಮೂಡಿಸುವುದು ಕೂಡ ಮುಖ್ಯ.**

**ರೈತರು ದೇಶದ ಆಧಾರಸ್ತಂಭರು. ಅವರ ಸಂಕಷ್ಟಕ್ಕೆ ಸರ್ಕಾರ ಹಾಗೂ ಸಂಬಂಧಿತ ಇಲಾಖೆ ತಕ್ಷಣ ಸ್ಪಂದಿಸಿ, ಬೆಂಬಲ ನೀಡಿದಾಗ ಮಾತ್ರ ಕೃಷಿ ಕ್ಷೇತ್ರದಲ್ಲಿ ವಿಶ್ವಾಸ ಉಳಿಯುತ್ತದೆ. ಆದ್ದರಿಂದ, ಅಕಾಲಿಕ ಮಳೆಯಿಂದ ಸಂಕಷ್ಟಕ್ಕೆ ಸಿಲುಕಿರುವ ಮಾವು ಬೆಳೆಗಾರರ ನೆರವಿಗೆ ಸರ್ಕಾರ ತಕ್ಷಣ ಮುಂದಾಗಬೇಕು.**

# ವಿದ್ಯುತ್ ವ್ಯತ್ಯಯ ಇಂದು

ಬಳ್ಳಾರಿ,ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–2 ರ ವ್ಯಾಪ್ತಿಯ ಶ್ರೀಧರಗಡ್ಡೆ ವಿದ್ಯುತ್ ಕೇಂದ್ರ ನಿರ್ವಹಣೆ ಕಾರ್ಯವನ್ನು ಕೈಗೊಳ್ಳುತ್ತಿರುವುರಿಂದ ಏ.22 ರಂದು ಬೆಳಿಗ್ಗೆ 09 ರಿಂದ ಸಂಜೆ 06 ಗಂಟೆಯವರೆಗೆ ಎಫ್–6 ವ್ಯಾಪ್ತಿಯ ಪ್ರದೇಶಗಳಾದ ತಾಳೂರು ರೋಡ್, ಸ್ನೇಹ ಕಾಲೋನಿ, ಶ್ರೀನಗರ, ರೇಣುಕಾ ನಗರ, ಭಗತ್‌ಸಿಂಗ್ ನಗರ, ಕನ್ನಡ ನಗರ, ಮಹಾನಂದಿ ಕೊಟ್ಟಂ, ಪಾರ್ವತಿ ನಗರ, ರಾಮ ನಗರ, ಪಾರ್ವತಿ ನಗರ, ಬಾಲಾಜಿ ಕಾಲೋನಿ, ಗಂಗಮ್ಮ ಕಾಲೋನಿ, ಜಿಲ್ಲಾ ಕೋರ್ಟ್ ಸಂಕೀರ್ಣ ಪ್ರದೇಶ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಮಹಾತ್ಮಾ ಶ್ರೀ ಬಸವೇಶ್ವರ ಜಾತ್ರಾ

# ಪಲ್ಲಕ್ಕಿ ಮಹೋತ್ಸವಕೆ ಶ್ರೀಗಳು ಚಾಲನೆ



• **ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ**

ಇಲ್ಲಿನ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ವಿಶ್ವಗುರು ಶ್ರೀ ಬಸವಣ್ಣನವರ ಜಾತ್ರಾಮಹೋತ್ಸವ ನಿಮಿತ್ತ ಹಾರಕೂಡದ ಸಂಸ್ಥಾನ ಹಿರೇಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಡಾ ಚನ್ನವೀರ ಶಿವಾಚಾರ್ಯರು ಜಗಜ್ಯೋತಿ ಶ್ರೀ ಬಸವೇಶ್ವರ ಪಲ್ಲಕ್ಕಿಗೆ ಪೂಜೆ ಸಲ್ಲಿಸಿ. ಪಲ್ಲಕಿ ಮಹೋತ್ಸವಕೆ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಬಿಡಿಪಿಸಿ ಅಧ್ಯಕ್ಷರಾದ ಅನೀಲ ಕುಮಾರ ರಗಟೆ. ಉಪಾಧ್ಯಕ್ಷರಾದ ಮಲ್ಲಿಕಾರ್ಜುನ ಕುರಕೋಟೆ. ಕೋಶಾಧ್ಯಕ್ಷರಾದ ಜಗನ್ನಾಥ ಖುಬಾ. ಕಾರ್ಯದರ್ಶಿಗಳಾದ ಅಶೋಕ ನಾಗರಾಳೆ . ಸಹ ಕಾರ್ಯದರ್ಶಿ ಬಸವರಾಜ ಬಾಲಕಿಲೆ ಹಾಗೂ ಸುನೀಲ ರಾಯವಾಡೆ. ನಿರ್ದೇಶಕರಾದ ಬಸವರಾಜ ಕೊರಕೆ.

ಇರಣ್ಣಾಹಲಶೆಟ್ಟಿ. ಬದರಿನಾಥ ಪಾಟೀಲ. ವಿವೇಕಾನಂದ ಹೊದಲೂರೆ. ಬಸವರಾಜ ತೆ–ಂಡಾರೆ. ಮಲ್ಲಿಕಾರ್ಜುನ ಚಿರಡೆ. ಸುನೀಲ ಕುಮಾರ್ ಹೊಳಕುಂದೆ. ರಾಜಕುಮಾರ ಹೊಳಕುಂದೆ. ಪುಷ್ಪಾವತಿ ಮಾಮಾ. ವಿಶ್ವಸ್ಥ ಸಮಿತಿಯ ಅಧ್ಯಕ್ಷರಾದ ಶಶಿಕಾಂತ ದುರ್ಗೆ. ಉಪಾಧ್ಯಕ್ಷರಾದ ಡಾ. ಜಿ. ಎಸ್. ಭುರಳೆ. ಕಾರ್ಯದರ್ಶಿ ನಾಗಯ್ಯಸ್ವಾಮಿ. ಕೋಶಾಧ್ಯಕ್ಷರಾದ ಶಿವರಾಜ ಶಾಶಟೆ. ಬಸವರಾಜ ಪಾಟೀಲ.

ಸೋಮಶೇಖರ ವಸ್ತ್ರದ. ಮಲ್ಲಿಕಾರ್ಜುನ ಮಂಠಾಳೆ. ಬಿಕೆಡಿಬಿ ಆಯುಕ್ತರಾದ ಜಗನ್ನಾಥ್ ರೆಡ್ಡಿ ಹಾಗೂ ಪ್ರದೀಪ್ ವಾತಡೆ. ವಿಜಯಕುಮಾರ ಮಂಠಾಳೆ. ಶರಣು ದುರ್ಗೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಪಿಕೆಪಿಎಸ್: ಬಸವಣ್ಣನವರ ಜಯಂತಿ




• **ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ**

ತಾಲೂಕಿನ ಮುತ್ತಂಗಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯಾಲಯದಲ್ಲಿ ಸೋಮವಾರ ಜಗಜ್ಯೋತಿ ವಿಶ್ವಗುರು ಬಸವಣ್ಣನವರ 893ನೇ ಜಯಂತಿಯನ್ನು ಅತ್ಯಂತ ಸಡಗರ ಮತ್ತು ಭಕ್ತಿಯಿಂದ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಬಸವಣ್ಣನವರ ಭಾವಚಿತ್ರಕ್ಕೆ ಸಂಘದ ಅಧ್ಯಕ್ಷ ರಾಚಪ್ಪ ಸಾದಾ ಪೂಜೆ ಸಲ್ಲಿಸಿ ಮಾತನಾಡಿದ ಅವರು, "ಕಾಯಕವೇ ಕೈಲಾಸ" ಎಂಬ

ತತ್ವದಡಿ ಸಮಾನತೆಯ ಸಮಾಜ ನಿರ್ಮಿಸಲು ಶ್ರಮಿಸಿದ ವಿಶ್ವಗುರು ಬಸವಣ್ಣನವರ ವಿಚಾರಧಾರೆಗಳು

ಇಂದಿನ ಸಮಾಜಕ್ಕೆ ಅತ್ಯಂತ ಅವಶ್ಯಕವಾಗಿವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಈ ಸಂದರ್ಭದಲ್ಲಿ ಸಂಘದ ಮುಖ್ಯ ಕಾರ್ಯನಿರ್ವಾಹಕ ರವಿಕುಮಾರ್ ಬಿರಾದಾರ್, ನಿರ್ದೇಶಕ ಇರಷಾದ್ ಅಲಿ ಮಾಡಗಿ, ಸಿಬ್ಬಂದಿಗಳಾದ ಅಮರ ಪಂಚಾಳ, ವಿಜಯಕುಮಾರ ಏಖೇಳ್ಳಿ, ಶ್ರೀಮಂತ ಸಿರಕಟನಳ್ಳಿ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಬಸವಕಲ್ಯಾಣ : ಇಲ್ಲಿನ ಡಾ ಅಂಬೇಡ್ಕರ್ ಸ್ವತಂತ್ರ ಪದವಿ ಪೂರ್ವ ಕಾಲೇಜು ಬಸವಕಲ್ಯಾಣದಲ್ಲಿ ವಿಶ್ವ ಗುರು, ಸಾಂಸ್ಕೃತಿಕ ನಾಯಕ, ಮಹಾತ್ಮ ಬಸವೇಶ್ವರ ರವರ ಜಯಂತಿ ಅಂಗವಾಗಿ ಭಾವಚಿತ್ರಕ್ಕೆ ರವೀಂದ್ರ ಗಾಯಕವಾಡ ಅವರು ಪೂಜೆ ಸಲ್ಲಿಸಿದರು.ಈ ಸಂದರ್ಭದಲ್ಲಿ ಪ್ರಾಂಶುಪಾಲರಾದ ಡಾ. ಜೈಶೇನಪ್ರಸಾದ, ನಿತ್ಯಾನಂದ ಮಂಠಾಳಕರ್, ಗಣೇಶ, ಶಿಲ್ಪಾ ಕಾಲೇಬಾಗ್, ದೀಪಕ ಮೋರೆ, ಪಾಂಡುರಂಗ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ಗ್ಯಾಸ ಹಾಹಾಕಾರ; ವಾರ ಕಳೆದರೂ ತೆರೆಯದ ಏಜೆನ್ಸಿ




• **ಮಲ್ಲಮ್ಮ ನುಡಿ ವಾರ್ತೆ, ಬೀದರ**

ಜಿಲ್ಲೆಯ ಕಮಲನಗರ ಪಟ್ಟಣದಲ್ಲಿ ಸಾರ್ವಜನಿಕರಿಗೆ ಈಗ ಅಡುಗೆ ಮಾಡುವುದಕ್ಕಿಂತ ಹೆಚ್ಚಾಗಿ ಗ್ಯಾಸ್ ಸಿಲಿಂಡರ್ ಪಡೆಯುವುದೇ ದೊಡ್ಡ ಸವಾಲಾಗಿ ಪರಿಣಮಿಸಿದೆ. ಕಳೆದ ಒಂದು ವಾರದಿಂದ ಇಂಡೇನ್ ಗ್ಯಾಸ್ ವಿತರಣಾ ಕೇಂದ್ರವು ಬಾಗಿಲು ತೆರೆಯದ ಕಾರಣ, ಗ್ರಾಹಕರು ಬೀದಿಗೆ ಬೀಳುವಂತಾಗಿದೆ.

ಕಮಲನಗರ ಪಟ್ಟಣದ ಮುಖ್ಯ ಭಾಗದಲ್ಲಿರುವ ಇಂಡೇನ್ ಗ್ಯಾಸ್ ಏಜೆನ್ಸಿಯು ಕಳೆದ ಎಂಟು ದಿನಗಳಿಂದ ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಮುಂಜಾನೆಯೇ ದೂರದ ಹಳ್ಳಿಗಳಿಂದ ಮತ್ತು ಪಟ್ಟಣದ ವಿವಿಧ ವಾರ್ಡ್‌ಗಳಿಂದ ಖಾಲಿ ಸಿಲಿಂಡರ್ ಹಿಡಿದು ಬರುವ ಜನರು, ದಿನವಿಡೀ ಕಾಯ್ದು ಸಂಜೆ ಬರಿಗೈಲಿ ಮನೆಗೆ ಮರಳುತ್ತಿದ್ದಾರೆ.

> **"ನಾವು ಕಳೆದ 10 ದಿನಗಳಿಂದ ಇಲ್ಲಿಗೆ ಬರುತ್ತಿದ್ದೇವೆ. ಯಾರೂ ಸರಿಯಾದ ಉತ್ತರ ನೀಡುತ್ತಿಲ್ಲ. ಅಡುಗೆ ಮಾಡಲು ಗ್ಯಾಸ್ ಇಲ್ಲದೆ ಮನೆಯಲ್ಲಿ ಒಲೆ ಹಚ್ಚುವಂತಾಗಿದೆ. ಅಧಿಕಾರಿಗಳು ತಕ್ಷಣ ಗಮನ ಹರಿಸಬೇಕು.**
>
> **ಶಾಂತಕುಮಾರ ಬಿರಾದಾರ**
> **ಸ್ಥಳೀಯ ಗ್ರಾಹಕರು.**

**ಗ್ರಾಹಕರ ಪರದಾಟ:**

ವೃದ್ಧರು, ಮಹಿಳೆಯರು ಮತ್ತು ಕೂಲಿ ಕಾರ್ಮಿಕರು ಕೆಲಸ ಬಿಟ್ಟು ಗ್ಯಾಸ್ ಏಜೆನ್ಸಿಯ ಮುಂದೆ ಗಂಟೆಗಟ್ಟಲೆ ಬಿಸಿಲಿನಲ್ಲಿ ನಿಲ್ಲುತ್ತಿದ್ದಾರೆ.

ಮಾಹಿತಿಯ ಕೊರತೆ: ಅಂಗಡಿ ಏಕೆ ತೆರೆಯುತ್ತಿಲ್ಲ? ಯಾವಾಗ ತೆರೆಯುತ್ತದೆ? ಎಂಬ ಬಗ್ಗೆ ಯಾವುದೇ ಅಧಿಕೃತ ಮಾಹಿತಿ ಬೋರ್ಡ್ ಅಥವಾ ಸೂಚನೆಯನ್ನು ಏಜೆನ್ಸಿ ಮಾಲೀಕರು ನೀಡಿಲ್ಲ.

ಕಪ್ಪು ಮಾರುಕಟ್ಟೆಯ ಭೀತಿ:

ಅಧಿಕೃತ ಕೇಂದ್ರ ಬಂದ್ ಆಗಿರುವುದರಿಂದ, ಅನಿವಾರ್ಯವಾಗಿ ಜನರು ಹೆಚ್ಚಿನ ಹಣ ನೀಡಿ ಬೇರೆಡೆ 2000 ಸಾವಿರ, 3000 ಸಾವಿರ ಕೊಟ್ಟು ಗ್ಯಾಸ್ ಖರೀದಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರೆ ಬಡವರಿಗೆ ಮಾತ್ರ ಇದು ನುಂಗಲಾರದ ತುತ್ತಾಗಿದೆ, ಸದ್ಯ ಪಾಸಬುಕ್ ಇದ್ದು ನಿಜ ಗ್ರಾಹಕರಿಗೆ ದೊರೆಯದ ಗ್ಯಾಸ, ದುಡ್ಡ ಇದ್ದವರ ಮನೆ ಬಾಗಿಲಿಗೆ ಸೇರುತ್ತಿದೆ ಎಂದು ಬಡ ಗ್ರಾಹಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

**ಸ್ಥಳೀಯರ ಪ್ರಶ್ನೆ:**

ಒಂದು ವೇಳೆ ಏಜೆನ್ಸಿಯಲ್ಲಿ ತಾಂತ್ರಿಕ ತೊಂದರೆ ಇದ್ದರೆ, ಪರ್ಯಾಯ ವ್ಯವಸ್ಥೆ ಮಾಡುವುದು ಕಂಪನಿಯ ಜವಾಬ್ದಾರಿಯಲ್ಲವೇ? ಎಂಬುದುವು ಪ್ರತಿ ಒಬ್ಬ ಗ್ಯಾಸ ದೊರೆಯದ ಕಂಗಾಲಾದ ಗ್ರಾಹಕರ ಯಕ್ಷ ಪ್ರಶ್ನೆಯಾಗಿದೆ.

**ಅಧಿಕಾರಿಗಳ ಗಮನಕ್ಕೆ:**

ಇಂಡೇನ್ ಗ್ಯಾಸ್‌ನ ಈ ಬೇಜವಾಬ್ದಾರಿತನದಿಂದಾಗಿ ಜನಸಾಮಾನ್ಯರು ಆಕ್ರೋಶಗೊಂಡಿದ್ದಾರೆ. ಸಂಬಂಧಪಟ್ಟ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳು ತಕ್ಷಣ ಈ ಬಗ್ಗೆ ತನಿಖೆ ನಡೆಸಿ, ವಿತರಣಾ ಕೇಂದ್ರವನ್ನು ಪುನಾರಂಭಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಕಮಲನಗರದ ನಾಗರಿಕರು ಒತ್ತಾಯಿಸುತ್ತಿದ್ದಾರೆ.

## CITATION

**IN THE COURT OF THE PRL. CIVIL JUDGE AND JMFC., AT HUMNABAD.**

**CRL. MISC. No.2289/2026.**

**Petitioners:**

Ruhal Haq S/o Abdul Haq, Age: 55-year, Occu Labour. R/o Town Humnabad. Dist. Bidar.

**Respondent:**

The Registrar of Birth and Death through The Chief officer TMC Humnabad.

**Sub: Petition U/Sec. 13(3) of Birth and Death Registration Act-1969**

Whereas, the above mentioned petitioner has filed the petition under section 13(3) of Birth and Death Registration Act-1969 praying this Honorable Court to issue Death Certificate of Father of Petitioner by namely **LATE. ABDUL HAQ S/O LAL AHMED,** he was died on 11.10.1990 at Town Humnabad. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 29.05.2026 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 17-04-2026

**By order of the court**

**Chief Ministerial Officer,**
**Prl. Civil Judge & JMFC Court,**
**Humnabad.**

## CITATION

**IN THE COURT OF THE PRL. CIVIL JUDGE AND JMFC., AT HUMNABAD.**

**CRL. MISC. No.2290/2026.**

**Petitioners:**

Ruhal Haq S/o Abdul Haq, Age: 55-year, Occu: Labour. R/o Town Humnabad. Dist. Bidar.

**Respondent:**

The Registrar of Birth and Death through The Chief officer TMC Humnabad.

**Sub: Petition U/Sec. 13(3) of Birth and Death Registration Act-1969**

Whereas, the above mentioned petitioner has filed the petition under section 13(3) of Birth and Death Registration Act-1969 praying this Honorable Court to issue Death Certificate of Mother of Petitioner by namely LATE. SOGARABEE W/O ABDUL HAQ, he was died on 20.11.1999 at Town Humnabad. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 29.05.2026 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 17-04-2026

**By order of the court**

**Chief Ministerial Officer,**
**Prl. Civil Judge & JMFC Court,**
**Humnabad.**

# ಮೆಗಾ ಆರೋಗ್ಯ ಶಿಬಿರ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮಧ್ಯ ರೈಲ್ವೆಯ ಸೋಲಾಪುರ ವಿಭಾಗವು ಶುಕ್ರವಾರ ಭಿಗ್ವಾನ್ ರೈಲು ನಿಲ್ದಾಣದಲ್ಲಿ ಆಯೋಜಿಸಿದ ಮೆಗಾ ಆರೋಗ್ಯ ತಪಾಸಣಾ ಶಿಬಿರದಲ್ಲಿ 101 ಉದ್ಯೋಗಿಗಳು ಮತ್ತು 30 ಕುಟುಂಬ ಸದಸ್ಯರನ್ನು ಒಳಗೊಂಡಂತೆ ಒಟ್ಟು 131 ಜನರ ಆರೋಗ್ಯ ತಪಾಸಣೆ ಮಾಡಲಾಯಿತು ಎಂದು ಮಧ್ಯ ರೈಲ್ವೆ ಸೋಲಾಪುರ ವಿಭಾಗ ಸಾರ್ವಜನಿಕ ಸಂಪರ್ಕ ಇಲಾಖೆಯು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ. ರೈಲ್ವೆ ಸಮುದಾಯದಲ್ಲಿ ಆರೋಗ್ಯಕರ ಜೀವನಶೈಲಿಯ ಅಭ್ಯಾಸಗಳ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿದೆ. ಶಿಬಿರದಲ್ಲಿ ಸಾಮಾನ್ಯ ಆರೋಗ್ಯ ತಪಾಸಣೆ, ಎತ್ತರ, ತೂಕ ಮತ್ತು ರಕ್ತದೊತ್ತಡ ಮೇಲ್ವಿಚಾರಣೆ, ಇಸಿಜಿ ತಪಾಸಣೆ, ರಕ್ತ ಮಾದರಿ ಸಂಗ್ರಹಣೆ, ಕ್ಷಯರೋಗ ತಪಾಸಣೆ ಮತ್ತು ಉಚಿತ ಔಷಧ ವಿತರಣೆ ಸೇರಿದಂತೆ ವ್ಯಾಪಕ ಶ್ರೇಣಿಯ ವೈದ್ಯಕೀಯ ಸೇವೆಗಳನ್ನು ಒದಗಿಸಲಾಯಿತು. ಗರ್ಭಧಾರಣೆ ಪೂರ್ವ ಸಮಾಲೋಚನೆ, ತಾತ್ಕಾಲಿಕ ಮತ್ತು ಶಾಶ್ವತ ಗರ್ಭನಿರೋಧಕ ವಿಧಾನಗಳು, ಗರ್ಭಕಂಠ ಮತ್ತು ಸ್ತನ ಕ್ಯಾನ್ಸರ್ ತಡೆಗಟ್ಟುವಿಕೆ ಮತ್ತು ಆರಂಭಿಕ ಪತ್ತೆ, ಸ್ತನ ಸ್ವಯಂ ಪರೀಕ್ಷೆ ತಂತ್ರಗಳು, ಮಕ್ಕಳ ರೋಗನಿರೋಧಕ ಶಕ್ತಿ, ಲಸಿಕೆ ಜಾಗೃತಿ, ರಕ್ತಹೀನತೆಯ ತಡೆಗಟ್ಟುವಿಕೆ ಮತ್ತು ಸಮತೋಲಿತ ಮತ್ತು ಪೌಷ್ಟಿಕ ಆಹಾರದ ಪ್ರಾಮುಖ್ಯತೆಯನ್ನು ಒಳಗೊಂಡ ಆರೋಗ್ಯ ಶಿಕ್ಷಣ ಮತ್ತು ಸಮಾಲೋಚನೆ ಮೇಲೆ ಶಿಬಿರವು ವಿಶೇಷ ಬೆಳಕು ಚೆಲ್ಲಿತು.ಸೋಲಾಪುರ ವಿಭಾಗದ ಮುಖ್ಯ ವೈದ್ಯಕೀಯ ಅಧೀಕ್ಷಕ (ಅಜಖ) ಡಾ. ಮಂಜುನಾಥ್ ಜಿ.ಎಸ್ ಮಾರ್ಗದರ್ಶನದಲ್ಲಿ ಸ್ತ್ರೀರೋಗತಜ್ಞ (ACMS/SUR) ಡಾ. ಕೃಷ್ಣ ಚಂದಕ್, ವೈದ್ಯ (ಸೀನಿಯರ್ DMO/SUR) ಡಾ. ಸತೀಶ್ ಬಾಬು, ನೇತ್ರಶಾಸ್ತ್ರಜ್ಞ (DMO/SUR) ಡಾ. ದೇವಿಲಾಲ್ ಚವಾಣ್, ಮೂಳೆಚಿಕಿತ್ಸಕ (DMO/SUR) ಡಾ. ರಥನ್ ಮೇಕಲ ಮತ್ತು ADMO/KWV ಡಾ. ಸೂರ್ಯ ತೇಜ ಅವರು ಸೇವೆ ಸಲ್ಲಿಸಿದರುಸೋಲಾಪುರ ವಿಭಾಗದ ಭಿಗ್ವಾನ್ ರೈಲು ನಿಲ್ದಾಣದಲ್ಲಿ ಮೆಗಾ ಆರೋಗ್ಯ ತಪಾಸಣಾ ಶಿಬಿರ ಸೋಲಾಪುರ, ಏಪ್ರಿಲ್ 18–ಮಧ್ಯ ರೈಲ್ವೆಯ ಸೋಲಾಪುರ ವಿಭಾಗವು ಶುಕ್ರವಾರ ಭಿಗ್ವಾನ್ ರೈಲು ನಿಲ್ದಾಣದಲ್ಲಿ ಆಯೋಜಿಸಿದ ಮೆಗಾ ಆರೋಗ್ಯ ತಪಾಸಣಾ ಶಿಬಿರದಲ್ಲಿ 101 ಉದ್ಯೋಗಿಗಳು ಮತ್ತು 30 ಕುಟುಂಬ ಸದಸ್ಯರನ್ನು ಒಳಗೊಂಡಂತೆ ಒಟ್ಟು 131 ಜನರ ಆರೋಗ್ಯ ತಪಾಸಣೆ ಮಾಡಲಾಯಿತು.

# ಮಾವು ಬೆಳೆಗಾರರು ಹೆಸರು ನೋಂದಾಯಿಸಿ: ಉಕ್ಕುಂದ

• ಮಲ್ಲಮ್ಮ ನುಡಿವಾರ್ತೆ ಕೊಪ್ಪಳ

ತೋಟಗಾರಿಕೆ ಇಲಾಖೆ ವತಿಯಿಂದ 2026–27ನೇ ಸಾಲಿನಲ್ಲಿ 10ನೇ ವರ್ಷದ ಮಾವು ಮಾರಾಟ ಮೇಳ ಮತ್ತು ಪ್ರದರ್ಶನವನ್ನು ಆಯೋಜಿಸಲಾಗುತ್ತಿದ್ದು, ಭಾಗವಹಿಸಲಿಚ್ಛಿಸುವ ಮಾವು ಬೆಳೆಗಾರರು ತಮ್ಮ ಹೆಸರು ನೋಂದಾಯಿಸಿಕೊಳ್ಳುವಂತೆ ಕೊಪ್ಪಳ ತೋಟಗಾರಿಕೆ ಜಂಟಿ ನಿರ್ದೇಶಕರಾದ ಕೃಷ್ಣ ಸಿ. ಉಕ್ಕುಂದ ಅವರು ತಿಳಿಸಿದ್ದಾರೆ.

ರೈತರಿಂದ ನೇರವಾಗಿ ಗ್ರಾಹಕರಿಗೆ ಕೊಪ್ಪಳ ಜಿಲ್ಲೆಯಲ್ಲಿ ಬೆಳೆಯಲಾಗುತ್ತಿರುವ ಮಾವು ಬೆಳೆಗೆ ಉತ್ತಮ ಮಾರುಕಟ್ಟೆ ಒದಗಿಸುವ ಮತ್ತು ಕೊಪ್ಪಳ ಜಿಲ್ಲೆಯ ನಾಗರಿಕರಿಗೆ ಉತ್ತಮ ಗುಣಮಟ್ಟದ ಹಣ್ಣುಗಳನ್ನು ಯೋಗ್ಯ ಬೆಲೆಗೆ ಯಾವುದೇ ಮಧ್ಯವರ್ತಿಗಳ ಹಾವಳಿ ಇಲ್ಲದೇ ರೈತರಿಂದ ನೇರವಾಗಿ ಗ್ರಾಹಕರಿಗೆ ಒದಗಿಸುವ ಉದ್ದೇಶದಿಂದ ತೋಟಗಾರಿಕೆ ಇಲಾಖೆ ವತಿಯಿಂದ 10ನೇ ವರ್ಷದ ಮಾವು ಮೇಳವನ್ನು ಮೇ ತಿಂಗಳ ಎರಡನೇ ವಾರದಲ್ಲಿ ಮಾವು ಪ್ರದರ್ಶನ ಮತ್ತು ನೈಸರ್ಗಿಕವಾಗಿ ಮಾಗಿಸಿದ ಮಾವಿನ ಹಣ್ಣುಗಳ ಮಾರಾಟ ಮೇಳವನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಈ ಮೇಳದಲ್ಲಿ ಭಾಗವಹಿಸುವ ಆಸಕ್ತ ಜಿಲ್ಲೆಯ ಮಾವು ಬೆಳೆಗಾರರು ನೈಸರ್ಗಿಕವಾಗಿ ಮಾಗಿಸಿದ ಮಾವಿನ ಹಣ್ಣುಗಳನ್ನು ಮಾರಾಟ ಮಾಡಲು ಮುಂಗಡವಾಗಿ ಮಾರಾಟ ಮಳಿಗೆಗಳನ್ನು ಕಾಯ್ದಿರಿಸಲು ತಮ್ಮ ಹೆಸರನ್ನು ತೋಟಗಾರಿಕೆ ಇಲಾಖೆಯ ಅಧಿಕಾರಿಗಳ ಹತ್ತಿರ ಹೆಸರು ನೋದಾಯಿಸಬೇಕು. ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು, ಆಸಕ್ತ ರೈತರು ತಮ್ಮ ಪಹಣಿ ಪ್ರತಿಯೊಂದಿಗೆ, ತಮ್ಮ ಹೆಸರು, ವಿಳಾಸ, ಸರ್ವೆ ನಂಬರ್, ಬೆಳೆ, ತಳಿಗಳು ಹಾಗೂ ವಿಸ್ತೀರ್ಣ ಮುಂತಾದ ವಿವರಗಳೊಂದಿಗೆ ಈ ಕೆಳಗೆ ನಮೂದಿಸಿದ ಅಧಿಕಾರಿಗಳಿಗೆ ನೀಡುವಂತೆ ಪ್ರಕಟಣೆಯಲ್ಲಿ ಸೂಚಿಸಲಾಗಿದೆ. ತಮ್ಮ ಉತ್ಪನ್ನಗಳಿಗೆ ಯೋಗ್ಯ ಬೆಲೆ ದೊರೆಯಲು ಹಾಗೂ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಈ ಮೂಲಕ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಕೊಪ್ಪಳ ಮೊ.ಸಂ: 9611888607, ಗಂಗಾವತಿ ಮೊ.ಸಂ: 9480257282, ಕುಷ್ಟಗಿ ಮೊ.ಸಂ: 9743518608 ಮತ್ತು ಯಲಬುರ್ಗಾ ಮೊ.ಸಂ: 9945644338 ಹಾಗೂ ಕೇಂದ್ರ ಸ್ಥಾನಿಕ ಸಹಾಯಕರ ಮೊ.ಸಂ: 8095359179 & ಕೊಪ್ಪಳ ತೋಟಗಾರಿಕೆ ಕಿಸಾನ ಮಾಲ್ ಕೊಪ್ಪಳ ಮೊ.ಸಂ: 9902792635, ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಸಹಸ್ರಾಂಜನೇಯ ದೇವಸ್ಥಾನದ ಶೇಖಣಾಚಾರ್ಯ ಸ್ಮಾರಕ ಭವನ ಲೋಕಾರ್ಪಣೆ



• ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ

ಇಲ್ಲಿನ ಗವಿಶ್ರೀ ನಗರದ ಮೇದಾರ ಕೇತೇಶ್ವರ ಕಲ್ಯಾಣ ಮಂಟಪದ ಹತ್ತಿರ ಇರುವ ಐತಿಹಾಸಿಕ ಸುಕ್ಷೇತ್ರ ಶ್ರೀ ಸಹಸ್ರಾಂಜನೇಯ ದೇವಸ್ಥಾನದಲ್ಲಿ ಶ್ರೀ ಶೇಖಣಾಚಾರ್ಯ ಸ್ಮಾರಕ ಭವನದ ಲೋಕಾರ್ಪಣೆಯನ್ನು ದೇವಕಿಬಾಯಿ ಶಿಲ್ಪಿ ಅವರು ನೆರವೇರಿಸಿದರು.

ಈ ಸಂದರ್ಭದಲ್ಲಿ ದೇವಸ್ಥಾನದ ಪ್ರಧಾನ ಕಾರ್ಯದರ್ಶಿ ಮಂಜುನಾಥ ಜಿ. ಗೊಂಡಬಾಳ ಮಾತನಾಡಿ, ಕೊಪ್ಪಳದ ಇತಿಹಾಸದಲ್ಲಿ ಬಹುದೊಡ್ಡ ಮೈಲುಗಲ್ಲಾಗಿ ಉಳಿಯುವ ದೈವೀ ಕಾಯಕ ದೇವಸ್ಥಾನದ ಅಧ್ಯಕ್ಷರು ಮತ್ತು ಹನುಮನಾರಾಧಕರಾದ ಪ್ರಕಾಶ ಶಿಲ್ಪಿ ಅವರಿಂದ ನಡೆಯುತ್ತಿದೆ, ಒಬ್ಬ ವ್ಯಕ್ತಿ ತನ್ನ ಜೀವಿತಾವಧಿಯಲ್ಲಿ ಪ್ರತಿದಿನ ಒಂದರಂತೆ ಮಡಿಯೊಂದಿಗೆ 7004 ಹನುಮನ ವಿಗ್ರಹ ತಯಾರಿಸಿ ಪೂಜೆ ಅಭಿಷೇಕ ನೆರವೇರಿಸಿ ಪ್ರಸಾದ ತೆಗೆದುಕೊಳ್ಳುವ ಕಾಯಕ ಇಡೀ ವಿಶ್ವದ ಇತಿಹಾಸದಲ್ಲಿ ಸಿಗುವದಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಮಾಜಿ ನಗರಸಭೆ ಸದಸ್ಯ ಗುರುರಾಜ ಹಲಗೇರಿ ಅವರು, ದಿನೇ ದಿನೇ ಅಪಾರ ಭಕ್ತರನ್ನು ಹೊಂದುತ್ತಿರುವ ಈ ದೇವಸ್ಥಾನ ಮುಂದೆ ಅಂಜನಾದ್ರಿಯಂತೆ ವಿಶ್ವವ್ಯಾಪಿ ಜನಪ್ರಿಯ ಆಗಲಿದೆ ಎಂದರು.

ಹುಬ್ಬಳ್ಳಿಯ ವೇ. ಮೂ. ಸೋಮಾಚಾರ್ಯ ರಾಮಾಚಾರ್ಯ ಕಡ್ಲಾಸ್ಕರ್ ಅವರ ಪೌರೋಹಿತ್ಯದಲ್ಲಿ ವಿವಿಧ ಪೂಜಾ ಕೈಂಕರ್ಯಗಳು ಜರುಗಿದವು. ಈ ಸಂದರ್ಭದಲ್ಲಿ ಹನುಮನಾರಾಧಕರಾದ ಪ್ರಕಾಶ ಶಿಲ್ಪಿ, ಶಿಕ್ಷಕ ವಿರೇಶ ಚೋಳಪ್ಪನವರ, ಮಂಜುನಾಥ ಶಿಲ್ಪಿ, ಪವನಕುಮಾರ ಶಿಲ್ಪಿ, ಪ್ರಸನ್ನ ಶಿಲ್ಪಿ, ಪುನೀತ ಶಿಲ್ಪಿ, ರವಿಕುಮಾರ ಗದಗ, ಮಧು ಸೇರಿ ನೂರಾರು ಅಜ್ಜನ ಭಕ್ತರು ಆಗಮಿಸಿದ್ದರು. ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

# 23 ಕ್ಕೆ ಮಹರ್ಷಿ ಶ್ರೀ ಭಗೀರಥ ಜಯಂತಿ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಕಲಬುರಗಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಇವುಗಳ ಸಂಯುಕ್ತಾಶ್ರಯದಲ್ಲಿ ಮಹರ್ಷಿ ಶ್ರೀ ಭಗೀರಥ ಜಯಂತಿ ಆಚರಣೆ ಕಾರ್ಯಕ್ರಮವನ್ನು ಏಪ್ರಿಲ್ 23 ರಂದು ಗುರುವಾರ ಬೆಳಿಗ್ಗೆ 11 ಗಂಟೆಗೆ ಕಲಬುರಗಿ ನಗರದ ಡಾ. ಎಸ್. ಎಂ. ಪಂಡಿತ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ರಾಜ್ಯಸಭಾ ಸದಸ್ಯ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಘನ ಉಪಸ್ಥಿತಿ ವಹಿಸುವರು. ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು.

ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಖಾತೆ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ, ಆಳಂದ ಶಾಸಕ ಹಾಗೂ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾದ ಬಿ.ಆರ್. ಪಾಟೀಲ, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ನಿಯಮಿತದ ಅಧ್ಯಕ್ಷೆ ಹಾಗೂ ಉತ್ತರ ಶಾಸಕಿ ಕನೀಜ್ ಫಾತೀಮಾ, ಜೇವರ್ಗಿ ಶಾಸಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಜಯಸಿಂಗ್ ಅವರು ಗೌರವ ಉಪಸ್ಥಿತಿ ವಹಿಸುವರು. ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಕಲಬುರಗಿ ಲೋಕಸಭಾ ಸದಸ್ಯ ರಾಧಾಕೃಷ್ಣ ಆರ್. ದೊಡ್ಡಮನಿ, ಬೀದರ ಲೋಕಸಭಾ ಸದಸ್ಯ ಸಾಗರ ಖಂಡ್ರೆ, ಶಾಸಕರುಗಳಾದ ಎಂ.ವೈ. ಪಾಟೀಲ, ಬಸವರಾಜ ಮತ್ತಿಮಡು, ಡಾ. ಅವಿನಾಶ ಜಾಧವ, ವಿಧಾನ ಪರಿಷತ್ ಶಾಸಕರುಗಳಾದ ಶಶೀಲ ಜಿ. ನಮೋಶಿ, ಡಾ. ಬಿ.ಜಿ. ಪಾಟೀಲ, ಡಾ. ಚಂದ್ರಶೇಖರ ಪಾಟೀಲ ಹುಮನಾಬಾದ, ತಿಮ್ಮಣ್ಣಪ್ಪ ಕಮಕನೂರ, ಸುನೀಲ್ ವಲ್ಲ್ಯಾಪುರೆ, ಡಾ. ತಳವಾರ ಸಾಬಣ್ಣ, ಜಗದೇವ ಗುತ್ತೇದಾರ್, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವಿಂದ್ರಪ್ಪ ಮರತೂರು, ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷ ಸೈಯದ್ ಮುಹಮ್ಮದ್ ಅಲಿ ಅಲ್ ಹುಸೇನಿ, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಅಬ್ದುಲ್ ರಶೀದ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ್ ಎಂ.ವೈ. ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಅಧ್ಯಕ್ಷ ಸೈಯ್ಯದ್ ಮಹೆಬೂಬ್ ಚಿಸ್ತಿ ಸಾಹೇಬ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ್, ಅಧ್ಯಕ್ಷ ಮಜಹರ್ ಆಲಂ ಖಾನ್ ಹಾಗೂ ಮಹಾನಗರಪಾಲಿಕೆ ಮಹಾಪೌರ ವರ್ಷಾ ರಾಜೀವ ಜಾನೆ ಅವರು ಅತಿಥಿಗಳಾಗಿ ಪಾಲ್ಗೊಳ್ಳುವರು.

ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್, ಕಲಬುರಗಿ ಈಶಾನ್ಯ ವಲಯದ ಪೊಲೀಸ್ ಉಪ ಮಹಾನಿರೀಕ್ಷಕ ಶಾಂತನು ಸಿನ್ಹಾ, ಕಲಬುರಗಿ ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಭಾಜಪೇಯಿ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿ ನಲಿನ್ ಅತುಲ್, ಕಲಬುರಗಿ ಕೆ.ಕೆ.ಆರ್.ಟಿ.ಸಿ. ವ್ಯವಸ್ಥಾಪಕ ನಿರ್ದೇಶಕಿ ಡಾ. ಬಿ. ಸುಶೀಲಾ, ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತ ಪಾಂಡ್ವೆ ರಾಹುಲ್ ತುಕಾರಾಮ್ ಹಾಗೂ ಕಲಬುರಗಿ ಉಪ್ಪಾರ ಸಂಘದ ಜಿಲ್ಲಾ ಅಧ್ಯಕ್ಷರಾದ ಗೋವಿಂದ ಸಗರ ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು.

# ಮೇ 4 ಕ್ಕೆ ಮಹನೀಯರ ಮೂರ್ತಿಯ ಭೂಮಿ ಪೂಜೆ



• ಮಲ್ಲಮ್ಮ ನುಡಿ ವಾರ್ತೆ, ಕುಕನೂರ

ಜಗಜ್ಯೋತಿ ಬಸವಣ್ಣನವರ ಡಾ. ಬಿ ಆರ್ ಅಂಬೇಡ್ಕರ್ ಅವರ ಸಂಗೊಳ್ಳಿ ರಾಯಣ್ಣನವರ ಮೂರ್ತಿ ಪ್ರಶಿಸ್ಥಾಪನೆಯ ಭೂಮಿ ಪೂಜೆ ಕಾರ್ಯಕ್ರಮ ಮೇ 4 ನಾಲ್ಕರಂದು ಅದ್ದೂರಿಯಾಗಿ ಜರುಗುಲಿದೆ ಎಂದು ಸಿಎಂ ಆರ್ಥಿಕ ಸಲಹೆಗಾರ ಹಾಗೂ ಶಾಸಕ ಬಸವರಾಜ ರಾಯರೆಡ್ಡಿ ಹೇಳಿದರು.

ಕುಕನೂರ ಪಟ್ಟಣದ ಐಬಿಯಲ್ಲಿ ರವಿವಾರ ದಿವಸ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದವರು, ಕುಕನೂರು ಪಟ್ಟಣದ ಸರ್ವ ಸಮಾಜದವರ ಅಭಿಪ್ರಾಯದಂತೆ ಮೂರು ಸ್ಥಳಗಳನ್ನು ನೋಡಿದ್ದು ಈಗಾಗಲೇ ಆ ಸ್ಥಳದಲ್ಲಿ ಭೂಮಿ ಪೂಜೆ ಹಮ್ಮಿಕೊಂಡಿದ್ದು, ಸರ್ಕಾರದಿಂದ ಪ್ರತಿ ಮೂರ್ತಿಗೆ 40 ಲಕ್ಷ ರೂಪಾಯಿ ಸರ್ಕಾರದಿಂದ ಕೊಡಲಾಗಿದ್ದು ಜಾಗೀಯ ಕೂಡ ಪಟ್ಟಣ ಪಂಚಾಯತಿಯಿಂದ ನಿಗದಿಯಾಗಿದೆ, ಮೇ 4ರಂದು ಮೆರವಣಿಗೆ ಆಗುವ ವಿಧ ವಾದ್ಯಮಿಳಗಳೊಂದಿಗೆ ಅದ್ದೂರಿಯಾಗಿ ಮೆರವಣಿಗೆ ಸಾಗಿ ಸಂಜೆಯ ಹೊತ್ತಿನಲ್ಲಿ ಭೂಮಿ ಪೂಜ ಕಾರ್ಯಕ್ರಮಕ್ಕೆ, ಸಚಿವರಾದ ಶಿವನಂದ ಪಾಟೀಲ್ ಸೇರಿದಂತೆ ವಿವಿಧ ಸಚಿವರು ಹಾಗೂ ವಿವಿಧ ಮುಖಂಡರು ಕೂಡ ಕಾರ್ಯಕ್ರಮದಲ್ಲಿ ಭಾಗಿಯಾಗುವವರು. ಹಳೆ ಸರ್ಕಾರಿ ಆಸ್ಪತ್ರೆಯ ಹತ್ತಿರದಲ್ಲಿ ಜಗಜ್ಯೋತಿ ಬಸವಣ್ಣನ ಮೂರ್ತಿ ಪ್ರತಿಸ್ಥಾಪನೆ ಆಗುತ್ತಿದ್ದು 9 ಪೀಟ್ ಎತ್ತರವಿರುವ ಬಸವಣ್ಣವರ ಮೂರ್ತಿರಲಿದ್ದು, ಒಂದು ವಾಲ್ ನಿರ್ಮಾಣ ಮಾಡಿ ಹಾಗೂ ಸಾರ್ವಜನಿಕರು ಕುಳಿತುಕೊಳ್ಳಲು ಚೇರು ಹಾಗೂ ವಾಲ್ಗಳ ಮೇಲೆ ಬಸವಣ್ಣನವರ ವಚನಗಳನ್ನು ಕೆತ್ತನೆ ಮಾಡಲು ಒಂದು ವಾಲುಗಳನ್ನು ನಿರ್ಮಾಣ ಮಾಡಲಾಗುವುದು, ಡಾಕ್ಟರ್ ಬಿ ಆರ್ ಅಂಬೇಡ್ಕರ್ ಅವರ ಮೂರ್ತಿಯ ಸುತ್ತಮುತ್ತ ಪಾರ್ಲಿಮೆಂಟ್ ಚಿತ್ರವನ್ನು ನಿರ್ಮಿಸಲಾಗುವುದು, ಸಂಗೊಳ್ಳಿ ರಾಯಣ್ಣನ ಮೂರ್ತಿ ಯೊಂದಿಗೆ ಕೋಟೆ ಚಿತ್ರವನ್ನು ಕೂಡ ನಿರ್ಮಿಸಲಾಗುವುದು, ಅದಕ್ಕೂ ಕೂಡ ಅನುದಾನಗಳನ್ನು ಸರ್ಕಾರ ಬಿಡುಗಡೆ ಮಾಡಿದೆ, ಕುಕನೂರು ಪಟ್ಟಣ ಪಂಚಾಯಿತಿಯ ನೂತನ ಕಟ್ಟಡ ಭೂಮಿ ಪೂಜೆ ಹಾಗೂ ಎಪಿಎಂಸಿ ನಿರ್ಮಾಣವಾಗಿರುವ ಕೋಲ್ಡ್ ಸ್ಟೋರೇಜ್ ಉದ್ಘಾಟನೆ ಕೂಡ ಅಂದೆ ಜರುಗೋಲಿದೆ ತಾಲೂಕಿನ ಸರ್ವ ಸಮಾಜದವರು ಈ ಅಭಿವೃದ್ಧಿ ಕಾರ್ಯದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

# ಕುಡಿಯುವ ನೀರಿನ ಸಮಸ್ಯೆಗೆ ಸಹಾಯವಾಣಿ ಆರಂಭ

• ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ



ಪ್ರಸಕ್ತ ಬೇಸಿಗೆ ಹಿನ್ನೆಯಲ್ಲಿ ಜಿಲ್ಲೆಯಲ್ಲಿನ ಸಾರ್ವಜನಿಕರ ಕುಡಿಯುವ ನೀರಿನ ಸಮಸ್ಯೆಗಳಿಗೆ ಸ್ಪಂದಿಸಲು ಸಹಾಯವಾಣಿಯನ್ನು ಆರಂಭಿಸಲಾಗಿದೆ ಎಂದು ಕೊಪ್ಪಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ ಅವರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಬೇಸಿಗೆಯಿಂದಾಗಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಸಂಭವ ಇರುವುದರಿಂದ ಈ ಅವಧಿಯಲ್ಲಿ ಕೊಪ್ಪಳ ಜಿಲ್ಲಾ ವ್ಯಾಪ್ತಿಯ 7 ತಾಲೂಕುಗಳಲ್ಲಿ ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿ ಉಂಟಾಗಬಹುದಾದ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ದೂರುಗಳನ್ನು ಸ್ವೀಕರಿಸಲು ಎಲ್ಲಾ ತಾಲ್ಲೂಕು ಪಂಚಾಯತಿಗಳಲ್ಲಿ ಮತ್ತು ಜಿಲ್ಲಾ ಪಂಚಾಯತಿಯಲ್ಲಿ ಕುಡಿಯುವ ನೀರಿನ ಸಹಾಯವಾಣಿ" ತೆರೆಯಲಾಗಿರುತ್ತದೆ.

ಅದರಂತೆ ಕೊಪ್ಪಳ ಜಿಲ್ಲಾ ಪಂಚಾಯತ್ ಸಹಾಯವಾಣಿ ಸಂಖ್ಯೆ: 08539–221207 & 7829658536, ಕೊಪ್ಪಳ ತಾಲ್ಲೂಕು ಪಂಚಾಯತ್ ಸಹಾಯವಾಣಿ ಸಂಖ್ಯೆ: 9620410509 & 9902315311, ಕುಷ್ಟಗಿ ತಾಲ್ಲೂಕು ಪಂಚಾಯತ್ ಸಹಾಯವಾಣಿ ಸಂಖ್ಯೆ: 7899986581, ಗಂಗಾವತಿ ತಾಲ್ಲೂಕು ಪಂಚಾಯತ್ ಸಹಾಯವಾಣಿ ಸಂಖ್ಯೆ: 6361940327 & 9036892963, ಕಾರಟಗಿ ತಾಲ್ಲೂಕು ಪಂಚಾಯತ್ ಸಹಾಯವಾಣಿ ಸಂಖ್ಯೆ: 9845213245 & 6362150339, ಕನಕಗಿರಿ ತಾಲ್ಲೂಕು ಪಂಚಾಯತ್ ಸಹಾಯವಾಣಿ ಸಂಖ್ಯೆ: 8073051234 & 90362205541, ಯಲಬುರ್ಗಾ ತಾಲ್ಲೂಕು ಪಂಚಾಯತ್ ಸಹಾಯವಾಣಿ ಸಂಖ್ಯೆ: 9620414476 & 7259562842 ಹಾಗೂ ಕುಕನೂರು ತಾಲ್ಲೂಕು ಪಂಚಾಯತ್ ಸಹಾಯವಾಣಿ ಸಂಖ್ಯೆ: 8296920386 ಆಗಿದ್ದು, ಆಯಾ ತಾಲ್ಲೂಕುಗಳ ಸಾರ್ವಜನಿಕರು ಸಹಾಯವಾಣಿ ಮೂಲಕ ತಮ್ಮ ದೂರುಗಳನ್ನು ಸಲ್ಲಿಸಬಹುದು.

ಮುಂದಿನ 3 ತಿಂಗಳುಗಳಲ್ಲಿ ಜಿಲ್ಲೆಯ 133 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡು ಬರಬಹುದೆಂದು ಅಂದಾಜಿಸಲಾಗಿದ್ದು, ನೀರಿನ ಸಮಸ್ಯೆ ಉಂಟಾದಲ್ಲಿ ಖಾಸಗಿ ಬೋರ್ ವೆಲ್ ಹಾಗೂ ಖಾಸಗಿ ಟ್ಯಾಂಕರ್‌ಗಳ ಮೂಲಕ ನಿಯಮಾನುಸಾರ ನೀರು ಸರಬರಾಜು ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. ನಂತರ ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿಯ ಕುಡಿಯುವ ನೀರಿನ ಮೂಲಗಳನ್ನು ಕಾಲಕಾಲಕ್ಕೆ ನಿಯಮಾನುಸಾರ ಪರೀಕ್ಷೆಗೊಳಪಡಿಸಿ ಶುದ್ಧತೆಯನ್ನು ಖಚಿತಪಡಿಸಿಕೊಂಡು ಅಗತ್ಯ ಕ್ರಮ ವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ ಮತ್ತು ಓ.ಎಚ್.ಟಿ, ಸಂಪು, ಮಿನಿ ವಾಟರ್ ಟ್ಯಾಂಕ್, ಜಿ.ಎಲ್.ಎಸ್. ಆರ್ ಹಾಗೂ ಇತರೆ ನೀರು ಸಂಗ್ರಾಹಕಗಳನ್ನು ಕಾಲಕಾಲಕ್ಕೆ ಸ್ವಚ್ಛಗೊಳಿಸಿ ಶುದ್ಧೀಕರಿಸಲು ಸಹ ಸೂಚಿಸಲಾಗಿರುತ್ತದೆ ಎಂದು ಕೊಪ್ಪಳ ಜಿಲ್ಲಾ ಪಂಚಾಯತ್ ಪ್ರಕಟಣೆ ತಿಳಿಸಿದೆ.

# ಜನಸಾಮಾನ್ಯರಿಗೆ ಉನ್ನತ ಶಿಕ್ಷಣ ನೀಡುವುದೇ ನಮ್ಮ ಗುರಿ: ಡಾಣಿ



• ಮಲ್ಲಮ್ಮ ನುಡಿವಾರ್ತೆ ಕೊಪ್ಪಳ

ಜನಸಾಮಾನ್ಯರ ಮಕ್ಕಳು ವಿಶ್ವವಿದ್ಯಾಲಯದ ಪ್ರವೇಶ ಪಡೆದು ಉನ್ನತ ಶಿಕ್ಷಣ ಪಡೆಯುವ ಮೂಲಕ ಸಮಗ್ರ ಅಭಿವೃದ್ಧಿ ಹೊಂದಬೇಕು ಎಂದು ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಸ್.ವಿ ಡಾಣಿ ಹೇಳಿದರು. ಪಿ.ಜಿ ಸೆಂಟರ್‌ನಲ್ಲಿ ಗುರುವಾರ (ಏ.16) ಹಮ್ಮಿಕೊಳ್ಳಲಾಗಿದ್ದ ಕೊಪ್ಪಳ ವಿಶ್ವವಿದ್ಯಾಲಯದ ಮೂರನೆಯ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬುದ್ಧ ಬಸವ ಅಬೇಡ್ಕರರ ಆಶಯದಂತೆ ಜ್ಞಾನ, ವಿಜ್ಞಾನ, ವಿಕಾಸ ಎಂಬ ವಿಶ್ವವಿದ್ಯಾಲಯದ ಧ್ಯೇಯ ವಾಕ್ಯ ಎಲ್ಲ ವಿದ್ಯಾರ್ಥಿಗಳ ಹೃದಯದಲ್ಲಿ ಬೇರೆಯಬೇಕು. ಅಂದಾಗ ಮಾತ್ರ ಈ ನಾಡು ವೈಚಾರಿಕ ಚಿಂತನೆಯ ಬೀಡಾಗಲು ಸಾಧ್ಯ. ವಿದ್ಯಾರ್ಥಿಗಳು ನಮಗೆ ವಿಶ್ವವಿದ್ಯಾಲಯದ ಬೆಳವಣಿಗೆ ಪ್ರತ್ಯಕ್ಷ ಆಶ್ರಯದಾತರು ಹಾಗಾಗಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ವಿದ್ಯಾರ್ಥಿಗಳಿಗೆ ಅನುಕೂಲಕರ ವಾತಾವರಣ ನಿರ್ಮಾಣ ಮಾಡುವಲ್ಲಿ ಶ್ರಮಿಸಬೇಕು. ಬದಕು ಕಟ್ಟಿಕೊಡುವ ಸ್ಥಳವನ್ನು ಮರೆಯದೆ ಎಲ್ಲರೂ ಶ್ರಮವಹಿಸಿ ಕಾರ್ಯ ನಿರ್ವಹಿಸುವ ಮೂಲಕ ವಿಶ್ವವಿದ್ಯಾಲಯವನ್ನು ಕಟ್ಟುವ ಕೆಲಸ ಮಾಡಬೇಕಾಗಿದೆ. ಬೇರೆ ವಿಶ್ವವಿದ್ಯಾಲಯಗಳ ಹೋಲಿಕೆ ಸಲ್ಲದು ಅಧಿಕಾರಿಗಳು ಮತ್ತು ರಾಜಕೀಯ ನಾಯಕರ ಬೆಂಬಲದಿಂದ ವಿಶ್ವವಿದ್ಯಾಲಯದ ಸ್ಥಳ ಈಗಾಗಲೇ ನಿಗದಿಯಾಗುವ ಕಾಲ ಸನ್ನಿತವಾಗುತ್ತಿದೆ ಎಂದು ಹೇಳಲು ಸಂತೋಷವಾಗುತ್ತದೆ ಎಂದರು. ಇನ್ನೂ ಅನೇಕ ವಿಭಾಗಗಳನ್ನು ಆರಂಭಸಬೇಕೆಂಬ ಚಿಂತನೆ ನಡೆ–ಯುತ್ತಿದೆ. ಮೂಲ ಸೌಕರ್ಯಗಳ ಸಮಸ್ಯೆಗಳು ಪರಿಹಾರವಾಗುತ್ತಿದ್ದು ಯಲಬುರ್ಗಾ ಪಿ.ಜಿ ಸೆಂಟರ್‌ನ್ನು ವಿಶ್ವವಿದ್ಯಾಲಯದ ಮೌಲ್ಯ ಮಾಪನ ಕೇಂದ್ರವನ್ನು ಪ್ರಸಕ್ತ ವರ್ಷದಿಂದ ಆರಂಭಿಸಲಾಗುವುದು. ಜನಸಾಮಾನ್ಯರಿಗೆ ಉನ್ನತ ಶಿಕ್ಷಣದ ಮಹತ್ವ ತಿಳಿಸುವ ಮೂಲಕ ಈ ಭಾಗದ ಮಹಿಳೆಯರನ್ನು ಸ್ನಾತ–ಕೋತ್ತರ ಶಿಕ್ಷಣ ಪಡೆದುಕೊಳ್ಳಲು ವಿಶ್ವವಿದ್ಯಾಲಯ ಅರಿವು ಮೂಡಿಸುತ್ತಾ ಬಂದಿದೆ. ಅಧ್ಯಯನ ಪೀಠ ಸೇರಿದಂತೆ ಇನ್ನೂ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದ್ದು ಜಿಲ್ಲೆಯ ಜನತೆ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ವಿದ್ಯಾರ್ಥಿಗಳು ತಂದೆ ತಾಯಿಗಳ ಕನಸನ್ನು ನನಸಾಗಿಸುವ ಮಹತ್ವದ ಕಾರ್ಯವನ್ನು ಪೂರ್ಣಗೊಳಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು. ಆಡಳಿತಾಧಿಕಾರಿ ತಿಮ್ಮಾರಡ್ಡಿ ಪ್ರಾಸ್ತಾವಿಕ ಮಾತನಾಡಿದರು.

ಚಲನಚಿತ್ರ ಅಕಾಡೆಮಿ ಸದಸ್ಯರಾದ ಸಾವಿತ್ರಿ ಮಜುಮದಾರ ಅವರು ಮಾತನಾಡಿ, ನಾನು ಸಿಡಿಕೇಟ್ ಸದಸ್ಯೆಯಾಗಿದ್ದಾಗ ಕೊಪ್ಪಳ ಭಾಗದಲ್ಲಿ ಕೃಷ್ಣದೇವರಾಯ ವಿಶ್ವವಿದ್ಯಾಲಯದಿಂದ ಪಿ.ಜಿ ಸೆಂಟರ್ ಆರಂಭಿಸಲಾಯಿತು ಇದು ಅಷ್ಟು ಸುಲಭವಾಗಿದ್ದಿಲ್ಲ. ಅಂದಿನ ಜಿಲ್ಲಾಧಿಕಾರಿ ಕನಗವಲ್ಲಿ ಅವರ ಪ್ರೋತ್ಸಾಹದ ಫಲವಾಗಿ ದೊರಕಿದೆ. ಇಂದು ಕೊಪ್ಪಳ ವಿಶ್ವವಿದ್ಯಾಲಯ ಸ್ಥಾಪಿತವಾಗಿ ಸಣ್ಣಪುಟ್ಟ ಸಮಸ್ಯೆಗಳನ್ನು ಎದುರಿಸುತ್ತಿದೆ. ಇದರ ಸಮಗ್ರ ಅಭಿವೃದ್ಧಿಗೆ ಇಲ್ಲಿನ ರಾಜಕಾರಣಿಗಳ ಮತ್ತು ಅಧಿಕಾರಿಗಳ ಇಚ್ಛಾಶಕ್ತಿಯಿಂದ ಶಾಶ್ವತ ನೆಲೆ ಕಂಡುಕೊಂಡು ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದ ಅವಶ್ಯಕತೆ ಇದೆ. ಅತಿಥಿ ಉಪನ್ಯಾಸಕರ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಬೇಕು ಸುಧೀರ್ಘ ಅವಧಿ ಸೇವೆ ಸಲ್ಲಿಸಿದ ಎಸ್.ವಿ

# ಆಲಮಟ್ಟಿ ಜಲಾಶಯದಲ್ಲಿ ತಗ್ಗಿದ ನೀರಿನ ಮಟ್ಟ

• ಮಲ್ಲಮ್ಮ ನುಡಿ ವಾರ್ತೆ, ವಿಜಯಪುರ



ಆಲಮಟ್ಟಿ: ಲಾಲಬಹದ್ದೂರ ಶಾಸ್ತ್ರಿ ಜಲಾಶಯದ ಹಿನ್ನೀರು ಪ್ರದೇಶದಲ್ಲಿ ವ್ಯಾಪಕವಾಗಿ ಇಳಿಕೆಯಾಗಿ ನೀರಿನ ಸಂಗ್ರಹದಲ್ಲಿ ವ್ಯಾಪಕವಾಗಿ ಇಳಿಕೆಯಾಗುತ್ತಿರುವದರಿಂದ ನಾಗರಿಕರ ಆತಂಕಕ್ಕೆ ಕಾರಣವಾಗಿದೆ.

519.6ಮೀ. ಗರಿಷ್ಠ ಎತ್ತರದಲ್ಲಿ ಗರಿಷ್ಠ 123.081ಟಿಎಮ್ ಸಿಅಡಿ ಸಂಗ್ರಹ ಸಾಮರ್ಥ್ಯದ ಆಲಮಟ್ಟಿ ಜಲಾಶಯದಲ್ಲಿ ಶುಕ್ರವಾರ ಮುಂಜಾನೆಯ ಮಾಹಿತಿಯಂತೆ 510.66ಮೀ. ಎತ್ತರವಾಗಿ 33.232 ಗರಿಷ್ಠ ನೀರು ಸಂಗ್ರಹವಾಗಿದ್ದು, ಇದರಲ್ಲಿ 17.620ಟಿಎಮ್ ಸಿಅಡಿ ಜಲಚರಗಳಿಗೆ ಮೀಸಲಿರಿಸಲಾಗಿದ್ದು, ಇನ್ನುಳಿದ 15.612ಟಿಎಮ್ ಸಿ ಅಡಿ ನೀರನ್ನು ಮಾತ್ರ ಬಳಸಿಕೊಳ್ಳಬಹುದು.

ಸಂಗ್ರಹವಿರುವ ನೀರಿನಲ್ಲಿ ಜಮಖಂಡಿ ತಾಲ್ಲೂಕಿನ ಪಡಸಲಗಿಯ ಶ್ರಮಬಿಂದು ಸಾಗರ ಬ್ಯಾರೇಜ್ ವ್ಯಾಪ್ತಿಯ ಬಹುಹಳ್ಳಿ ಕುಡಿಯುವ ನೀರು ಪೂರೈಕೆ ಸ್ಥಾವರಗಳ ಮೂಲಕ ಜಮಖಂಡಿ, ಬಬಲೇಶ್ವರ ತಾಲ್ಲೂಕು ಸೇರಿದಂತೆ ಆ ಭಾಗದ ಜನ–ಜಾನುವಾರುಗಳಿಗೆ ಕುಡಿಯುವ ನೀರು, ಆಲಮಟ್ಟಿ ಜಲಾಶಯದ ಬಲಬದಿಯಲ್ಲಿ ಇರುವ ನೀರು ಪೂರೈಕೆ ಸ್ಥಾವರಗಳಿಂದ ಬಾಗಲಕೋಟ ನಗರ, ಬಾಗಲಕೋಟ ತಾಲ್ಲೂಕು, ಬೀಳಗಿ ತಾಲ್ಲೂಕು, ಗುಳೇದಗುಡ್ಡ, ಬದಾಮಿ, ಹುನಗುಂದ, ಕುಷ್ಟಗಿ ತಾಲ್ಲೂಕುಗಳ ಬಹುಹಳ್ಳಿ ಕುಡಿಯುವ ನೀರಿನ ಯೋಜನೆ ಘಟಕಗಳಿಂದ ಲಕ್ಷಾಂತರ ಜನ–ಜಾನುವಾರುಗಳಿಗೆ ಕುಡಿಯುವ ನೀರು ಪೂರೈಕೆ. ಆಲಮಟ್ಟಿ ಜಲಾಶಯದ ಎಡಬದಿಯಲ್ಲಿರುವ ನಿಡಗುಂದಿ, ಕೊಲ್ಹಾರ, ವಿಜಯಪುರ ನಗರ, ವಿಜಯಪುರ ತಾಲ್ಲೂಕು, ಬಸವನಬಾಗೇವಾಡಿ, ದೇವರಹಿಪ್ಪರಗಿ, ಚಡಚಣ ತಾಲ್ಲೂಕುಗಳ ಬಹುಹಳ್ಳಿ ಕುಡಿಯುವ ನೀರು ಪೂರೈಕೆ ಘಟಕಗಳ ಮೂಲಕ ಲಕ್ಷಾಂತರ ಜನ–ಜಾನುವಾರುಗಳಿಗೆ ಜೀವ ಜಲ ಪೂರೈಕೆ ಮಾಡಲಾಗುತ್ತದೆ.

ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 10.122 ನೀರು ಸಂಗ್ರಹವಿತ್ತು.

ಆದರೆ ಈ ಬಾರಿ ಜಲಾಶಯದಲ್ಲಿ 15.612ಟಿಎಂಸಿಅಡಿ ನೀರು ಸಂಗ್ರಹವಿದೆ ಎಂದರೂ ಕೂಡ ಕಳೆದ ಕೆಲದಿನಗಳಿಂದ ಸೂರ್ಯನ ತಾಪದಿಂದ ರಣಭೀಕರ ಬಿಸಿಲಿಗೆ ವ್ಯಾಪಕವಾಗಿ ಭಾಷ್ಪೀಭವನ ಆಗುತ್ತಿದೆ. ಅಲ್ಲದೇ ಪ್ರತಿವರ್ಷವೂ ಜಲಾಶಯದ ಹಿನ್ನೀರು ಪ್ರದೇಶದಲ್ಲಿ ವ್ಯಾಪಕ ಹೂಳು ಸಂಗ್ರಹವಾಗುತ್ತಿದೆ.

ಇಷ್ಟೇ ಅಲ್ಲದೇ ಇದು ಏಪ್ರಿಲ್ ತಿಂಗಳು ರಾಜ್ಯದಲ್ಲಿ ಮಳೆಗಾಲದ ಆರಂಭ ಜೂನ್ ತಿಂಗಳ 7ನೇ ತಾರೀಖಿನ ನಂತರ, ನಿಜವಾದ ಮಳೆಗಾಲ ಆರಂಭವಾಗುವುದೇ ಜುಲೈ ತಿಂಗಳಲ್ಲಿ ಹಾಗಾದರೆ ಇನ್ನೂ ಮೂರ್ನಾಲ್ಕು ತಿಂಗಳು ಜನ–ಜಾನುವಾರುಗಳಿಗೆ ಕುಡಿಯುವ ನೀರು ಪೂರೈಕೆ ಆಗಬೇಕು.

ಈ ಬಾರಿ ಕೇಂದ್ರ ಹವಾಮಾನ ಇಲಾಖೆಯ ಮಾಹಿತಿಯಂತೆ ರಾಜ್ಯದಲ್ಲಿ ಬರಗಾಲದ ಛಾಯೆಯ ಬಗ್ಗೆ ಮಾಹಿತಿ ನೀಡಿದೆ.

ಒಟ್ಟಾರೆ ಈಗ ಸಂಗ್ರವಿದೆ ಎಂದು ಹೇಳಲಾಗುತ್ತಿರುವ ನೀರಿನಲ್ಲಿ ಭಾಷ್ಪೀಭವನ ಮತ್ತು ಜಲಾಶಯದಲ್ಲಿ ಸಂಗ್ರಹವಿರುವ ಹೂಳಿನ ಪ್ರಮಾಣದ ಬಗ್ಗೆ ನಿಖರತೆ–ಯ ಮಾಹಿತಿ ಲಭ್ಯವಾಗಿಲ್ಲ.



ತಾಳಿಕೋಟೆಯ ಶ್ರೀ ಖಾಸ್ಗತೇಶ್ವರ ಮಠದ ಬಾಲ ಸೇವಯೋಗಿ ಸಿದ್ದಲಿಂಗ ಶ್ರೀಗಳು

# ಗಣತಿಯಲ್ಲಿ ಸರಿಯಾದ ಮಾಹಿತಿ ನೀಡಿ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್


ಗಣತಿದಾರರು ನಿಮ್ಮ ಮನೆ ಬಂದಾಗ ಸರಿಯಾದ ಮಾಹಿತಿ ನೀಡಬೇಕು ಎಂದು ಪುರಸಭೆ ಮುಖ್ಯಾಧಿಕಾರಿ ಪ್ರವೀಣ ಕುಮಾರ ಬೋಗಾರ ವೆಂಕಟರಾಯನ ಪೇಟೆ ಆಂಜನೇಯ ದೇವಸ್ಥಾನದ ಮುಂಭಾಗದಲ್ಲಿ ಮಂಗಳವಾರ ತಿಳಿಸಿದರು.

ಪಟ್ಟಣದ ವಾರ್ಡ ನಂ.17,18,19 ರಲ್ಲಿ ಜನಗಣತಿ ಮಾಡುವಾಗ ಮಾತನಾಡಿದ ಅವರು 2026ರ ಮನೆಪಟ್ಟಿ ಗಣತಿ ಕಾರ್ಯಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಗಿದೆ. ಗಣತಿ ಕಾರ್ಯವು ಸರಕಾರದ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಅತ್ಯಂತ ಮುಖ್ಯವಾಗಿದ್ದು. ಸಾರ್ವಜನಿಕರು ಸರಿಯಾಗಿ ಪೂರ್ಣ ಮಾಹಿತಿ ನೀಡುವ ಮೂಲಕ ಸಹಕರಿಸಬೇಕು ಎಂದು ಮನವಿ ಮಾಡಿದರು.

ಮೇಲ್ವಿಚಾರಕಿ ಹಾಗೂ ಮುಖ್ಯಗುರುಗಳು ಹುಲಿಗೆಮ್ಮ ಮಾತನಾಡಿ ಈ ಬಾರಿಯ ಜನಗಣತಿ ಡಿಜಿಟಲ್ ಮಾದರಿಯಲ್ಲಿ ನಡೆಯುತ್ತಿದ್ದು. ಇದು ದೇಶದ ಅಭಿವೃದ್ಧಿಗೆ ಅತ್ಯಂತ ಮಹತ್ವದ ಪ್ರಕ್ರಿಯೆಯಾಗಿದೆ. ಸಾರ್ವಜನಿಕರು ಗಣತಿ ಮಾಡುವಾಗ ಸಂಪೂರ್ಣ ಮಾಹಿತಿ ನೀಡಿ ನಮ್ಮೊಂದಿಗೆ ಕೈ ಜೋಡಿಸಬೇಕು. ಮೊಬೈಲ್ ಅಪ್ಲಿಕೇಶನ ಮೂಲಕ ಮಾಡಲಾಗುತ್ತದೆ ಎಂದು ತಿಳಿಸಿದರು.

ಕಂದಾಯ ವಿಭಾಗ ಅಂತೋಣಿ, ಶಿಕ್ಷಕ ಸುಭಾಸಚಂದ್ರ, ಭಾಗ್ಯಶ್ರೀ, ಶೃತಿ, ಪಾರ್ವತಿ, ಚೈತ್ರ, ನಜರೀನ್, ರಜೀಯಾಬೇಗಂ, ಜಿಲಾನಿ ಪಾಷ ಸೇರಿದಂತೆ ಇತರರಿದ್ದರು.

# ಅದಿಗುರು ಶಂಕರಾಚಾರ್ಯರ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ, ಸಿಂಧನೂರಿನ

ತಹಸಿಲ್ದಾರ್ ಕಚೇರಿಯಲ್ಲಿ ತಾಲೂಕ ಆಡಳಿತದಿಂದ ಆದಿಗುರು ಶಂಕರಾಚಾರ್ಯರ ಜಯಂತ್ಯೋತ್ಸವದ ನಿಮಿತ್ಯ ಶಾಸಕ ಹಂಪನಗೌಡ ಬಾದರ್ಲಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು.---

ಶಂಕರಾಚಾರ್ಯರು ಅದ್ವೈತ ಸಿದ್ದಾಂತದ ಪ್ರತಿಪಾದಕರು-ಮನೋಜ್ ಕುಮಾರ್ ಬಾಪಟ್ಲ---

ಸಿಂಧನೂರು21-ಶಂಕರಾಚಾರ್ಯರು ಎಂಟು ವರ್ಷದವರಿವಾಗಲೇ ನಾಲ್ಕು ವೇದಗಳನ್ನು, 11ನೇ ವಯಸ್ಸಿಗೆ ಸರ್ವಶಾಸ್ತ್ರಗಳನ್ನು ಕಲಿತು, 16ನೇ ವಯಸ್ಸಿಗೆ ಬರುವಷ್ಟರಲ್ಲಿ ಭಾಷ್ಯಗಳನ್ನು ಬರೆದರು. ಅವರು ಅದ್ವೈತ ಸಿದ್ದಾಂತದ ಪ್ರತಿಪಾದಕರಾಗಿದ್ದರು ಎಂದು ಉಪನ್ಯಾಸಕ ಮನೋಜ್ ಕುಮಾರ್ ಬಾಪಟ್ಲ ಹೇಳಿದರು. ಅವರು ಮಂಗಳವಾರ ತಹಶೀಲ್ದಾರ್ ಕಚೇರಿಯಲ್ಲಿ ಆದಿ ಗುರು ಶಂಕರಾಚಾರ್ಯರ ಜಯಂತೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ಜಗತ್ತಿನಲ್ಲಿ ಧರ್ಮದ ಪುನರ್ ಸ್ಥಾಪನೆಗಾಗಿ ಆಗಾಗ ಮಹಾತ್ಮರು ಜನಿಸಿದ್ದು ಐತಿಹಾಸಿಕ ಸತ್ಯ. ಅಂತಹ ಮಹಾತ್ಮರ ಸಾಲಿನಲ್ಲಿ ಶಂಕರಾಚಾರ್ಯರು ಒಬ್ಬರು. ಅವರು ದೇವರಲ್ಲಿ ನಂಬಿಕೆ ಇಡಿ , ಸಜ್ಜನರ ಸಹವಾಸ ಮಾಡಿ,ದೀನ- ದಲಿತರಿಗೆ ಸಹಾಯ ಮಾಡಿ,ಇದ್ದುದರಲ್ಲಿ ತೃಪ್ತ ಹಾಗೂ ಸರಳ ಜೀವನ ನಡೆಸಲು ಸದಾ ಉಪದೇಶಿಸುತ್ತಿದ್ದರು ಎಂದು ವಿವರಿಸಿದರು. ಶಾಸಕ ಹಂಪನಗೌಡ ಬಾದರ್ಲಿ ಶಂಕರಾಚಾರ್ಯರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸಿದರು. ತಹಸಿಲ್ದಾರ್ ಅರುಣ್ ಎಚ್ .ದೇಸಾಯಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವೈ. ಅನಿಲಕುಮಾರ್ ,ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಎಂ.ದೊಡ್ಡಬಸವರಾಜ, ತಾಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷ ಕೆ. ಗೋವಿಂದರಾವ್, ಕಾರ್ಯದರ್ಶಿ ಆನಂದಗೌರ್ಕರ್, ಮುಖಂಡರಾದ ನರಸಿಂಹ ಆಚಾರ್ಯ ಮಠಾಧಿಕಾರಿ, ಈರೇಶ್ ಇಲ್ಲೂರು, ಎಚ್. ಎನ್.ಬಡಿಗೇರ, ವೆಂಕಟರಾವ್ ಬಂಡಿ, ಗುಂಡುರಾವ್ ಚನ್ನಳ್ಳಿ, ನಾರಾಯಣರಾವ್ ದೇಸಾಯಿ, ಭೀಮಸೇನ ಜಾಗೀರ್ದಾರ್, ಅವಿನಾಶ ಬಂಡಿ ಭಾಗವಹಿಸಿದ್ದರು.

# ಬಸವಣ್ಣನವರು ಅಕ್ಷರಶಃ ಸಾಂಸ್ಕೃತಿಕ ನಾಯಕ: ನಾಯಕ



• ಮಲ್ಲಮ್ಮ ನುಡಿವಾರ್ತೆ ,ಕೊಪ್ಪಳ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನ ಡ ಮತ್ತು ಸಾಂಸ್ಕೃತಿಕ ಇಲಾಖೆ ಹಾಗೂ ನಗರಸಭೆ, ಬಸವ ಜಯಂತ್ಯುತ್ಸವ ಸಮಿತಿ ಕೊಪ್ಪಳ ಮತ್ತು ಬಸವಾನುಯಾಯಿ ಸಂಘ ಸಂಸ್ಥೆಗಳ ಸಹಯೋಗದಲ್ಲಿ

ಏಪ್ರಿಲ್ 20ರಂದು ಕರ್ನಾಟಕದ ಸಾಂಸ್ಕೃತಿಕ ನಾಯಕ ಶ್ರೀ ಬಸವೇಶ್ವರ ಜಯಂತ್ಯುತ್ಸವ ಕಾರ್ಯಕ್ರಮ ನಡೆಯಿತು.

ಶ್ರೀ ಗವಿಸಿದ್ದೇಶ್ವರ ಮಠದ ಬಯಲ ಆವರಣದಲ್ಲಿ ಇಳಿಹೊತ್ತಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಶಾಸಕರಾದ ಹೇಮಲತಾ ನಾಯಕ ಅವರು ಬಸವ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಹೇಮಲತಾ ನಾಯಕ,

ಬಸವಣ್ಣನವರು ತೆರೆದ ಪುಸ್ತಕ ಇದ್ದಂತೆ. ಬಸವ ಹೇಳಿದ ಹಾದಿಯಲ್ಲಿ ನಾವು ನಡೆಯೋಣ. ಬಸವಣ್ಣನೆಂಬ ಬೆಳಕು ಉದಯಿಸಿದ್ದರಿಂದಲೇ ಈ ಜಗದ ಬದುಕು ಪಾವನವಾಯಿತು ಎಂದು ನಾವೆಲ್ಲರೂ ತಿಳಿಯಬೇಕು. ಅಂತಹ ಮಾನವತವಾದಿ ಬಸವಣ್ಣನವರು ಅಕ್ಷರಶಃ ಸಾಂಸ್ಕೃತಿಕ ನಾಯಕ ಎಂದು ತಿಳಿಸಿದರು. ವೈಚಾರಿಕ ವಿಚಾರಧಾರೆಯ ವಚನಗಳ ಓದುವ ಮೂಲಕ

ಯುವಕರು ಧನಾತ್ಮಕ ವಿಚಾರಗಳನ್ನು ಬೆಳೆಸಿಕೊಳ್ಳಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಮಾತನಾಡಿ, ಬಸವಣ್ಣನವರ ತತ್ವಗಳು ಇಂದಿಗೂ ಪ್ರಸ್ತುತವಾಗಿವೆ. ನಾವು ಮುಂದಿನ ಪೀಳಿಗೆಗೆ ಬಸವ ವಿಚಾರಗಳನ್ನು ತಿಳಿಸಬೇಕು. ಶರಣರ ಉತ್ತಮ ಸಂದೇಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಲು ನಾವೆಲ್ಲರೂ ಪ್ರತಿಜ್ಞೆಗೈಯೋಣ ಎಂದರು.

ಶರಣ ಚಿಂತಕ, ವಿದ್ವಾಂಸ ವಿ.ಎಸ್. ಮಾಳಿ ಹಾಗೂ ಚಿಂತಕಿ ಡಾ.ದಾನಮ್ಮ ಝಳಕಿ ಅವರು ಬಸವಗೋಷ್ಠಿ ನಡೆಸಿದರು.

ಬಿಸರಳ್ಳಿ ಶಾಖಾಮಠದ ಶ್ರೀ ಶಿವಶಾಂತವೀರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಮಾರಂಭದಲ್ಲಿ ಬಸವರಾಜ ಬಳ್ಳೊಳ್ಳಿ ಅವರು ಪ್ರಾಸ್ತಾವಿಕ ಮಾತನಾಡಿದರು. ಸಮಾರಂಭದಲ್ಲಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಕರ್ಣಕುಮಾರ ಮತ್ತು ಬಸವ ಅನುಯಾಯಿಗಳು ಹಾಗೂ ಇತರರು ಇದ್ದರು.

# ವಿವಿಧ ಕಾಮಗಾರಿಗೆ ಸಿಎಂರಿಂದ ಶಂಕುಸ್ಥಾಪನೆ



• ಮಲ್ಲಮ್ಮ ನುಡಿ ವಾರ್ತೆ ಪಿರಿಯಾಪಟ್ಟಣ

ಸಾಮಾಜಿಕ ಅಭಿವೃದ್ಧಿ ಕಾರ್ಯದಲ್ಲಿ ಸರ್ಕಾರ ಯಾವುದೇ ಕಾರಣಕ್ಕೂ ಹಿಂದೆ ಆಗಿಲ್ಲ ಎಂಬುದಕ್ಕೆ ಚಾಲನೆ ಆಗುತ್ತಿರುವ ಅಭಿವೃದ್ಧಿಯೇ ಸಾಕ್ಷಿಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಪಟ್ಟಣದ ಹೊರವಲಯದಲ್ಲಿರುವ ಪಾರೆ ಕೊಪ್ಪಲು ಗ್ರಾಮದ ಬಳಿ ಮಂಗಳವಾರ ಆಯೋಜಿಸಿದ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಹಾಗು ಉದ್ಘಾಟನೆಗಳ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

419.78 ಕೋಟಿ ರೂ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ ಕಾರ್ಯಕ್ರಮ ಇದಾಗಿದ್ದು ವಿರೋಧಪಕ್ಷಗಳು ವಿನಾಕಾರಣವಾಗಿ ಐದು ಗ್ಯಾರಂಟಿಗಳಿಂದ ನಷ್ಟದಲ್ಲಿದೆ ಎಂದು ಹೇಳುತ್ತಿದ್ದಾರೆ.

ಹಾಗಾದರೆ ಈ ಪ್ರಗತಿ ಆಗುತ್ತಿರುವುದು ಸುಳ್ಳೇ ಎಂದು ಪ್ರಶ್ನಿಸಿದ ಅವರು ಇದನ್ನು ಸಹಿಸಲಾಗದೆ ವಿರೋಧ ಪಕ್ಷಗಳು ಅಪಪ್ರಚಾರ ಮಾಡುತ್ತಿವೆ ಎಂದು ಆರೋಪಿಸಿದರು.

ಪಿರಿಯಾಪಟ್ಟಣ ಶಕ್ತಿ ದೇವತೆ ಎನಿಸಿಕೊಂಡ ಶ್ರೀ ಮಸಣಿಕಮ್ಮ ದೇವಸ್ಥಾನ ಪುನರ್ ನಿರ್ಮಾಣ ತಾಲೂಕು ಒಕ್ಕಲಿಗರ ಸಂಘದ ಸಹಯೋಗದೊಂದಿಗೆ ಕುವೆಂಪು ಭವನದ ಕಟ್ಟಡ ನಿರ್ಮಾಣ ಇತಿಹಾಸ ಪ್ರಸಿದ್ಧವಾದ ಬೆಟ್ಟದ ಪುರ ಗ್ರಾಮದಲ್ಲಿರುವ ಶ್ರೀ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಬೆಟ್ಟಕ್ಕೆ ಹೋಗುವ ರಸ್ತೆ ನಿರ್ಮಾಣ ಹಾಗೂ ವಿವಿಧ ಇಲಾಖೆಗಳ ಒಟ್ಟಾರೆ 419.78 ಕೋಟಿ ರೂ ವೆಚ್ಚದ ಹಲವು ಅಭಿವೃದ್ಧಿ ಕಾಮಗಾರಿಗಳ ಶಂಕೋಸ್ಥಾಪನೆ ಮತ್ತು ಉದ್ಘಾಟನೆ ಮಾಡಿದರು.

ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಮಾತನಾಡಿ ರಾಜ್ಯದಲ್ಲಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರವು ನಾಡಿನ ಜನತೆಯ ಹಿತ ಕಾಯುವಲ್ಲಿ ಯಶಸ್ವಿಯಾಗಿದ್ದು ಯಾವುದೇ ಕಾರಣಕ್ಕೂ ಜನಪರ ಅಭಿವೃದ್ಧಿ ಕೆಲಸದಲ್ಲಿ ಹಿಂದಿಯಟು ಹಾಕುವುದಿಲ್ಲ ಎಂದು ಭರವಸೆ ನೀಡಿದರು.

ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ ವೆಂಕಟೇಶ ಮಾತನಾಡಿ ಬೆಟ್ಟು ಪುರ ಗ್ರಾಮದಲ್ಲಿರುವ ಶ್ರೀ ಸಿಡಿಲು ಮಲ್ಲಿಕಾರ್ಜುನ ಬೆಟ್ಟಕ್ಕೆ ತನ್ನ ತಂದೆ ಕೆ ಮಹದೇವ್ ಅಧಿಕಾರ ಅವಧಿಯಲ್ಲಿ ರಸ್ತೆ ಅಭಿವೃದ್ಧಿ ಹಣ ಬಿಡುಗಡೆಯಾಗುತ್ತು ಎಂದು ಸುಳ್ಳು ಹೇಳುತ್ತಿರುವ ಆತನ ಮಗ ಅದೇ ಸಂದರ್ಭದಲ್ಲಿ ಕಾಮಗಾರಿಗೆ ಯಾಕೆ ಚಾಲನೆ ನೀಡಲಿಲ್ಲ ಇಷ್ಟೊಂದು ಚಿಕ್ಕ ವಯಸ್ಸಿನಲ್ಲೇ ಇಷ್ಟೊಂದು ಸುಳ್ಳು ಕಲಿತ್ತಿರುವುದು ಸರಿಯೇ ಎಂದು ಪ್ರಶ್ನಿಸಿದರು.

ಮುಂದಿನ ದಿನಗಳಲ್ಲಿ ಜನರಿಗೆ ಎಷ್ಟರಮಟ್ಟಿಗೆ ಪ್ರಾಮಾಣಿಕ ಸೇವೆ ನಿರೀಕ್ಷೆ ಮಾಡಬಹುದು ಎಂಬುದನ್ನು ಈ ಸುಳ್ಳಿನಿಂದಲೇ ನಿರ್ದೇಶಬಹುದಾಗಿದೆ ಎಂದು ತಿಳಿಸಿದರು.

ಜಿಲ್ಲಾ ಸಚಿವ ಡಾ. ಎಚ್ ಸಿ ಮಹಾದೇವಪ್ಪ, ಲೋಕುಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಸಾರಿಗೆ ಹಾಗೂ ಧಾರ್ಮಿಕ ದತ್ತಿ ಇಲಾಖೆ ಸಚಿವ ರಾಮಲಿಂಗರೆಡ್ಡಿ, ಕಂದಾಯ ಸಚಿವ ಕೃಷ್ಣಬೈರೇಗೌಡ, ಕೃಷಿ ಸಚಿವ ಎನ್ ಚೆಲುವರಾಯಸ್ವಾಮಿ, ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್ ಎಸ್ ಬೋಸರಾಜ್ ವಿಧಾನ ಪರಿಷತ್ ಸದಸ್ಯರಾದ ಡಾ. ಡಿ ತಿಮ್ಮಯ್ಯ ಹಾಗೂ ಕೆ ಶಿವಕುಮಾರ್ ಶಾಸಕ ರವಿಶಂಕರ್ ಮತ್ತು ಕೆ ಹರೀಶ್ ಗೌಡ. ಕಾಂಗ್ರೆಸ್ ಪಕ್ಷದ ವಕ್ತಾರೆ ಎಂ ಲಕ್ಷ್ಮಣ್ ಮೈಸೂರು ಫ್ರೆಂಡ್ಸ್ ಮತ್ತು ವಾರ್ನಿಸ್ ಲಿಮಿಟೆಡ್ ಅಧ್ಯಕ್ಷ ಎಚ್ ಡಿ ಗಣೇಶ್. ಗ್ಯಾರೆಂಟಿಗಳ ಅನುಷ್ಠಾನ ಸಮಿತಿ ತಾ ಅಧ್ಯಕ್ಷ ಕೆ ವಿ ನಿತಿನ್ ವೆಂಕಟೇಶ್. ಬ್ಲಾಕ್ ಕಾಂಗ್ರೆಸ್ ಪಕ್ಷದ ಅಧ್ಯಕ್ಷರುಗಳಾದ ರಹಮತ್ ಜಾನ್ ಬಾಬು ಮತ್ತು ಡಿಟಿ ಸ್ವಾಮಿ. ಕೆ ಹೊಲದಪ್ಪ. ಟಿ ಈರಯ್ಯ. ವಿವಿಧ ಇಲಾಖೆಯ ಆಯುಕ್ತರುಗಳು. ಹಾಗೂ ಜಿಲ್ಲಾಧಿಕಾರಿಗಳು ಮತ್ತು ತಾಲೂಕು ಅಧಿಕಾರಿಗಳು ಪದಾಧಿಕಾರಿಗಳು ಸೇರಿದಂತೆ ಆರು ಸಾವಿರಕ್ಕೂ ಹೆಚ್ಚು ಮಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಕೆ ಸೆಟ್ ಯುಜಿಸಿ ನೆಟ್ ಪರೀಕ್ಷೆಗೆ 45 ದಿನ ತರಬೇತಿ

# ಹೆಸರು ನೋಂದಣಿಗೆ ಏ.24 ಕೊನೆ ದಿನ

• ಮಲ್ಲಮ್ಮ ನುಡಿ ವಾರ್ತೆ, ಬೀದರ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕರ್ನಾಟಕ ಸರ್ಕಾರವು ಕರ್ನಾಟಕ ಸರ್ಕಾರ ಪ್ರಾಧಿಕಾರ (ಕೆಇಎ) ಮೂಲಕ ನಡೆಸಲಿರುವ ರಾಜ್ಯ ಮಟ್ಟದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಗೆ (ಕೆ-ಸೆಟ್) ಹಾಗೂ ನವದೆಹಲಿಯ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದವರು ನಡೆಸಲಿರುವ ರಾಷ್ಟ್ರಮಟ್ಟದ

ಕಾಲೇಜು ಸಹಾಯಕ ಪ್ರಾಧ್ಯಾಪಕರ (ಯುಜಿಸಿ-ನೆಟ್) ಮತ್ತು ಕಿರಿಯ ಶಿಷ್ಯ ವೇತನ ಸಂಶೋಧನ ಸಹಾಯಕರ (ಜೆಆರ್‌ಎಫ್) ಅರ್ಹತಾ ಪರೀಕ್ಷೆಗಳಿಗೆ 45 ದಿನಗಳ

ತರಬೇತಿಯನ್ನು ಮೈಸೂರಿನ ಕೇಂದ್ರ ಕಛೇರಿಯಲ್ಲಿ ನೀಡಲು ನಿರ್ಧರಿಸಲಾಗಿದೆ.

ಆಸಕ್ತರು ದಿನಾಂಕ: 24-04-2026 ರೊಳಗಾಗಿ ಬೆಳಗ್ಗೆ 10 ರಿಂದ ಸಂಜೆ 4.30 ಗಂಟೆಯವರೆಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು 0821-2515944

ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದೆಂದು ಕರಾಮುವಿ ಪ್ರಾದೇಶಿಕ ಕೇಂದ್ರ, ಬೀದರದ ಪ್ರಾದೇಶಿಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ಸ್ವಂತ ಖರ್ಚಿಂದ ಗಣಪತಿ ದೇವಸ್ಥಾನ ಕಟ್ಟಿಸಿದ್ದು ಶ್ಲಾಂಘನಿಯ: ಸಿಎಂ

• ಮಲ್ಲಮ್ಮ ನುಡಿ ವಾರ್ತೆ, ಹುಣಸೂರಿ



ಸಮುದಾಯದ ಮತ್ತು ಯುವ ಜನರ ಸಂಘಟನೆಯತ್ತ ಉತ್ಸುಕರಾಗಿರುವ ದೊಡ್ಡಮನೆ ರಾಜಲಿಂಗಯ್ಯ ಪುತ್ರ ಅಶೋಕ್ ಕುಮಾರ್ ಕನಕ ಭವನಕ್ಕೆ ಅವಶ್ಯಕವಾಗಿದ್ದ ನೂತನ ಗಣಪತಿ ದೇವಸ್ಥಾನವನ್ನು ತಮ್ಮ ಸ್ವಂತ ಖರ್ಚಿನಿಂದ ಕಟಿಸಿಕೊಟ್ಟಿರುವುದು ತುಂಬ ಸ್ಲಾಘನಿಯ ಎಂದ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು

ನಗರದ ಹಾಲಿನ ಡೈರಿ ಪಕ್ಕದಲ್ಲಿರುವ ಕನಕ ಭವನದಲ್ಲಿ ದೊಡ್ಡಮನೆ ರಾಜಲಿಂಗಯ್ಯರವರ ಪುತ್ರ ಸಂಗೊಳ್ಳಿ ರಾಯಣ್ಣ ಬಳಗದ ಅಧ್ಯಕ್ಷರಾದ ಅಶೋಕ್ ಕುಟುಂಬದರು ನೂತನ ಸುಮಾರು 25 ಲಕ್ಷದ ವೆಚ್ಚದಲ್ಲಿ ನಿರ್ಮಿಸಿರುವ ಗಣಪತಿ ದೇವಸ್ಥಾನವನ್ನು ಉದ್ಘಾಟಿಸಿ ಹಾಗೂ ಸಂಗೊಳ್ಳಿ ರಾಯಣ್ಣ ಬಳಗದ ಅಧ್ಯಕ್ಷರಾದ ಅಶೋಕ್ ರವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮಾಜಿ ಶಾಸಕ ಎಚ್ ಪಿ ಮಂಜುನಾಥ್ ಕುರುಬ ಸಮುದಾಯ ವತಿಯಿಂದ ಸನ್ಮಾನಿಸಿ ನೆನಪಿನ ಕಾಣಿಕೆ ನೀಡಿ ಗೌರವಿಸಿ ನಂತರ ಕಾರ್ಯಕ್ರಮದಲ್ಲಿ ವೇದಿಕೆಯಲ್ಲಿ ಮಾತನಾಡಿ ಇಂತಹ ದಾರ್ಮಿಕ ಮತ್ತು ಸಮಾಜ ಮುಖಿ ಕಾರ್ಯಕ್ರಮಗಲಲ್ಲಿ ಅಶೋಕ್ ರವರು ಹೆಚ್ಚು ಹೆಚು ಶಕ್ತಿ ತೋಡಗಿಸಿಕೊಳ್ಳಲು ದೇವರು ಪ್ರೇರಣೆ ನೀಡಲಿ ತಾಲೂಕಿನಲ್ಲಿ ಹಲವಾರು ಸಮುದಾಯದಲ್ಲಿ ಸಮಾಜ ಮುಖಿಯಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಸಂತೋಷದ ವಿಷಯ ಎಂದರು

> “ ಈ ಸಂಧರ್ಬದಲ್ಲಿ ಸ್ಥಳೀಯ ಸುದ್ದಿಗಾರರೊಂದಿಗೆ ಮಾತನಾಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವನ್ನು ನೋಡಲು ತಾಲೂಕಿನ ಮಾದಳ್ಳಿ ಮಠ ಬಸವ ಜಯಂತಿ ಮುಗಿಸಿಕೊಂಡು ಹುಣಸೂರು ಕಡೆಗೆ ಬರುತ್ತಿದ್ದ ಸಂದರ್ಭದಲ್ಲಿ ಕಾರ್ಯಕರ್ತರು ಅಭಿಮಾನಿಗಳು ಸೇಬು ಹಾರ ಹಾಗೂ ನಗರದ ಪ್ರಮುಖ ರಸ್ತೆಗಳಲ್ಲಿ ವಿಶ್ವೇಶ್ವರ ಸರ್ಕಲ್ ಮಾಜಿ ನಗರಸಭೆ ಅಧ್ಯಕ್ಷರು ಸೊರಬ ಸಿದ್ದರಾಜು ರವರು ಬಾದಾಮಿ ಹಾರ ಹಾಗೂ ನಗರದ ಸ್ಥಳೀಯರಾದ ಮಾರಿಗುಡಿ ಬೀದಿ ನಿವಾಸಿಗಳು ಸೇಬಿನ ಹಾರ ಹಾಕಿ ಸಾರ್ವಜನಿಕರು ಕಾದು ಕುಳಿತು ನಗರದ ಸುತ್ತಮುತ್ತ ಸ್ಥಳೀಯರು ಕೂಡ ತಾಯಿ ದೇವಸ್ಥಾನದ ಹತ್ತಿರ ಬಂದು ಕಾದು ಕುಳಿತು ಅವರನ್ನು ಬರುವುದೇ ಜಾತ್ಯತೀತವಾಗಿ ಎಲ್ಲರೂ ಸೇರಿ ಬಡಾವಣೆಗೆ ಮುಖ್ಯಮಂತ್ರಿಗಳು ಸಿದ್ದರಾಮಯ್ಯ ಬರುತ್ತಿರುವುದೇ ನಮ್ಮ ಮಾರಿಗುಡಿಗೆ ಬರುತ್ತಿರುವುದು ನಮ್ಮ ಭಾಗ್ಯ ಆದರೆ ನಾವು ಅವರಿಗೆ ಟಿವಿ ಮುಖಾಂತರ ದೊಡ್ಡ ವೇದಿಕೆ ಮುಖಾಂತರ ವೀಕ್ಷಿಸುತ್ತಿದ್ದೇವೆ ಆದರೆ ನಮ್ಮ ಮನೆಯ ಮುಂದೆ ಬರುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನಾವು ಕನಸು ಕಾಣುತ್ತಿದ್ದಿದ್ದು ನೆನಸಾಯ್ತು ಎಂದು ಸ್ಥಳೀಯರು ಅಭಿಪ್ರಾಯ ವ್ಯಕ್ತಪಡಿಸಿದರು ಹಾಗೂ ಅವರಿಗೆ ಹೃದಯಪೂರ್ವಕವಾಗಿ ಸ್ವಾಗತಿಸಲು ಪ್ರಾರಂಭದಿಂದಲೇ ಕುಕ್ಕೆಯಲ್ಲಿ ಗಮಗಮ ಅನ್ನುತ್ತಿರುವ ಗುಲಾಬಿ ಹೂಗಳು ಇಟ್ಟುಕೊಂಡು ಬಹಳ ಅದ್ದೂರಿಯ ಮುಖಾಂತರ ಅವರು ಇಳಿದಿದ್ದ ಸ್ಥಳದಿಂದಲೂ ಕೂಡ ದೇವಸ್ಥಾನದವರೆಗೂ ಕೂಡ ಹೂವಿನ ಸ್ವಾಗತಿಸುವ ಮೂಲಕ ಬಹಳ ಅದ್ದೂರಿಯಾಗಿ ಬರಮಾಡಿಕೊಂಡರು

ಸಮಾಜದ ಪರಿವರ್ತನೆಗೆ ಬಸವಣ್ಣ ನವರ ವಿಚಾರಗಳು ಅತ್ಯಗತ್ಯ ಸಮಾಜಿಕ ನ್ಯಾಯದಿಂದ ವಂಚಿತರಾದವರ ಪರವಾಗಿ ನಾನು ರಾಜಕರಣ ಮಾಡುತ್ತಿದ್ದೇವೆ ನನ್ನ ಇಡಿ ರಾಜಕೀಯ ಜೀವನದ 42ವರ್ಷಗಳಿಂದಲೂ ಜನರು ನನ್ನನ್ನು ಬೆಂಬಲಿಸುತ್ತಿದ್ದಾರೆ ನಮ್ಮ ಸರ್ಕಾರ ಜನಪರವಾದ ಕೆಲಸ ಮಾಡಿದ್ದು ಮುಂಬರುವ 2028ರ ಚುನಾವಣೆಯಲ್ಲಿ ರಾಜ್ಯದ ಜನರು ಮತ್ತೆ ಕಾಂಗ್ರೆಸ್ ಪಕ್ಷವನ್ನು ಗೆದ್ದೇ ಗೆಲ್ಲಿಸುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು

ನಾನು ರಾಜಕಾರಣ ಮಾಡುವುದೇ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಅವಕಾಶವಂಚಿತರ ಪರವಾಗಿ ಎಂದರು. ನಾನು 1984 ರಲ್ಲಿ ಮಂತ್ರಿಯಾದೆ. 42 ವರ್ಷಗಳಿಂದ ನನ್ನನ್ನು ನೀವು ಬೆಂಬಲಿಸುತ್ತಿದ್ದೀರಿ. ನಿಮ್ಮ ಉಪಕಾರ ಮರೆಯಲು ಸಾಧ್ಯವಿಲ್ಲ. ಮಹಿಳೆಯರ ಪರವಾಗಿ ಕೆಲಸ ಮಾಡಿದ್ದೇವೆ. ಮಹಿಳೆಯರ ಆಶೀರ್ವಾದ ನಮಗೆ ಸಿಗುತ್ತದೆ. 2028 ಕ್ಕೆ ಮತ್ತೆ ನಾವು ಅಧಿಕಾರಕ್ಕೆ ಬರುತ್ತೇವೆ ಎಂದರು.

ಬಹಳ ದಿನಗಳಿಂದ ನಾನು ಹುಣಸೂರಿಗೆ ಬರಲು ಸಾಧ್ಯವಾಗಲಿಲ್ಲಾ. ಕ್ಷಮಿಸಿ ಎಂದರು. ಮಂಜುನಾಥ್ ರವರು ಕಳೆದ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಗಲಿಲ್ಲ. ನನಗೆ ವಿಷಾದವಿದೆ. ಎಚ.ಪಿ ಮಂಜುನಾಥ್ ಶಾಸಕರಾಗಿದ್ದರೆ. ಹುಣಸೂರು ತಾಲೂಕಿನಲ್ಲಿ ಅಭಿವೃದ್ಧಿಯಾಗುತ್ತಿತ್ತು ಮತ್ತು ಮಂತ್ರಿಯಾಗುತ್ತಿದ್ದರು. ತಿಳಿಸಿದರು

ತಾಲೂಕಿನ ಕುರುಬ ಅಭಿವೃದ್ಧಿ ಸಮಿತಿಯ ವತಿಯಿಂದ ಹಾಗೂ ಸಂಗೊಳ್ಳಿ ರಾಯಣ್ಣ ಸಮಿತಿ ಹಾಗೂ ಯುವಕರ ಸಂಘದ ವತಿಯಿಂದ ಮುಖ್ಯಮಂತ್ರಿಗಳಿಗೆ ಸಿದ್ದರಾಮಯ್ಯ ರವರಿಗೆ ಬೆಳ್ಳಿ ಗಧೆ ಹಾಗೂ ಕುರಿ ನೀಡಿ ಕಂಬಳಿ ಓದಿಸಿ ಸನ್ಮಾನಿಸಿ ಗೌರವಿಸಲಾಯಿತು.

ನಗರದ 18ನೇ ವಾರ್ಡಿನ ಮಾರಿಗುಡಿ ಬೀದಿ ಇತಿಹಾಸ ಉಳ್ಳ ಗ್ರಾಮ ದೇವತೆ ಶ್ರೀ ಮುತ್ತುಮಾರಮ್ಮ ದೇವಸ್ಥಾನದಲ್ಲಿ ನೂತನ ಬೆಳ್ಳಿ ರಥವನ್ನು ಸುಮಾರು 2.5 ಕೋಟಿ ರೂ. ವೆಚ್ಚದ ಬೆಳ್ಳಿ ರಥವು 12.5 ಅಡಿ ಎತ್ತರವಿದ್ದು, 125 ಕೆಜಿ ಬೆಳ್ಳಿಯನ್ನು ಬಳಸಿ ರಥವನ್ನು ನಿರ್ಮಿಸಲಾಗಿದೆ

ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರು ರಥವನ್ನು ಎಳೆಯುವುದರ ಮೂಲಕ ಉದ್ಘಾಟಿಸಿ ತಾಯಿ ಪೂಜೆ ಸಲ್ಲಿಸಿ ಮಂಗಳ ಆರತಿ ಪಡೆದರು

ಕಾರ್ಯಕ್ರಮದಲ್ಲಿ ಶಾಸಕ ರವಿಶಂಕರ್ ಮಾಜಿ ಶಾಸಕ ಎಚ್ ಪಿ ಮಂಜುನಾಥ್, ಕರ್ನಾಟಕ ಸರ್ಕಾರ ಗ್ಯಾರಂಟಿ ಯೋಜನೆಯ ಉಪಾಧ್ಯಕ್ಷೆ ಡಾ॥ ಪುಷ್ಪ ಅಮರ್ ನಾಥ್ ರಾಜ್ಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿ ಎಂ ತ್ರಿವೇಣಿ ನಗರಸಭೆ ಆಯುಕ್ತರು ಮಾನಸ ಮಾಜಿ ನಗರ ಸಭೆ ಮಾಜಿ ಅಧ್ಯಕ್ಷರು ಗಣೇಶ್ ಕುಮಾರಸ್ವಾಮಿ ಸದಸ್ಯರಾದ ರಮೇಶ್ ನರಸಿಂಹಯ್ಯ ಇನ್ನಿತರು ಹಾಜರಿದ್ದರು.

# ಪಟ್ಟದ್ದೇವರ ಸೇವಾಜೀವನ ಯುವ ಮಠಾಧಿಶರಿಗೆ ಮಾದರಿ



• ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ

ಈ ಭಾಗದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಕಳೆದ ಎರಡ್ಮೂರು ದಶಕಗಳಿಂದ ಸಲ್ಲಿಸುತ್ತಿರುವ ಸೇವಾ ಕಾರ್ಯಗಳು ನಮಗೆ ಸ್ಫೂರ್ತಿ ಬರುತ್ತಿದೆ. ಅವರ ಬಸವತತ್ವ ಪ್ರಸಾರ ಸೇವೆ ಯುವ ಮಠಾಧೀಶರಿಗೆ ಮಾದರಿಯಾಗಿದೆ ಎಂದು ಜದ್ಗುರು ಇಮ್ಮಡಿ ಸಿದ್ಧರಾಮ ಸ್ವಾಮೀಜಿ ಹೇಳಿದರು.

ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ವಿಶ್ವಗುರು ಬಸವಣ್ಣನವರ ಜಯಂತಿ, ವಚನ ಜಾತ್ರೆ-2026, ಡಾ.ಚನ್ನಬಸವ ಪಟ್ಟದ್ದೇವರ 27ನೆಯ ಸ್ಮರಣೋತ್ಸವ ಮತ್ತು ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ನಿಮಿತ್ತ ಹಿರೇಮಠ ಸಂಸ್ಥಾನ ಮತ್ತು ಅಮೃತ ಮಹೋತ್ಸವ ಸಮಿತಿ ವತಿಯಿಂದ ಭಾನುವಾರ ಆಯೋಜಿಸಿದ್ದ ಬಸವತತ್ವ ಪ್ರಸಾರಕರ ಸನ್ಮಾನ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಪರಮ ಪೂಜ್ಯರು ಬಸವತತ್ವವನ್ನು ಗಟ್ಟಿಯಾಗಿ ನಂಬಿ ಅವಿಶ್ರಾಂತವಾಗಿ ತತ್ವಪ್ರಸಾರಕ್ಕೆ ತಮ್ಮ ಜೀವನ ಮೀಸಲಿಟ್ಟಿದ್ದಾರೆ. ಗಡಿಭಾಗದಲ್ಲಿ ಅವರ ಶೈಕ್ಷಣಿಕ ಸೇವೆ ಆಶ್ಚರ್ಯ ಮೂಡಿಸುತ್ತದೆ. 75 ವರ್ಷಗಳು ಪೂಜ್ಯರು ಸಾರ್ಥಕ ಬದುಕು ಸಾಗಿಸಿದ್ದಾರೆ. ಅವರ ಮಾರ್ಗದರ್ಶನ ನಮಗೆ ನಿರಂತರವಾಗಿ ದೊರೆಯುತ್ತರಲೆಂದು ತಿಳಿಸಿದರು.

ಕೋರಣೇಶ್ವರ ಸ್ವಾಮೀಜಿ ಮಾತನಾಡಿ, ಪರಮ ಪೂಜ್ಯರು ಮಹಾರಾಷ್ಟ್ರದಲ್ಲಿ ನೂರು ಸ್ವಾಮಿಗಳ ಮಾಡುವಷ್ಟು ಕೆಲಸ ಒಬ್ಬರೆ ಮಾಡುತ್ತಿದ್ದಾರೆ. ಅವರ ಬಸವತತ್ವ ಪ್ರಸಾರ ನಿಷ್ಠೆ ಹಾಗೂ ಮರಾಠಿ ಭಾಷೆಯಲ್ಲಿ ಪ್ರಕಟಿಸಿದ ಶರಣ ಸಾಹಿತ್ಯದಿಂದಲೇ ಇಂದು ಮಹಾರಾಷ್ಟ್ರದಲ್ಲಿ ಲಿಂಗಾಯತ ಹೋರಾಟ ಆಂದೋಲನ ರೂಪವಾಗಿ ಪರಿವರ್ತನೆಯಾಗಿದೆ. ಇಂತಹ ಪೂಜ್ಯರು ನೂರಾರು ವರ್ಷ ಬಾಳಿ ನಮಗೆ ಆಶೀರ್ವದಿಸಲೆಂದು ನುಡಿದರು.

ಸಂಗನಬಸವ ಸ್ವಾಮೀಜಿ ಮಾತನಾಡಿ, ನಾವು ಮಹಾರಾಷ್ಟ್ರದಲ್ಲಿ ಕೆಲಸ ಮಾಡಲಿಕ್ಕೆ ನಮಗೆ ಡಾ.ಬಸವಲಿಂಗ ಪಟ್ಟದ್ದೇವರೆ ಪ್ರೇರಣೆಯಾಗಿದ್ದಾರೆ. ಅಹಮದಪುರದ ಪೂಜ್ಯ ಶ್ರೀ ಶಿವಲಿಂಗ ಶಿವಾಚಾರ್ಯರು ಅವರನ್ನು ಯಾವಾಗಲೂ ಸ್ಮರಿಸುತ್ತ ಅವರ ಧರ್ಮ ಪ್ರಸಾರದ ನಿಷ್ಠೆಯನ್ನು ಶ್ಲಾಘಿಸುತ್ತಿದ್ದರು ಎಂದು ನುಡಿದರು.

ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ನೇತೃತ್ವ ವಹಿಸಿದ್ದರು.

ಮಹಾಲಿಂಗ ಸ್ವಾಮೀಜಿ ಸಮ್ಮುಖ ವಹಿಸಿದ್ದರು. ಹಿರಿಯ ಮುಖಂಡ ಬಸವರಾಜ ಬುಳ್ಳಾ ಅಧ್ಯಕ್ಷತೆ ವಹಿಸಿದ್ದರು. ವಿಜಯಕುಮಾರ ಪಾಟೀಲ್, ಶ್ರೀಕಾಂತ ಸ್ವಾಮಿ, ವಿಜಯಕುಮಾರ ಶೆಟೆ, ಗುರುನಾಥ ರಾಜಗೀರ, ಅಶೋಕ ಮಾನುರೆ ಸೇರಿದಂತೆ ಹಲವರು ಇದ್ದರು. ಸೃಷ್ಟಿ ಕಲ್ಯಾಣೆ ನಿರೂಪಿಸಿದರು. ನಿರ್ಮಲಾ ಚಂದ್ರಕಾಂತ ಪಾಟೀಲ್ ವಂದಿಸಿದರು.

# ಪಡಿತರ ವಿತರಣೆಯಲ್ಲಿ ಅನ್ಯಾಯ: ನ್ಯಾಯಕ್ಕಾಗಿ ಮೊರೆ



• ಮಲ್ಲಮ್ಮ ನುಡಿ ವಾರ್ತೆ, ಗಂಗಾವತಿ

ಗಂಗಾವತಿ ನಗರದ ಶರಣ ಬಸವೇಶ್ವರ ನಗರದ ಪಡಿತರ ವಿತರಣೆಯಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ತಡೆಗಟ್ಟಿ ನನ್ನ ಕುಟುಂಬಕ್ಕೆ ನ್ಯಾಯ ಒದಗಿಸುವಂತೆ ಮತ್ತು ಅನಾರೋಗ್ಯ ಪೀಡಿತ ನನ್ನ ಪತಿಗೆ ರಕ್ಷಣೆ ನೀಡುವಂತೆ ಕೋರಿ ಮನವಿ

ಯಶೋಧ ಅವರು ಮಾತನಾಡಿ ನನ್ನ ಪತಿಯಾದ ನಾಗರಾಜ ಅವರು ನಾಗರಾಜ ನ್ಯಾಯಬೆಲೆ ಅಂಗಡಿ ಲಿಂಗರಾಜ ಕ್ಯಾಂಪ್ ಇದ್ದು ಕಳೆದ 20 ವರ್ಷಗಳಿಂದ ಗಂಗಾವತಿ ನಗರದ ಶರಣ ಬಸವೇಶ್ವರ ನಗರದ ಪಡಿತರ ಚೀಟಿದಾರರಿಗೆ ಪ್ರಾಮಾಣಿಕವಾಗಿ ನ್ಯಾಯಬೆಲೆ ಅಂಗಡಿಯ ಮೂಲಕ ಆಹಾರ ಧಾನ್ಯ ವಿತರಿಸುತ್ತಾ ಬಂದಿದ್ದಾರೆ. ಇದು ನಮ್ಮ ಕುಟುಂಬದ ಜೀವನೋಪಾಯಕ್ಕೆ ಇರುವ ಏಕೈಕ ಆಧಾರವಾಗಿದೆ. ಆದರೆ ಕಳೆದ ಕೆಲವು ದಿನಗಳಿಂದ ಅದೇ ನಗರದ ಪದ್ಮಾವತಿ ಸೊಸೈಟಿಯ ಬಿಡುಗಡೆಯಾದ ಶ್ರೀ ಹುಡೇಜಾಲಿ ಇವರು ಗ್ರಾಮೀಣ ಭಾಗದ ಗೋನಾಳ ಡಾಕ್ಟರ್ ಕ್ಯಾಂಪ್ ಮುಂತಾದ ಕಡೆ ಹಂಚಿಕೆ ಅಧಿಕಾರ ಹೊಂದಿದ್ದರೂ, ತಮ್ಮ ರಾಜಕೀಯ ಪ್ರಭಾವ ಬಳಸಿ ಗಂಗಾವತಿ ನಗರದ ನಮ್ಮ ನ್ಯಾಯಬೆಲೆ ಅಂಗಡಿಗೆ ಒಳಪಡುವ ಗ್ರಾಹಕರಿಗೆ ಬೆದರಿಕೆ ಮತ್ತು ಒತ್ತಾಯ. 'ನಮ್ಮ ಅಂಗಡಿಯಲ್ಲೇ ಪಡಿತರ ಪಡೆಯಬೇಕು' ಎಂದು ಗ್ರಾಹಕರು ಹಾದಿ ತಪ್ಪಿಸಿ ನಿಯಮಬಾಹಿರವಾಗಿ ನಮ್ಮ ವ್ಯಾಪ್ತಿಯನ್ನು ಹೊಂದಿದ್ದಾರೆ ವಿತರಿಸಲಾಗುತ್ತಿದೆ. ನನ್ನ ಜೀವನದ ವಾಸ್ತವ ನನ್ನ ಪತಿಗೆ ಎರಡು ಬಾರಿ ಓಪನ್ ಹಾರ್ಟ್ ಸರ್ಜರಿ ಆಗಿದ್ದು ಅವರ ಆರೋಗ್ಯ ಸ್ಥಿತಿ ಅತ್ಯಂತ ಗಂಭೀರವಾಗಿದೆ ದಿನ ನನ್ನ ಪತಿಗೆ ಆಗುತ್ತಿರುವ ಈ ಅನ್ಯಾಯ ಮತ್ತು ರಾಜಕೀಯ ವ್ಯಕ್ತಿಗಳ ದೌರ್ಜನ್ಯವನ್ನು ತಡೆದುಕೊಳ್ಳಲಾಗದೆ ನನ್ನ ಪತಿ ಮಾನಸಿಕವಾಗಿ ಕುಸಿದುಹೋಗಿದ್ದಾರೆ. ಪ್ರಸ್ತುತ ಅವರು ಗಂಗಾವತಿಯ ಸಿದ್ದೇಶ್ವರ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 'ನನ್ನ ಪತಿಯ ಬದುಕು ನೀರಿನ ಮೇಲಿನ ಗುಳ್ಳೆಯಂತಾಗಿದೆ. ಅವರನ್ನು ನಂಬಿರುವ ನಾನು ಮತ್ತು ನನ್ನ ಇಬ್ಬರು ಹೆಣ್ಣು ಮಕ್ಕಳು ಇಂದು ಬೀದಿಪಾಲಾಗುವ ಭೀತಿಯಲ್ಲಿದ್ದೇವೆ.

ನಿಯಮ ಬಾಹಿರವಾದ ನ್ಯಾಯ ಬೆಲೆ ಅಂಗಡಿಕಾರರ ಅಧ್ಯಕ್ಷರು, ತಮ್ಮ ಅಧಿಕಾರ ಬಲದಿಂದ ನಿಯಮಾವಳಿ ಗಾಳಿಗೆ ತೂರಿದ್ದಾರೆ. ಯಾವುದೇ ಹೊಸ ಹಂಚಿಕೆ ಅಥವಾ ಕೇಂದ್ರ ಪ್ರಾರಂಭಕ್ಕೆ ಇರಬೇಕಾದ ಕನಿಷ್ಠ ಕಟ್ಟಡಗಳ ಒಪ್ಪಂದ ಪತ್ರ ಕೆ.ಇ.ಬಿ ಪರವಾನಗಿ ಪತ್ರ ಆಹಾರ ಇಲಾಖೆಯ ಅನುಮತಿ ಸ್ಥಳ ಪರಿಶೀಲನೆ ಮತ್ತು ಜಿಪಿಎಸ್ ಲೋಕೇಶನ್. ಗೋದಾಮು ವ್ಯವಸ್ಥಾಪಕರ ವರದಿ ಮತ್ತು ಆರ್‌ಸಿಸಿ ಕಟ್ಟಡದ ನಿಯಮಗಳು. ಎಲ್ಲವನ್ನೂ ಸಂಪೂರ್ಣವಾಗಿ ಉಲ್ಲಂಘಿಸಿ, ಕೇವಲ ಭ್ರಷ್ಟಾಚಾರ ಮತ್ತು ರಾಜಕೀಯ ಒತ್ತಡದಿಂದ ನನ್ನ ಪತಿಯ ಅಧಿಕಾರ ವ್ಯಾಪ್ತಿಗೆ ಇವರು ಕೈಹಾಕುತ್ತಿದ್ದಾರೆ.

ಇದು ಕೇವಲ ಕಾನೂನು ಬಾಹಿರವಲ್ಲದೆ, ಒಬ್ಬ ಬಡ ವಿತರಕನ ಮತ್ತು ಅವರ ಕುಟುಂಬದ ಮಾರಣಹೋಮಕ್ಕೆ ನಡೆಸುತ್ತಿರುವ ಸಂಚಾಗಿದೆ.

ನನ್ನ ಕಣ್ಣೀರಿನ ಕಳಕಳಿಯ ವಿನಂತಿ:

ಒಬ್ಬ ಸಹಾಯಕ ಮಹಿಳೆಯಾಗಿ, ಇಬ್ಬರು ಹೆಣ್ಣು ಮಕ್ಕಳ ತಾಯಿಯಾಗಿ ನಾನು ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುವುದೇನೆಂದರೆ, ದಯವಿಟ್ಟು ಈ ಕೂಡಲೇ ಸ್ಥಳ ಪರಿಶೀಲನೆ ನಡೆಸಿ, ನಿಯಮಬಾಹಿರವಾಗಿ ಪಡಿತರ ಹಂಚಿಕೆ ಮಾಡುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ನನ್ನ ಪತಿಯ ನ್ಯಾಯಬೆಲೆ ಅಂಗಡಿಯ ಪಡಿತರದಾರರು ಬೇರೆಡೆ ಹೋಗದಂತೆ ಮತ್ತು ಅವರಿಗೆ ಆಗುತ್ತಿರುವ ದೌರ್ಜನ್ಯ ನಿಲ್ಲುವಂತೆ ನೋಟಿಸ್ ಜಾರಿ ಮಾಡಿ, ನಮಗೆ ನ್ಯಾಯ ಒದಗಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ

ನ್ಯಾಯ ಸಿಗದಿದ್ದಲ್ಲಿ, ಅನಾರೋಗ್ಯ ಪೀಡಿತ ಪತಿ ಮತ್ತು ಮಕ್ಕಳೊಂದಿಗೆ ನಾವು ಆತ್ಮಹತ್ಯೆಯಂತಹ ಹಾದಿ ಹಿಡಿಯುವುದು ಎಂಬ ನೋವಿನ ಸಂಗತಿಯನ್ನು ತಮ್ಮ ಗಮನಕ್ಕೆ ತರುತ್ತಿದ್ದಾರೆ. ಎಂದು ತಮ್ಮ ಅಳಲನ್ನು ಶ್ರೀಮತಿ ಯಶೋಧ ಗಂಡ ನಾಗರಾಜ ಲಿಂಗರಾಜ ಕ್ಯಾಂಪ್ ಗಂಗಾವತಿ. ಇವರು ಮಾಧ್ಯಮದ ಮುಖಾಂತರ ಹೇಳಿಕೊಂಡರು.

ಪತಿಯಾದ ನಾಗರಾಜ ಅವರು ನಾಗರಾಜ್ ನ್ಯಾಯಬೆಲೆ ಅಂಗಡಿ ಲಿಂಗರಾಜ ಕ್ಯಾಂಪ್‌ನಲ್ಲಿ ಕಳೆದ 20 ವರ್ಷಗಳಿಂದ ಗಂಗಾವತಿ ನಗರದ ಶರಣ ಬಸವೇಶ್ವರ ನಗರದ ಪಡಿತರ ಚೀಟಿದಾರರಿಗೆ ಅತ್ಯಂತ ಪ್ರಾಮಾಣಿಕವಾಗಿ ನ್ಯಾಯಬೆಲೆ ಅಂಗಡಿ ಶರಣಬಸವೇಶ್ವರ ಮಾನ ವಿತರಿಸುತ್ತಾ ಬಂದಿದ್ದಾರೆ. ಇದು ನಮ್ಮ ಕುಟುಂಬದ ಜೀವನೋಪಾಯಕ್ಕೆ ಇರುವ ಏಕೈಕ ಆಧಾರವಾಗಿದೆ. ಆದರೆ ಕಳೆದ ಕೆಲವು ದಿನಗಳಿಂದ ಅದೇ ನಗರದ ಪದ್ಮಾವತಿ ಸೊಸೈಟಿಯ ಬಿಡುಗಡೆಯಾದ ಶ್ರೀ ಹುಡೇಜಾಲಿ ಶರಣಪ್ಪ (ಇವರು ಗ್ರಾಮೀಣ ಭಾಗದ ಗೋನಾಳ, ಡಾಕ್ಟರ್ ಕ್ಯಾಂಪ್ ಮುಂತಾದ ಕಡೆ ಹಂಚಿಕೆ ಅಧಿಕಾರ ಹೊಂದಿದ್ದರೂ), ತಮ್ಮ ರಾಜಕೀಯ ಪ್ರಭಾವ ಬಳಸಿ ಗಂಗಾವತಿ ನಗರದ ನಮ್ಮ ನ್ಯಾಯಬೆಲೆ ಅಂಗಡಿಗೆ ಒಳಪಡುವ ಗ್ರಾಹಕರಿಗೆ ಬೆದರಿಕೆ ಮತ್ತು ಒತ್ತಾಯ. "ನಮ್ಮ ಅಂಗಡಿಯಲ್ಲೇ ಪಡಿತರ ಪಡೆಯಬೇಕು' ಎಂದು ಗ್ರಾಹಕರನ್ನು ಹಾದಿ ತಪ್ಪಿಸಿ. ನಿಯಮಬಾಹಿರವಾಗಿ ನಮ್ಮ ವ್ಯಾಪ್ತಿಯ ಧಾನ್ಯಗಳನ್ನು ವಿತರಿಸಲಾಗುತ್ತಿದೆ.

# ಆದಿ ಗುರು ಶಂಕರರ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ, ಮುದಗಲ್

ಇಲ್ಲಿನ ಪುರಸಭೆ ಕಾರ್ಯಾಲಯದಲ್ಲಿ ಮಂಗಳವಾರ ಆದಿ ಗುರು ಶಂಕರ ಗುರುಗಳ ಜಯಂತಿ ಆಚರಣೆ ಆಚರಣೆ ಮಾಡಲಾಯಿತು.

ಆದಿ ಗುರುಗಳ ಭಾವಚಿತ್ರಕ್ಕೆ ಶಂಕರ ಗುರು ಭಾವಚಿತ್ರಕ್ಕೆ ಪುರಸಭೆ ಮುಖ್ಯಾಧಿಕಾರಿ ಪ್ರವೀಣ ಕುಮಾರ ಭೋಗಾರ ಪುಷ್ಪಾರ್ಚನೆ ಮಾಡಿದರು. ಸಿಬ್ಬಂದಿ ಚೆನ್ನಮ್ಮ ದಳವಾಯಿಮಠ ಪೂಜೆ ಸಲ್ಲಿಸಿದರು. ನಾಡ ಕಾರ್ಯಾಲಯ, ರೈತ ಸಂಪರ್ಕ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ಪ್ರಥಮ ದರ್ಜೆ ಕಾಲೇಜ ಸೇರಿದಂತೆ ವಿವಿಧ ಸರ್ಕಾರಿ ಕಛೇರಿಗಳಲ್ಲಿ ಆದಿಗುರು ಶಂಕರ ಗುರುಗಳ ಜಯಂತಿ ಆಚರಿಸಲಾಯಿತು.

ಉಪ ತಹಸಿಲ್ದಾರ್ ತುಳಜಾರಾಮ ಸಿಂಗ, ಪುರಸಭೆ ವ್ಯವಸ್ಥಾಪಕ ಸುರೇಶ ಹೊನ್ನಳ್ಳಿ, ಕಂದಾಯ ನಿರೀಕ್ಷಕ ಅಂತೋನಿ ರಾಜ್, ಸಿಬ್ಬಂದಿ ರಂಗನಾಥ್ ತಳವಾರ, ಹುಲಿಗೆಮ್ಮ, ಬಸವರಾಜ್, ಜಿಲಾನಿ ಪಾಷಾ, ಅಪ್ಸರ, ದೀಪಾ, ರೇಣುಕಾ, ಚನ್ನಮ್ಮ ದಳವಾಯಿಮಠ, ಶಿಕ್ಷಕ ಸುಭಾಷ್ ಚಂದ್ರ, ಸೇರಿದಂತೆ ಅನೇಕರಿದ್ದರು.

# ಲಕ್ಕಮ್ಮ ದೇವಿ ಮಹಾರಥೋತ್ಸವ




• ಮಲ್ಲಮ್ಮ ನುಡಿ ವಾರ್ತೆ, ಮುದಗಲ್

ಸಮೀಪದ ಕಮಲದಿನ್ನಿ ಗ್ರಾಮದ ಲಕ್ಕಮ್ಮದೇವಿ ಮಹಾರಥೋತ್ಸವ ಸಂಜೆ ಅದ್ಧುರಿಯಾಗಿ ಯಿಂದ ಜರುಗಿತು.

ಭಕ್ತರ ಆರಾಧ್ಯ ದೇವಿ ಲಕ್ಕಮ್ಮ ದೇವಿಗೆ ಬೆಳಗಿನ ಜಾವ ಪುಷ್ಪಾಲಂಕಾರ, ಕುಂಕುಮಾರ್ಚನೆ, ಅರಿಶಿನ ಲೇಪನ, ಕಳಸಾರೋಹಣ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು. ದೇವಿಗೆ ವಿಶೇಷ ಪೂಜೆಯಲ್ಲಿ ಹೂವಿನ ಅಲಂಕಾರ, ಪರಂಪರೆಯ ಆಭರಣಗಳು ಮತ್ತು ವೈಭವದ ವಸ್ತ್ರಗಳಿಂದ ದೇವಿಯನ್ನು ಸಿಂಗರಿಸಲಾಗಿತ್ತು. ದೈವದವರಿಂದ ಮಹಿಳೆಯರಿಗೆ ಉಡಿ ತುಂಬುವ ಕಾರ್ಯ ಜರುಗಿತು. ನಾಡಿನ ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ 31 ಜೋಡಿ ಸಾಮೂಹಿಕ ವಿವಾಹಗಳು ಜರುಗಿದವು. ಅನ್ನಸಂತರ್ಪಣೆ ನಡೆಯಿತು. ಸಂಜೆ 6 ಗಂ–ಟೆಗೆ ವಾದ್ಯ ಮೇಳ, ಡೊಳ್ಳು ಕುಣಿತದೊಂದಿಗೆ ಅದ್ಧೂರಿಯಾಗಿ ಮಹಾ ರಥೋತ್ಸವ ಜರುಗಿ–ತು. ಕರಿಬಸವ ಶಿವಾಚಾರ್ಯರು ಮದ್ದಾನೇಶ್ವರ ಮಠ ಕುಷ್ಟಗಿ, ಸಿದ್ದಯ್ಯ ಸ್ವಾಮಿಗಳು ಬೂದಿಬಸವೇಶ್ವರ ಮಠ ಗಬ್ಬೂರು, ದೊಡ್ಡ ಬಸವಾರ್ಯ ತಾತನವರು ಸಜ್ಜಲಗುಡ್ಡ, ಮುರುಘೇಂದ್ರ ಶಿವಯೋಗಿಗಳು ಸಿದ್ದರಾಮೇಶ್ವರ ಗುರುಮಠ ಯರಡೋಣಾ ಕ್ರಾಸ್, ಪ್ರಕಾಶ ಶರಣಯ್ಯ ಹಿರೇಮಠ ಚಿತ್ತಾಪುರ, ಪರಮಯ್ಯ ಸಿದ್ದಯ್ಯ ಒಡೆಯರ್ ಬಯ್ಯಾಪುರ ಸೇರಿ ಜನಪ್ರತಿನಿಧಿಗಳು, ಸುತ್ತಲಿನ ಗ್ರಾಮಗಳ ಭಕ್ತರು ಇದ್ದರು.

# ಅಕ್ಷಯ ತೃತೀಯಾ ನಿಮಿತ್ತ ರಾಯರಿಗೆ ಗಂಧ ಲೇಪನ



• ಮಲ್ಲಮ್ಮ ನುಡಿ ವಾರ್ತೆ, ಮುದಗಲ್

ಮುದಗಲ್ : ಪಟ್ಟಣದ ತೃತೀಯ ಮಂತ್ರಾಲಯದಲ್ಲಿ ಶ್ರೀ ರಾಘವೇಂದ್ರ ಮಹಾಸ್ವಾಮಿಗಳ ಮಠದಲ್ಲಿ ಅಕ್ಷಯ ತೃತೀಯಾ ನಿಮಿತ್ಯ ರಾಯರಿಗೆ ಗಂಧದ ಲೇಪನ ಕಾರ್ಯ ಜರುಗಿತು.

ಮಂತ್ರಾಲಯವೆಂದೇ ಕರೆಯಲ್ಪಡುವ ಕಿಲ್ಲಾದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಅಕ್ಷಯ ತೃತೀಯಾ ನಿಮಿತ್ಯ ರಾಯರ ಬೃಂದಾವನಕ್ಕೆ ಗಂಧ ಲೇಪನದ ಮೂಲಕ ಅಲಂಕೃತಗೊಳಿಸಿರುವುದು ವಿಶೇಷವಾಗಿತ್ತು.

ಪಟ್ಟಣದ ಕಿಲ್ಲಾದಲ್ಲಿರುವ ರಾಯರ ಮಠದಲ್ಲಿ ಅಷ್ಟೋತ್ತರ, ವಿಶೇಷ ಪೂಜೆಯ ಮೂಲಕ ರಾಯರ ಬೃಂದಾವನಕ್ಕೆ ಗಂದವನ್ನು ಲೇಪಿಸಿ ಅಲಂಕೃತಗೊಳಿಸಲಾಗಿತ್ತು. ಎಲ್ಲ ಧಾರ್ಮಿಕ ವಿಧಿ ವಿಧಾನಗಳು ಶ್ರೀಮಠದ ಅರ್ಚಕರಾದ ಮಧ್ವಚಾರ್ಯ ಮತ್ತು ಸೇತುರಾಮಾಚಾರ್ಯ ನೇತೃತ್ವದಲ್ಲಿ ಜರುಗಿದವು. ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರು ಹಾಗೂ ನೂರಾರು ಸಮಖ್ಯೆ ಭಕ್ತಗಣ ಭಾಗಿಯಾಗಿದ್ದರು.

# ಅಪರಿಚಿತ ವ್ಯಕ್ತಿ ಸಾವು: ಮನವಿ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಕುಡತಿನಿ ಪಟ್ಟಣದ ನಯನಸ್ವಾಮಿ ಹೋಟೆಲ್ ನ ಪಕ್ಕದ ಕಟ್ಟೆಯ ಮೇಲೆ ಸುಮಾರು 50–55 ವರ್ಷದ ಅಪರಿಚಿತ ವ್ಯಕ್ತಿಯೊಬ್ಬರು ಮಲಗಿ ಅನಾರೋಗ್ಯದಿಂದ ಚೇತರಿಸಿಕೊಳ್ಳದೇ ಏ.18 ರಂದು ಮೃತಪಟ್ಟಿದ್ದು, ಮೃತರ ಗುರುತು ಪತ್ತೆಯಾಗಿಲ್ಲದ ಕಾರಣ, ವಾರಸುದಾರರನ್ನು ಪತ್ತೆಹಚ್ಚಲು ಕುಡುತಿನಿ ಪೊಲೀಸರು ಸಾರ್ವಜನಿಕರ ಸಹಾಯ ಕೋರಿದ್ದಾರೆ.

ಮೃತರ ಪತ್ತೆಗಾಗಿ ಅವರ ಅಂಗಿ ಮತ್ತು ಪ್ಯಾಂಟ್ ಜೇಬುಗಳನ್ನು ಪರಿಶೀಲಿಸಿದಾಗ ಯಾವುದೇ ಗುರುತಿನ ಚೀಟಿ ಅಥವಾ ಮೊಬೈಲ್ ಪತ್ತೆಯಾಗಿರುವುದಿಲ್ಲ. ಸದ್ಯ ಮೃತದೇಹವನ್ನು ಬಳ್ಳಾರಿಯ ಬಿಎಂಸಿಆರ್‌ಸಿ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿದೆ. ಈ ಕುರಿತು ಕುಡುತಿನಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತರ ಚಹರೆ:

ಸಾಧಾರಣ ಮೈಕಟ್ಟು, ಕಪ್ಪು ಮೈಬಣ್ಣ ಹೊಂದಿದ್ದು, ಬೂದು ಬಣ್ಣದ ತುಂಬು ತೋಳಿನ ಅಂಗಿ (ಅದರ ಮೇಲೆ ನೀಲಿ ಹಾಗೂ ಬಿಳಿ ಬಣ್ಣದ ಎಲೆ ಮತ್ತು ಹೂವಿನ ಚಿತ್ರವಿದೆ) ಮತ್ತು ಬೂದು ಬಣ್ಣದ ಪ್ಯಾಂಟ್ ಧರಿಸಿದ್ದಾರೆ.

ಅಪರಿಚಿತ ಮೃತ ವ್ಯಕ್ತಿಯ ಬಗ್ಗೆ ಯಾರಿಗಾದರೂ ಮಾಹಿತಿ ಇದ್ದಲ್ಲಿ ಅಥವಾ ವಾರಸುದಾರರ ಬಗ್ಗೆ ಸುಳಿವು ಸಿಕ್ಕಲ್ಲಿ ತೋರಣಗಲ್ಲು ಡಿ.ಎಸ್.ಪಿ– 9480803010, ಕುರುಗೋಡು ವೃತ್ತ ಸಿ.ಪಿ.ಐ–9480803039, ಕುಡುತಿನಿ ಪೊಲೀಸ್ ಠಾಣೆ ಪಿ.ಎಸ್.ಐ– 9480803078 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

# ಭಾರತೀಯ ಲಲಿತ ಕಲೆ ಉಳಿಸುವ ಕೆಲಸ ನಮ್ಮೆಲ್ಲರದು



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಭಾರತೀಯ ಲಲಿತ ಕಲೆಗಳನ್ನು ಉಳಿಸುವ ನಿಟ್ಟಿನಲ್ಲಿ ನಮ್ಮೆಲ್ಲರ ಜವಾಬ್ದಾರಿ ಇದೆ ಎಂದು ಸಂಡೂರು ಸರಕಾರಿ ಪದವಿ ಕಾಲೇಜಿನ ಅಧ್ಯಾಪಕರು ಡಾ.ಅಪ್ಪಕಾಯ ಮಹೇಶ ಶರ್ಮ ಎಂದರು. ತುಂಗಾ ಗಂಗಾ ಸಾಂಸ್ಕೃತಿಕ ಕಲಾ ಟ್ರಸ್ಟ್ ವತಿಯಿಂದ ರಾಘವೇಂದ್ರ ಮಠದ ಸಭಾಮಂಟಪದಲ್ಲಿ ಹಮ್ಮಿಕೊಂಡ ವೈಶಾಕ ಮಾಸ ಸಾಂಸ್ಕೃತಿಕ ಸಂಭ್ರಮ 2026 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಧಾರ್ಮಿಕ ಕಾರ್ಯಕ್ರಮದ ಜೊತೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡಿಸಲು ಪ್ರೋತ್ಸಾಹ ನೀಡಬೇಕೆಂದರು.

ಬಿಪಿಎಸ್ಸಿ ಶಾಲೆಯ ಪ್ರಾಂಶುಪಾಲರು ಅನಿಲ್ ಕುಮಾರ್ ಅವರು ತುಂಗ ಗಂಗಾ ಸಾಂಸ್ಕೃತಿಕ ಕಲಾ ಟ್ರಸ್ಟ್ ವತಿಯಿಂದ ಇಂತಹ ಅಪರೂಪದ ಕಲಾ ಪ್ರದರ್ಶನಗಳು ನಡಿಸಿತ್ತಿರುವುದು ಅಭಿನಂದನೀಯ ಎಂದರು. ಟ್ರಸ್ಟ್ ವತಿಯಿಂದ ವಿವಿಧ ರಂಗಗಳಲ್ಲಿ ಸೇವೇ ಸಲ್ಲಿಸಿದ ಸಾಧಕರು ವೈದ್ಯರಾದ ಶ್ರೀಧರಮೂರ್ತಿ, ಎಸ್.ಕ.ಅಜಯ್, ಬಿ. ಕೆ. ಶ್ರೀಕಾಂತ್, ಎಸ್.ಕೆ. ಪ್ರಣೀತ ಅಜಯ್ ಗೆ ತುಂಗಾ ವೈದ್ಯ ರತ್ನ ಪ್ರಶಸ್ತಿ, ಡಾ.ಶ್ರೀನಾಥ್, ಹನುಮಂತ ಆಚಾರ್ ಗೆ ತುಂಗಾ ಸಮಾಜ ಸೇವಾ ರತ್ನ, ಡಾ. ಮಹೇಶ್ ಶರ್ಮ, ಅನಿಲ್ ಕುಮಾರ್ ಗೆ ತುಂಗಾ ಶಿಕ್ಷಣ ರತ್ನ, ಪ್ರಸನ್ನ ಆಚಾರ್ ಗೆ ತುಂಗಾ ಕಲಾ ಪೋಷಕ ರತ್ನ, ಶ್ರೀಜಾ ಗೆ ತುಂಗಾ ರಂಗ ಕಲಾ ರತ್ನ ಪ್ರಶಸ್ತಿ ನೀಡಿ ಗೌರವಿಸಿದರು. ನಂತರ ಶ್ರೀಜಾ ತಂಡದ ಶ್ರೀನಿವಾಸ ಕಲ್ಯಾಣ ಭಕ್ತಿ ಪ್ರದಾನ ನಾಟಕ ಭಕ್ತರನ್ನು ರೇಂಜಿಸಿತು. ಕಾರ್ಯಕ್ರಮದಲ್ಲಿ ಕಿಸ್ಕಿಂದ ವಿಶ್ವವಿದ್ಯಾಲಯದ ಕುಲಸಚಿವರು ಡಾ. ರಾಜು ಜಡರ್, ಕಣೆಕಲ್ ಶ್ರೀಧರ್, ವಿಠ್ಠಲ ದೇಸಾಯಿ, ವಿಜಯ ವಿಠ್ಠಲ, ರಾಮರಾವ್ ಕುಲಕರ್ಣಿ, ಸಿಮೆಂಟ್ ಗಿರಿ, ಅಶೋಕ್ ಕುಲಕರ್ಣಿ, ವೀರೇಶ್, ಅಮೃತ, ದೀಕ್ಷಾ, ಸಿಂಧು, ಪ್ರೀತಿ, ರಾದಾಕೃಷ್ಣ, ತನ್ಮಯಿ, ವಿದ್ಯಾ, ಪರಿಮಳ, ಬಾಂದವಿ , ಶೈನು, ಸೋನು, ಮುಂತಾದವರು ಇದ್ದರು. ಟಿ.ನಾಗಭೂಷಣ್ ನಿರೂಪಿಸಿದರು. ಸಂಸ್ಥೆಯ ಕಾರ್ಯದರ್ಶಿ ವಿ. ರಾಮಚಂದ್ರ ವಂದಿಸಿದರು.

# ಪೂಜ್ಯ ಬಸವಲಿಂಗ ಪಟ್ಟದೇವರ ಅಮೃತ ಮಹೋತ್ಸವ: ಚವ್ಹಾಣ ಶುಭಾಶಯ



• ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ

ಹಿರೇಮಠ ಸಂಸ್ಥಾನದ ಪೂಜ್ಯ ಡಾ. ಚನ್ನಬಸವ ಪಟ್ಟದೇವರ 27ನೇ ಸ್ಮರಣೋತ್ಸವ ಹಾಗೂ ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷರು, ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯ ನಾಡೋಜ ಡಾ.ಬಸವಲಿಂಗ ಪಟ್ಟದೇವರ ಅಮೃತ ಮಹೋತ್ಸವದ ಅಂಗವಾಗಿ ಮಾಜಿ ಸಚಿವರು ಹಾಗೂ ಔರಾದ್(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಏಪ್ರಿಲ್ 21ರಂದು ಪೂಜ್ಯರನ್ನು ಭೇಟಿ ಮಾಡಿ ಆಶೀರ್ವಾದ ಪಡೆದು ಶುಭಾಶಯಗಳನ್ನು ಸಲ್ಲಿಸಿದರು.

ಅಪ್ಪಟ ಬಸವಾನುಯಾಯಿಯಾದ ಪೂಜ್ಯ ಡಾ.ಬಸವಲಿಂಗ ಪಟ್ಟದೇವರು ತಮ್ಮ ಜೀವನವನ್ನೇ ಬಸವ ತತ್ವಗಳ ಪ್ರಸಾರ ಹಾಗೂ ಅನುಷ್ಠಾನಕ್ಕೆ ಸಮರ್ಪಿಸಿಕೊಂಡಿದ್ದಾರೆ. ಬಸವಣ್ಣನವರ ಸಮಾನತೆ, ಸೇವಾ ಮನೋಭಾವ, ದಾಸೋಹ ಮತ್ತು ಶರಣ ಸಂಸ್ಕೃತಿಯ ಮೌಲ್ಯಗಳನ್ನು ನಾಡಿನಾದ್ಯಂತ ಪಸರಿಸುವಲ್ಲಿ ಅವರು ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಬಡವರು, ನಿರ್ಗತಿಕರು ಮತ್ತು ಅನಾಥ ಮಕ್ಕಳಿಗೆ ಆಶ್ರಯದಾತರಾಗಿ ಅಸಂಖ್ಯಾತ ಮಕ್ಕಳನ್ನು ದತ್ತು ಪಡೆದು ಅವರ ಶಿಕ್ಷಣ, ಸಂಸ್ಕಾರ ಹಾಗೂ ಭವಿಷ್ಯ ರೂಪಿಸಲು ನಿರಂತರವಾಗಿ ಶ್ರಮಿಸುತ್ತಿದ್ದಾರೆ.

ಅಕ್ಷರ ದಾಸೋಹ ಮತ್ತು ಅನ್ನ ದಾಸೋಹವನ್ನು ಸಮನ್ವಯಗೊಳಿಸಿ ಮಾನವೀಯ ಸೇವೆಯ ಸಾರ್ಥಕತೆಯನ್ನು ತೋರಿಸುತ್ತಿರುವ ಶ್ರೀಗಳು, ಶಿಕ್ಷಣ ಮತ್ತು ಸಮಾಜದ ಬಲವರ್ಧನೆಗೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿದ್ದಾರೆ. ಅನೇಕ ಶೈಕ್ಷಣಿಕ ಹಾಗೂ ಧಾರ್ಮಿಕ ಚಟುವಟಿಕೆಗಳ ಮೂಲಕ ಯುವಜನತೆಯನ್ನು ಸನ್ಮಾರ್ಗದತ್ತ ಕೊಂಡೊಯ್ಯಲು ಮಾಡುತ್ತಿರುವ ಸೇವೆ ಅನನ್ಯ ಎಂದು ಸೇವೆಯನ್ನು ಕೊಂಡಾಡಿದ್ದಾರೆ.

ಕರ್ನಾಟಕ ಮಠಾಧೀಶರ ಒಕ್ಕೂಟದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ ಪೂಜ್ಯರು, ಅಧ್ಯಾತ್ಮಿಕ ಗುರುಗಳಾಗಿ ಬೀದರ ಜಿಲ್ಲೆಯ ಕೀರ್ತಿಯನ್ನು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಬೆಳಗಿಸುತ್ತಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಹಲವು ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತಿದ್ದು, ಸಮಾಜದ ಏಕತೆ ಮತ್ತು ಸೌಹಾರ್ದತೆಗೆ ಬಲ ನೀಡುತ್ತಿದೆ.

ಅಮೃತ ಮಹೋತ್ಸವ ಕಾರ್ಯಕ್ರಮಕ್ಕೆ ಉಪರಾಷ್ಟ್ರಪತಿಗಳು, ರಾಜ್ಯಪಾಲರು ಸೇರಿದಂತೆ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಪ್ರಮುಖರು, ಧರ್ಮಗುರುಗಳು ಆಗಮಿಸುತ್ತಿರುವುದಕ್ಕೆ ಸಂತೋಷವಾಗುತ್ತಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಬೆಳವಣಿಗೆಗೆ ನಿರಂತರವಾಗಿ ಶ್ರಮಿಸುತ್ತಿರುವ ಪೂಜ್ಯ ಡಾ.ಬಸವಲಿಂಗ ಪಟ್ಟದೇವರ ಸೇವಾ ಕಾರ್ಯಗಳು ಇನ್ನಷ್ಟು ವಿಸ್ತಾರವಾಗಲಿ. ಅವರಿಗೆ ಇನ್ನಷ್ಟು ಶಕ್ತಿ, ಆರೋಗ್ಯ ಹಾಗೂ ದೀರ್ಘಾಯುಷ್ಯ ಲಭಿಸಿ ಶತಮಾನೋತ್ಸವವನ್ನು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಆಚರಿಸುವಂತಾಗಲಿ ಎಂದು ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಶುಭ ಕೋರಿದ್ದಾರೆ.

# ಲಕ್ಷ್ಮಿದೇವಿ ಮೂರ್ತಿ ಪ್ರತಿಷ್ಠಾಪನೆ ಪ್ರವಚನ



• ಮಲ್ಲಮ್ಮ ನುಡಿ ವಾರ್ತೆ, ಕಮಲನಗರ

ತಾಲೂಕಿನ ಹಕ್ಯಾಳ ಗ್ರಾಮದಲ್ಲಿ ಶ್ರೀ ಲಕ್ಷ್ಮಿ ದೇವಸ್ಥಾನದ ನೂತನ ಮೂರ್ತಿ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಮಹೋತ್ಸವದ ಅಂಗವಾಗಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಪೂಜ್ಯಶ್ರೀ ಹಾವಗಿಲಿಂಗೇಶ್ವರ ಶಿವಾಚಾರ್ಯರು, ಹಲಬರ್ಗಾ ಅವರಿಂದ ಸದರಿ ಕಾರ್ಯಕ್ರಮ ಸಂಪನ್ನಗೊಳ್ಳಲಾದೆ. ಧಾರ್ಮಿಕ ಪ್ರವಚನ: ಏಪ್ರಿಲ್ 22 ಮತ್ತು 23ರಂದು ಸಂಜೆ 7:30ರಿಂದ 9:00ರವರೆಗೆ ಅಧ್ಯಾತ್ಮಿಕ ಪ್ರವಚನ ನಡೆಯಲಿದೆ. ಧರ್ಮ ಸಭೆ: ಏಪ್ರಿಲ್ 24ರಂದು ಬೆಳಿಗ್ಗೆ 11:00 ಗಂಟೆಗೆ ಧರ್ಮ ಸಭಾ ಕಾರ್ಯಕ್ರಮ ಜರುಗಲಿದೆ.

ಸ್ಥಳೀಯ ಮಹಾಲಕ್ಷ್ಮಿ ದೇವಾಲಯದ ಆವರಣದಲ್ಲಿ ನಡೆಯಲಿರುವ ಈ ಭಕ್ತಿ ಕಾರ್ಯಕ್ರಮಕ್ಕೆ ಗ್ರಾಮಸ್ಥರು ಹಾಗೂ ಭಕ್ತಾದಿಗಳು ಪಾಲಗೊಳ್ಳುವಂತೆ ತಿಳಿಸಿದ್ದಾರೆ.



ಕುರುಗೋಡು. ಪಟ್ಟಣದಲ್ಲಿ ವೀರಶೈವ ಕ್ಷೇಮಾಭಿವೃದ್ಧಿ ಸಂಘ ಹಾಗೂ ವೀರಶೈವ ಯುವಶಕ್ತಿ ಸಂಘದ ವತಿಯಿಂದ ಶ್ರೀ ಜಗಜ್ಯೋತಿ ಬಸವೇಶ್ವರ 893ನೇ ಜಯಂತಿ ಪ್ರಯುಕ್ತ ಭವ್ಯವಾದ ಬಸವೇಶ್ವರ ಭಾವಚಿತ್ರದೊಂದಿಗೆ ವಿಜೃಂಭಣೆಯಿಂದ ಸೋಮವಾರ ಮೆರವಣಿಗೆ ಜರುಗಿತು. ಪ್ರಾರಂಭದಲ್ಲಿ ಮುತ್ತೈದೆಯರ ಕಳಸ, ಡೊಳ್ಳು ಮೇಳಾ ಹಾಗೂ ವಾದ್ಯಗಳೊಂದಿಗೆ ವಿಜೃಂಭಣೆಯಿಂದ ಟ್ರಾ ಕ್ಟರ್ ಮೂಲಕ ಭವ್ಯವಾದ ಬಸವೇಶ್ವರ ಭಾವಚಿತ್ರದ ಮೆರವಣಿಗೆ ಶ್ರೀ ದೊಡ್ಡಬಸವೇಶ್ವರ ದೇವಸ್ಥಾನದಿಂದ ಪ್ರಾರಂಭಗೊಂಡು ಮುಷ್ಟಗಟ್ಟೆ ರಸ್ತೆ, ಗೌಡರ ಓಣಿ, ರಾಜ ಬೀದಿ, ಗೆಣಿಕೆಹಾಳ್ ರಸ್ತೆ, ಮುಖ್ಯವೃತ್ತದ ಮೂಲಕ ದೇವಸ್ಥಾನಕ್ಕೆ ಆಗಮಿಸಿ ಸಮಾರೋಪಗೊಂಡಿತು. ಈ ಸಂದರ್ಭದಲ್ಲಿ ವೀರಶೈವ ಕ್ಷೇಮಾಭಿವೃದ್ಧಿ ಸಂಘ ಹಾಗೂ ವೀರಶೈವ ಯುವಶಕ್ತಿ ಸಂಘದ ಪದಾಧಿಕಾರಿಗಳು, ಮುಖಂಡರು, ಯುವಕರು ಹಾಗೂ ಇತರರು ಇದ್ದರು.

# ಸಮ ಸಮಾಜದ ನಿರ್ಮಾತ್ರು ಬಸವಣ್ಣ : ಸಜ್ಜನ



• ಮಲ್ಲಮ್ಮ ನುಡಿ ವಾರ್ತೆ, ಲಿಂಗಸುಗೂರ

ಬಸವಣ್ಣನವರ ತತ್ವ ಆದರ್ಶಗಳನ್ನು ಪಾಲಿಸಬೇಕು, ಜಾತಿ ನಿರ್ಮೂಲನೆ, ಸಮ ಸಮಾಜ ನಿರ್ಮಾಣ, ಕಾಯಕವೇ ಕೈಲಾಸ, ಅರಿವೇ ಗುರು ತತ್ವಸಿದ್ಧಾಂತಗಳ ತಿಳಿದುಕೊಳ್ಳಬೇಕು ಜೊತೆಗೆ ಆಚರಣೆ ಮಾಡುತ್ತಾ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಿಕ್ಷಕ ಶರಣಪ್ಪ ಸಜ್ಜನ್ ಅಭಿಪ್ರಾಯ ಪಟ್ಟರು.

ತಾಲೂಕಿನ ಗೋನವಾಟ್ಲ ಗ್ರಾಮದಲ್ಲಿ ಬಸವ ಜಯಂತಿ ಅಂಗವಾಗಿ ವಿಶ್ವಗುರು, ಸಾಂಸ್ಕೃತಿಕ ನಾಯಕ ಬಸವಣ್ಣ, ಸಿದ್ದೇಶ್ವರ ಭಾವಚಿತ್ರಗಳಿಗೆ ಪೂಜೆ ಸಲ್ಲಿಸಿ ನಂತರ ಮಾತನಾಡಿದ ಅವರು, ಶರಣರು, ಸಂತರು, ವಚನಕಾರರು, ಸಾಹಿತಿಗಳು, ಬರಹಗಾರರು, ಅನೇಕರು ಹಿಂದಿನಿಂದಲೂ ಕಾಯಕ ದಾಸೋಹ ಮಾಡುತ್ತಾ ಸಮಾಜದಲ್ಲಿ ಸ್ವಲ್ಪಮಟ್ಟಿಗೆ ಸತ್ಯ ಉಳಿಸಿಕೊಂಡು ಬಂದಿದ್ದಾರೆ. ಇತ್ತೀಚೆಗೆ ದಿನಗಳಲ್ಲಿ ಸಂಸ್ಕಾರ, ಹಿರಿಯರು ಎನ್ನುವ ಗೌರವ ಮರೆಯುತ್ತಿದ್ದಾರೆ. ಇದರಿಂದ ಸಮಾಜದಲ್ಲಿ ಕೊಲೆ, ಸುಲಿಗೆ, ಅನಾಚಾರ, ಅಹಿತಕರ ಘಟನೆಗಳು ನಡೆಯುತ್ತಿವೆ. ಪಾಲಕರು ನಿಮ್ಮ ಮಕ್ಕಳಿಗೆ ಮನೆಯಲ್ಲಿ ಶಿಸ್ತು, ಸಂಸ್ಕಾರ, ಹಿರಿಯರಿಗೆ ಗೌರವ ನೀಡುವುದನ್ನು ಕಲಿಸಬೇಕು, ಜೊತೆಗೆ ಪ್ರತಿಯೊಬ್ಬರೂ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು ಎಂದು ಹೇಳಿದರು.

ಈ ವೇಳೆ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಗಂಗಾಧರ ನಾಯಕ, ಗೋಪಾಲ್ ಮಾಸ್ತರ, ಈರಯ್ಯಸ್ವಾಮಿ ಹಿರೇಮಠ, ಅಮರಪ್ಪ ಸಜ್ಜನ್, ಯಮನಪ್ಪ ಗೋಲಪಲಿ, ಬಸರಾಜಗೌಡ ಶಿವರಡ್ಡಿ, ರಂಗಣ್ಣ ನಾಯಕ, ಸೋಮನಾಥ ಹಿರೇಮಠ ಸೇರಿದಂತೆ ಇದ್ದರು.

# ಅನುಭವ ಮಂಟಪ ಜಗತ್ತಿನ ಮೊದಲ ಸಂಸತ್



• **ಮಲ್ಲಮ್ಮ ನುಡಿ ವಾರ್ತೆ, ಕುರುಗೋಡು**

ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪ ಜಗತ್ತಿನ ಮೊದಲ ಸಂಸತ್ ಆಗಿದ್ದು, ಜಗತ್ತಿಗೆ ಕಾಯಕದ ಮಹತ್ವವನ್ನು ಸಾರಿದ ಬಸವೇಶ್ವರರ ವಚನಗಳು ನಮ್ಮ ಜೀವನಕ್ಕೆ ದಾರಿದೀಪವಾಗಿರಲಿವೆ ಎಂದು ತಹಸೀಲ್ದಾರ್ ನರಸಪ್ಪ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಸೋಮವಾರ ನಡೆದ ಕಾಯಕಯೋಗಿ ಜಗಜ್ಯೋತಿ ಬಸವೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಾಡಿನ ಸಮಸ್ತ ಜನತೆಗೆ ಬಸವೇಶ್ವರ ಜಯಂತಿಯ ಶುಭ ಕೋರಿದರು. ಜಗತ್ತಿನಲ್ಲೇ ಪ್ರಥಮ ಸಂಸತ್ತನ್ನು ಸ್ಥಾಪನೆ ಮಾಡಿದ ಕೀರ್ತಿ ಬಸವಣ್ಣನವರಿಗೆ ಸಲ್ಲಲಿದೆ. 12ನೆಯ ಶತಮಾನದಲ್ಲಿಯೇ ಬಸವಣ್ಣನವರ ಕನಸು ಸಮಸಮಾಜ ನಿರ್ಮಾಣ ಮಾಡಬೇಕು ಎನ್ನುವುದಾಗಿತ್ತು.

ಹಾಗಾಗಿ ತುಳಿತಕ್ಕೆ ಒಳಗಾದ ಸಮುದಾಯಗಳಿಗೆ ನ್ಯಾಯ ಸಿಗುವಂತೆ ಮಾಡುವ ಜೊತೆಗೆ ಸ್ತ್ರೀ ಸಮಾನತೆಗೆ ಭದ್ರ ಬುನಾದಿಯನ್ನು 12ನೇ ಶತಮಾನದಲ್ಲಿಯೇ ಹಾಕಿದ್ದರು ಎಂದು ಸ್ಮರಿಸಿದರು.ಪ್ರಥಮದಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಸಮರ್ಪಣೆ ಮಾಡಲಾಯಿತು.

ಈ ವೇಳೆ ತಾಲೂಕು ಕಚೇರಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು,ಊರಿನ ಮುಖಂಡರು ಇತರರು ಇದ್ದರು.

# ದಕ್ಷ ನಿರ್ದೇಶನದಲ್ಲಿ ಮೂಡಿ ಬಂದ ನಾಟಕ ಮದವಳಿದ ಮಧುವರಸ




• **ಮಲ್ಲಮ್ಮ ನುಡಿ ವಾರ್ತೆ, ಗಂಗಾವತಿ**

ನಗರದ ಹಿರಿಯ ರಂಗಕರ್ಮಿ ನಟ ನಿರ್ದೇಶಕ ಪಂಪಣ್ಣ ಕಿನ್ನಾಳ ಅವರ ದಕ್ಷವಾದ ನಿರ್ದೇಶನದಲ್ಲಿ ಶನಿವಾರದಂದು ಶ್ರೀ ಕೊಟ್ಟೂರೇಶ್ವರ ಕಲಾಮಂದಿರದಲ್ಲಿ ಜರುಗಿದ ಮದವಳಿದ ಮಧುವರಸ ಅರ್ಥಾತ ಮಹಾಶರಣ ಮಧುವಯ್ಯ ನಾಟಕ ವೀಕ್ಷಕರ ಮನ ಸೆಳೆಯುವಲ್ಲಿ ಸಫಲತೆ ಹೊಂದಿದೆ ಎಂದು ಹೇಳಬಹುದು. ಇಡೀ ನಾಟಕದ ಉದ್ದಕ್ಕೂ ವಿಶೇಷವಾಗಿ ಮಧುವರಸ ಹಾಗೂ ಹರಳಯ್ಯ ತಮ್ಮ ಪಾತ್ರಗಳಿಗೆ ಜೀವ ತುಂಬುವುದರ ಮೂಲಕ ಪ್ರೇಕ್ಷಕರ ಮನದಲ್ಲಿ ಶಾಶ್ವತವಾಗಿ ಉಳಿಯುತ್ತಾರೆ. ಉಳಿದಂತೆ ಬರುವ ಪಾತ್ರಗಳಲ್ಲಿ ಬಸವಣ್ಣ ಪ್ರಭುದೇವಪಂಪಣ್ಣ ಕಿನ್ನಾಳ ಅವರ ದಕ್ಷ ನಿರ್ದೇಶನದಲ್ಲಿ ಮೂಡಿ ಬಂದ ನಾಟಕ ಮದವಳಿದ ಮಧುವರಸ..

ಗಂಗಾವತಿ.. ನಗರದ ಹಿರಿಯ ರಂಗಕರ್ಮಿ ನಟ ನಿರ್ದೇಶಕ ಪಂಪಣ್ಣ ಕಿನ್ನಾಳ ಅವರ ದಕ್ಷವಾದ ನಿರ್ದೇಶನದಲ್ಲಿ ಶನಿವಾರದಂದು ಶ್ರೀ ಕೊಟ್ಟೂರೇಶ್ವರ ಕಲಾಮಂದಿರದಲ್ಲಿ ಜರುಗಿದ ಮದವಳಿದ ಮಧುವರಸ ಅರ್ಥಾತ ಮಹಾಶರಣ ಮಧುವಯ್ಯ ನಾಟಕ ವೀಕ್ಷಕರ ಮನ ಸೆಳೆಯುವಲ್ಲಿ ಸಫಲತೆ ಹೊಂದಿದೆ ಎಂದು ಹೇಳಬಹುದು. ಇಡೀ ನಾಟಕದ ಉದ್ದಕ್ಕೂ ವಿಶೇಷವಾಗಿ ಮಧುವರಸ ಹಾಗೂ ಹರಳಯ್ಯ ತಮ್ಮ ಪಾತ್ರಗಳಿಗೆ ಜೀವ ತುಂಬುವುದರ ಮೂಲಕ ಪ್ರೇಕ್ಷಕರ ಮನದಲ್ಲಿ ಶಾಶ್ವತವಾಗಿ ಉಳಿಯುತ್ತಾರೆ. ಉಳಿದಂತೆ ಬರುವ ಪಾತ್ರಗಳಲ್ಲಿ ಬಸವಣ್ಣ ಪ್ರಭುದೇವ ಸಿದ್ದರಾಮಯ್ಯ ಶೀಲವಂತ ಲಾವಣ್ಯ ಮತ್ತಿತರ ಪಾತ್ರಗಳು ಅತ್ಯುತ್ತಮವಾಗಿ ಮೂಡಿ ಬಂದಿದೆ.

# ಕಾಯಕಯೋಗಿ, ವಿಶ್ವಗುರು ಬಸವೇಶ್ವರರ ಜಯಂತಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಆಮ್ ಆದ್ಮಿ ಪಕ್ಷದ ಜಿಲ್ಲಾ ಕಚೇರಿಯಲ್ಲಿ ಜಗಜ್ಯೋತಿ ಅಣ್ಣ ಬಸವಣ್ಣ, ಕಾಯಕಯೋಗಿ, ವಿಶ್ವಗುರು ಸಾಂಸ್ಕೃತಿಕ ನಾಯಕ, ಶ್ರೀ ಬಸವೇಶ್ವರರ ಜಯಂತಿಯನ್ನು, ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ, ಮಾಡುವುದರ ಮೂಲಕ ಆಚರಿಸಲಾಯಿತು,

ಈ ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷರಾದ ಜೆ. ವಿ. ಮಂಜುನಾಥ, ರವರು ಮಾತನಾಡಿ, 12ನೇ ಶತಮಾನದಲ್ಲಿ ಬಸವಣ್ಣನವರು, ಅನುಭವ ಮಂಟಪವನ್ನು ಸ್ಥಾಪಿಸಿ, ಮೌಢ್ಯತೆಯನ್ನು ಹೋಗಲಾಡಿಸಲು, ಜಾತಿ ಪದ್ಧತಿಯನ್ನು ಹೋಗಲಾಡಿಸಲು, ಕಾಯಕವೇ ಕೈಲಾಸ ಎಂಬ ತತ್ವದ ಅಡಿಯಲ್ಲಿ, ತಮ್ಮ ವಚನಗಳ ಮೂಲಕ ಸಮಾನತೆಗಾಗಿ ಹೋರಾಡಿದ ಮಹಾನ್ ವ್ಯಕ್ತಿ, ಆದರೆ ಇದುವರೆಗೂ ಸಹ ಜಾತಿ ಪದ್ಧತಿ ಮೌಢ್ಯತೆ ಅಸ್ಪೃಶ್ಯತೆ ಇನ್ನೂ ಅತ್ಯಂತ ಹೆಚ್ಚಾಗಿರುವುದು, ಇದು ನಮ್ಮೆಲ್ಲರ ದುರ್ದೈವ ಎಂದರು, ದೇಶದಲ್ಲಿ ಸಮಾನತೆ ಬಂದಾಗ ಮಾತ್ರ ಬಸವಣ್ಣರಂತವರ ಅನೇಕ ಮಹನೀಯರಿಗೆ ನಿಜವಾಗಲೂ ಅವರ ಆತ್ಮಕ್ಕೆ ಶಾಂತಿ ಸಿಗುವುದು, ನಾವೆಲ್ಲರೂ ಅವರ ತತ್ವ ಆದರ್ಶಗಳನ್ನು ಮೈಗೂಡಿಸಿಕೊಂಡು ಮುನ್ನಡೆಯೋಣ ಎಂದರು. ಈ ಸಂದರ್ಭದಲ್ಲಿ, ಜಿಲ್ಲಾ ಹಿಂದುಳಿದ ಘಟಕದ ಅಧ್ಯಕ್ಷರಾದ ಮಣಿಕಂಠ ಆಚಾರ್, ಜಿಲ್ಲಾ ಉಪಾಧ್ಯಕ್ಷರಾದ ಹನುಮನ ಗೌಡ, ನಗರ ಉಪಾಧ್ಯಕ್ಷರಾದ ಕಾರ್ಕಲ ತೋಟ ಜಾನಕಿ ರಾಮ್, ಹಾಗೂ ಪಕ್ಷದ ಮುಖಂಡರುಗಳಾದ ಹನುಮಂತರೆಡ್ಡಿ, ಉಪ್ಪಾರು ರಂಗಸ್ವಾಮಿ, ಹನುಮೇಶ್, ಹನುಮಂತಪ್ಪ, ಮಂಜುನಾಥ ಮಲ್ಲಿಕಾರ್ಜುನ, ಹಾಗೂ ಮುಂತಾದ ಪಕ್ಷದ ಪ್ರೇಮಿಗಳು ಉಪಸ್ಥಿತರಿದ್ದರು.

# ಹಿಂದೂ ಧರ್ಮ ಪುನರುಜ್ಜೀವನಗೊಳಿಸಿದ ಆಧ್ಯಾತ್ಮ ಆದಿ ಶಂಕರಾಚಾರ್ಯರು: ನಾಗರಾಜ್




• **ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ**

ಹಿಂದೂಧರ್ಮಪುನರುಜ್ಜೀವನಗೊಳಿಸಿದ ಆಧ್ಯಾತ್ಮ ಆದಿ ಶಂಕರಾಚಾರ್ಯರು. ಸಮಾಜವನ್ನುಸುಸ್ಥಿತಿಗೆಕೊಂಡೊಯ್ಯುವಲ್ಲಿ ಆದಿ ಶಂಕರಾಚಾರ್ಯರ ಪಾತ್ರ ಅತ್ಯಂತ ಪ್ರಮುಖವಾಗಿದೆ ಎಂದು ಡಾ.ಬಾಬು ಜಗಜೀವನ್‌ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಸಂಗನಕಲ್ಲು ರಸ್ತೆಯ ಭಾರತಿ ತೀರ್ಥ ಸಭಾಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಆದ್ಯ ಗುರು ಶ್ರೀ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮಠಗಳನ್ನು(ದಕ್ಷಿಣದಲ್ಲಿ ಶೃಂಗೇರಿ, ಪಶ್ಚಿಮದಲ್ಲಿ ದ್ವಾರಕಾ, ಪೂರ್ವದಲ್ಲಿ ಪುರಿ ಜಗನ್ನಾಥ ಮತ್ತು ಉತ್ತರದಲ್ಲಿ ಬದರಿನಾಥ) ಸ್ಥಾಪಿಸುವ ಮೂಲಕ ವೇದಾಂತದ ಪುನರುಜ್ಜೀವನ ಮತ್ತು ಹಿಂದೂ ಧರ್ಮದ ಏಕತೆಯನ್ನು ಬಲಪಡಿಸಿದವರು ಎಂದು ತಿಳಿಸಿದರು.

2018 ರಲ್ಲಿ ಸ್ಥಾಪನೆಯಾದ ಬ್ರಾಹ್ಮಣ ಅಭಿವೃದ್ಧಿ ನಿಗಮಕ್ಕೆ 2025–26 ನೇ ಸಾಲಿನಲ್ಲಿ ರಾಜ್ಯ ಸರ್ಕಾರ 60 ಕೋಟಿ ರೂ. ಅನುದಾನ ನೀಡಿದೆ. ಸಮುದಾಯದ ಯುವಕರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು 20 ರಿಂದ 30 ಕೋಟಿ ರೂ. ಮೀಸಲಿಡಲಾಗಿದ್ದು, ಇದರಲ್ಲಿ ಶೇ. 50 ರಷ್ಟು ಸಬ್ಸಿಡಿ ದೊರೆಯಲಿದೆ. ಬಡ ಬ್ರಾಹ್ಮಣ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕಾಗಿ 10 ರಿಂದ 15 ಕೋಟಿ ರೂ. ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ತುರ್ತು ವೈದ್ಯಕೀಯ ನೆರವಿಗೆ 3 ರಿಂದ 5 ಕೋಟಿ ರೂ. ಹಾಗೂ ಮಹಿಳಾ ಉದ್ಯಮಿಗಳಿಗೆ ನೆರವಾಗಲು 5 ರಿಂದ 10 ಕೋಟಿ ರೂ. ಮೀಸಲಿಡಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಮಾತನಾಡಿ, ಮಾನವನಲ್ಲಿ ದೇವರನ್ನು ಕಾಣುವುದೇ ಕಷ್ಟವಿರುವ ಕಾಲದಲ್ಲಿ, ಪ್ರತಿಯೊಬ್ಬ ವ್ಯಕ್ತಿಯ ಆತ್ಮದಲ್ಲೂ ಪರಮಾತ್ಮನಿದ್ದಾನೆ ಎಂದು ಸಾರಿದ ಆದಿ ಶಂಕರಾಚಾರ್ಯರ ಅದ್ವೈತ ಸಿದ್ಧಾಂತ ಜಗತ್ತಿಗೆ ಶ್ರೇಷ್ಠ ಕೊಡುಗೆ–ಯಾಗಿದೆ ಎಂದು ಹೇಳಿದರು.

ಮನುಷ್ಯ ಬದುಕಿರುವಾಗಲೇ ಸತ್ಸಂಗ ಮತ್ತು ನಿಸ್ಸಂಗದ ಮೂಲಕ ಮೋಹವನ್ನು ತೊರೆದು ಜೀವನ ಮುಕ್ತಿಯನ್ನು ಪಡೆಯಬಹುದು ಎಂದು ಎಂಟನೇ ಶತಮಾನದಲ್ಲೇ ಸಾರಿದ ಮಹಾನ್ ವ್ಯಕ್ತಿ ಶಂಕರಾಚಾರ್ಯರು. ಕರ್ನಾಟಕದ ಶೃಂಗೇರಿಯಲ್ಲಿ ಶಾರದಾ ಪೀಠವನ್ನು ಸ್ಥಾಪಿಸುವ ಮೂಲಕ ಅಧ್ಯಾತ್ಮದ ತಳಹದಿಯನ್ನು ಬಲಪಡಿಸಿದರು. ಬ್ರಾಹ್ಮಣ ಸಮುದಾಯವು ನಾಡು–ನುಡಿ ಮತ್ತು ದೇಶ ಕಟ್ಟುವಲ್ಲಿ ಅಪಾರ ಕೊಡುಗೆ ನೀಡಿದೆ ಎಂದು ಅವರು ಶ್ಲಾಘಿಸಿದರು. ಸರ್ ಎಂ.ವಿಶ್ವೇಶ್ವರಯ್ಯನವರು ತುಂಗಭದ್ರಾ ಅಣೆಕಟ್ಟು ಕಟ್ಟಿದರೆ, ಬ್ರಾಹ್ಮಣ ಸಮುದಾಯದ ಮೇಧಾವಿ ಇಂಜಿನಿಯರ್ ತಿರುಮಲೆಅಯ್ಯಂಗಾರ್ ಅವರು ಸ್ವಾತಂತ್ರ ಬಂದ ಕೇವಲ ಮೂರು ವರ್ಷಗಳಲ್ಲಿ ಆ ಬೃಹತ್ ಪ್ರಾಜೆಕ್ಟ್ ಅನ್ನು ಪೂರ್ಣಗೊಳಿಸಿ ಈ ಭಾಗದ ಜನರಿಗೆ ನೀರಾವರಿ ಸೌಲಭ್ಯ ಕಲ್ಪಿಸಿದರು. ಸಮಾಜಕ್ಕೆ ಉತ್ತಮ ಸಂಸ್ಕಾರ ಕಲಿಸುವಲ್ಲಿ ಮತ್ತು ಭಾರತವನ್ನು ಶಕ್ತಿಯುತ ರಾಷ್ಟ್ರವನ್ನಾಗಿ ಮಾಡುವಲ್ಲಿ ಈ ಸಮುದಾಯ ಯಾವಾಗಲೂ ಮುಂಚೂಣಿಯಲ್ಲಿದೆ.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸತತ ಎರಡನೇ ವರ್ಷ ಶಂಕರಾಚಾರ್ಯ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುತ್ತಿದೆ. ಸಿದ್ದರಾಮಯ್ಯನವರ ಸರ್ಕಾರ ಎಲ್ಲಾ ಧರ್ಮ ಮತ್ತು ಜಾತಿಗಳನ್ನು ಸಮಾನವಾಗಿ ಪ್ರೀತಿಸುತ್ತದೆ ಎಂಬುದಕ್ಕೆ ಇಂತಹ ಜಯಂತಿಗಳ ಆಚರಣೆಯೇ ಸಾಕ್ಷಿ ಎಂದು ಅವರು ಅಭಿಪ್ರಾಯಪಟ್ಟರು.

ಬಳ್ಳಾರಿಯ ರಾಮಕೃಷ್ಣ ಆಶ್ರಮದ ಪೂಜ್ಯಶ್ರೀ ಸ್ವಾಮಿ ಮಂಗಳನಾಥಾನಂದಜಿ ಮಹಾರಾಜ್ ಅವರು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಕ್ರಿಸ್ತ ಶಕ 788 ರ ಸುಮಾರಿಗೆ ಕೇರಳದ ಕಾಲಡಿಯಲ್ಲಿ ಶಿವಗುರು ಮತ್ತು ಆರ್ಯಾಂಬ ದಂಪತಿಗಳ ಪುತ್ರರಾಗಿ ಜನಿಸಿದ ಶಂಕರಾಚಾರ್ಯರು, ಬಾಲ್ಯದಲ್ಲೇ ಮೇಧಾವಿಗಳಾಗಿದ್ದರು. ಎಂಟನೇ ವಯಸ್ಸಿಗೆ ವೇದಗಳನ್ನು ಅಭ್ಯಾಸ ಮಾಡಿ ತಾಯಿಯ ಅನುಮತಿಯೊಂದಿಗೆ ಸನ್ಯಾಸ ಸ್ವೀಕರಿಸಿದರು. ಭಜಗೋವಿಂದಂ, ವಿವೇಕ ಚೂಡಾಮಣಿ ಸೇರಿದಂತೆ ಉಪನಿಷತ್ತುಗಳು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಯ ಮೇಲೆ ಭಾಷ್ಯಗಳನ್ನು ಬರೆದಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಮುದಾಯದವರನ್ನು ಗಣ್ಯರು ಸನ್ಮಾನಿಸಿ ಗೌರವಿಸಿದರು.

# ಅಂದ್ರಾಳು ಹಳ್ಳಕ್ಕೆ ಬಿದ್ದ ಕಾರು

• **ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ**

ನಗರದ ಅಂದ್ರಾಳು ಬಳಿಯ ಗಂಗಮ್ಮನ ಹಳ್ಳಕ್ಕೆ ಕಾರೊಂದು ಚಾಲಕನ ನಿಯಂತ್ರಣ ತಪ್ಪಿ ಇಂದು ಬೆಳಿಗ್ಗೆ ಬಿದ್ದಿದೆ.

ನಗರದ ಕಣೆಕಲ್ಲು ಬಸ್ ನಿಲ್ದಾಣದಿಂದ ಅಂದ್ರಳ್ ಕಡೆಗೆ ವೇಗವಾಗಿ ಬಂದ ಕಾರು ಅದರಲ್ಲಿದ್ದ ಚಾಲಕನ ನಿಯಂತ್ರಣ ತಪ್ಪಿ ಹಳ್ಳದ ಸೇತುವೆ ಕೆಳಗೆ ಜಾರಿ ಬಿದ್ದಿದೆ.

ಕಾರಿನ ಏರ್ ಬೆಲೂನ್ ತೆರೆದಿರುವುದರಿಂದ ಚಾಲಕನನ ಪ್ರಾಣ ಉಳಿದುಕೊಂಡಿದೆ. ಸಣ್ಣ ಪುಟ್ಟ ಗಾಯಮಾತ್ರ ಆಗಿದೆ.

ಚಾಲಕ ನಗರದ ರೆಡ್ಡಿ ಸ್ಟ್ರೀಟ್ ಗೆ ಸೇರಿದ ವ್ಯಕ್ತಿಯಂತೆ. ಕಾರನ್ನು ಸಂಚಾರಿ ಠಾಣೆಯ ಪೊಲೀಸರು ತೆಗೆದುಕೊಂಡು ಬಂದಿದ್ದಾರೆ. ಮಧ್ಯಾಹ್ನದ ವರೆಗೆ ಪ್ರಕರಣ ದಾಖಲಾಗಿರಲಿಲ್ಲ.

# 22 ರಂದು ವಿವಿಧ ಮಹನೀಯರ ಜಯಂತಿ ಪೂರ್ವಭಾವಿ ಸಿದ್ಧತಾ ಸಭೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**


ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾ ಕೇಂದ್ರದಲ್ಲಿ ಮೇ 01 ರಂದು ಭಗವಾನ್ ಬುದ್ಧ ಜಯಂತಿ, ಮೇ 10 ರಂದು ಹೇಮರೆಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಆಯೋಜಿಸುವ ಕುರಿತು ಚರ್ಚಿಸಲು

ಏ.22 ರಂದು ಬೆಳಿಗ್ಗೆ 11.30 ಗಂಟೆಗೆ ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಿದ್ಧತಾ ಸಭೆ ಏರ್ಪಡಿಸಲಾಗಿದೆ.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಅವರು ಸಭೆಯ ಅಧ್ಯಕ್ಷತೆ ವಹಿಸುವರು.

ಸಭೆಗೆ ವಿವಿಧ ಸಂಘ– ಸಂಸ್ಥೆಗಳ ಪದಾಧಿಕಾರಿಗಳು, ಸಮಾಜದ ಮುಖಂಡರು, ಸಾರ್ವಜನಿಕರು ಭಾಗವಹಿಸಿ ಮಹನೀಯರ ಜಯಂತಿ ಕಾರ್ಯಕ್ರಮ ಯಶಸ್ವಿಗೊಳಿಸಲು ಸಲಹೆ ನೀಡಬಹುದಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಅವರು ತಿಳಿಸಿದ್ದಾರೆ.

# ಬಿಜೆಪಿ ಕಚೇರಿಯಲ್ಲಿ ವಿಶ್ವಗುರು ಜಗಜ್ಯೋತಿ ಬಸವಣ್ಣನವರ ಜಯಂತಿ



• **ಮಲ್ಲಮ್ಮ ನುಡಿ ವಾರ್ತೆ, ಕುರುಗೋಡು**

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಮಂಡಲದ ವತಿಯಿಂದ ಹಮ್ಮಿಕೊಂಡಿದ್ದ ವಿಶ್ವಗುರು ಜಗಜ್ಯೋತಿ ಬಸವಣ್ಣನವರ ಜಯಂತಿ ಕಾರ್ಯಕ್ರಮ ಆಚರಿಸಿದರು.

ಬಿಜೆಪಿ ಮಂಡಲ ಅಧ್ಯಕ್ಷ ಮದಿರೆ ಕುಮಾರಸ್ವಾಮಿ ಮಾತನಾಡಿ, 12ನೇ ಶತಮಾನದಲ್ಲಿ ಬಸವಣ್ಣನವರು ಸಮಾಜ ಸುಧಾರಕರು, ತತ್ವಜ್ಞಾನಿಗಳು. ಇವರು ಕೇವಲ ಲಿಂಗಾಯತ ಸಮುದಾಯವಲ್ಲದೆ, ಸರ್ವಧರ್ಮೀಯರಿಂದಲೂ ಆಚರಿಸಲ್ಪಡುವ ಸಮಾನತೆಯ ಹಬ್ಬವೇ ಬಸವ ಜಯಂತಿ. ಕಾಯಕವೇ ಕೈಲಾಸ ಎಂಬ ಸಂದೇಶದ ಮೂಲಕ ಜಗತ್ತಿಗೆ ಸಮಾನತೆಯ ಮಹತ್ವ ಸಾರಿದ ಮಹನ್ ಪುರುಷರು ಬಸವಣ್ಣನವರು. ಇಂತಹ ಬಸವಣ್ಣನವರ ಆದರ್ಶಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಂಡು ಅಭಿವೃದ್ಧಿ ಹೊಂದಬೇಕು ಎಂದರು.

ಪ್ರಾರಂಭದಲ್ಲಿ ಶ್ರೀ ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪಕ್ಷದ ಮುಖಂಡರಾದ ಪ್ರೇಮ್ ಕುಮಾರ, ಬಿ.ವೀರಭದ್ರಗೌಡ, ಎಸ್‌ಕೆ.ಸುನಿಲ್ ಕುಮಾರ್, ಕಿರಾಣಿ ಬಾಬು, ಬಸವರಾಜ್, ಲತಾ, ವಿದ್ಯಾಶ್ರೀ, ರೇಣುಕಮ್ಮ ಜೋಗತಿ, ಪುರಸಭೆ ಸದಸ್ಯರಾದ ನರಸಪ್ಪ, ಜಡಿಸ್ವಾಮಿ, ವೆಂಕಟೇಶಪ್ಪ, ಪುರುಷೋತ್ತಮ, ಸಿದ್ದಮ್ಮನಹಳ್ಳಿ ಸುರೇಶ, ಮಂಜುನಾಥ್ ಹಾಗೂ ವಿವಿಧ ಮೋರ್ಚಾಗಳ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಡಾ. ರಾಜ್‌ಕುಮಾರ್ ಜನ್ಮದಿನಾಚರಣೆ ಕನ್ನಡ ಗಾಯನ ಕಾರ್ಯಕ್ರಮ

• **ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಡಾ.ರಾಜ್‌ಕುಮಾರ್ ಜನ್ಮದಿನಾಚರಣೆಯ ಅಂಗವಾಗಿ ಏ.24 ರಂದು ಸಂಜೆ 06 ಗಂಟೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಕನ್ನಡ ಚಲನಚಿತ್ರಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ.

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು. ಲೋಕಸಭೆ ಸಂಸದರಾದ ಈ.ತುಕಾರಾಮ್, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ರಾಜ್ಯಸಭೆ ಸಂಸದ ಡಾ.ಸೈಯದ್ ನಾಸೀರ್ ಹುಸೇನ್, ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರ ಮಹಾಮಂಡಳಿ ನಿಯಮಿತ(ಕಾವೇರಿ ಹ್ಯಾಂಡ್‌ಲೂಮ್ಸ್)ದ ಅಧ್ಯಕ್ಷ ಹಾಗೂ ಕಂಪ್ಲಿ ಶಾಸಕ ಜೆ.ಎನ್ ಗಣೇಶ್, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ, ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ, ಸಿರುಗುಪ್ಪ ಶಾಸಕ ಬಿ.ಎಂ ನಾಗರಾಜ, ಸಂಡೂರು ಶಾಸಕಿ ಈ.ಅನ್ನಪೂರ್ಣ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ, ಶಶೀಲ್ ನಮೋಶಿ, ವೈ.ಎಂ.ಸತೀಶ್, ಮಹಾನಗರ ಪಾಲಿಕೆಯ ಮಹಾಪೌರರಾದ ಪಿ.ಗಾದೆಪ್ಪ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು, ಕರ್ನಾಟಕ ಸ್ಟೇಟ್ ಮಿನಿರಲ್ಸ್ ಕಾರ್ಪೋರೇಷನ್ ಲಿಮಿಟೆಡ್‌ನ ಉಪಾಧ್ಯಕ್ಷ ಹೆಚ್.ಲಕ್ಷ್ಮಣ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ ಚಿದಾನಂದಪ್ಪ ವಿವಿಧ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಬಳ್ಳಾರಿಯ ಆಕಾಶವಾಣಿ ಎಫ್‌ಎಂ ಕೇಂದ್ರದ ಉದ್ಘೋಷಕರಾದ ಬಸವರಾಜ ಅಮಾತಿ ಅವರು ಕಾರ್ಯಕ್ರಮ ಕುರಿತು ವಿಶೇಷ ಉಪನ್ಯಾಸ ನೀಡುವರು. ಕಾರ್ಯಕ್ರಮದಲ್ಲಿ ಕೊಪ್ಪಳದ ಕ್ಷಿತಿ ಮ್ಯೂಸಿಕಲ್ ಇವೆಂಟ್ಸ್ ವತಿಯಿಂದ ಕನ್ನಡ ಚಲನಚಿತ್ರಗೀತೆಗಳ ಗಾಯನ ಕಾರ್ಯಕ್ರಮ ನಡೆಯಲಿದೆ.

**ಪುತ್ಥಳಿಗೆ ಮಾಲಾರ್ಪಣೆ**

ಡಾ.ರಾಜ್‌ಕುಮಾರ್ ಜನ್ಮದಿನಾಚರಣೆಯ ಅಂಗವಾಗಿ ಅಂದು ಬೆಳಿಗ್ಗೆ 09 ಗಂಟೆಗೆ ಡಾ.ರಾಜ್‌ಕುಮಾರ್ ಉದ್ಯಾನವನದಲ್ಲಿನ ಡಾ.ರಾಜ್ ಕುಮಾರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು.

ಜಿಲ್ಲಾಧಿಕಾರಿ ನಾಗೇಂದ್ರಪ್ರಸಾದ್.ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪನ್ನೇಕರ್, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್, ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ., ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಬಿ.ವಿ.ತುಕಾರಾಂ ರಾವ್ ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

# ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ಯಶಸ್ಸಿಗೆ ಕಾರ್ಯನಿರ್ವಹಿಸಿ: ಹಾರೀಸ್



• **ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ**

ಜಿಲ್ಲೆಯ ಆರೋಗ್ಯ ಸುಧಾರಣೆ ಮತ್ತು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ವೈದ್ಯಾಧಿಕಾರಿಗಳು ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಸೂಚಿಸಿದರು. ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಭಾಂಗಣದಲ್ಲಿ ಶುಕ್ರವಾರ ನಡೆದ ವೈದ್ಯಾಧಿಕಾರಿಗಳ ಜಿಲ್ಲಾ ಮಟ್ಟದ ಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕ್ಷಯರೋಗ ನಿರ್ಮೂಲನೆಗೆ ಆದ್ಯತೆ:ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮದಡಿ ಕ್ಷಯರೋಗದ ಲಕ್ಷಣಗಳು ಕಂಡುಬಂದ ತಕ್ಷಣವೇ ಕಫ ಪರೀ–ಕ್ಷೆ ಮಾಡಿಸಬೇಕು. ಬೇಗ ಪತ್ತೆ ಹಚ್ಚುವುದು, ಸಂಪೂರ್ಣ ಚಿಕಿತ್ಸೆ ನೀಡುವುದು ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಕ್ಷಯ–ರೋಗ ಮುಕ್ತ ಜಿಲ್ಲೆಯನ್ನಾಗಿಸಲು ಇರುವ ಏಕೈಕ ದಾರಿ ಎಂದು ಅವರು ಅಭಿಪ್ರಾಯಪಟ್ಟರು. ತಾಯಿ ಮತ್ತು ಶಿಶು ಮರಣ ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ:ಗರ್ಭಿಣಿಯರ ಆರೋಗ್ಯದ ಕುರಿತು ವಿಶೇಷ ಗಮನ ಹರಿಸಲು ಸೂಚಿಸಿದ ಸಿಇಒ ಅವರು, ಗರ್ಭಿಣಿಯರನ್ನು ಮೊದಲ ಮೂರು ತಿಂಗಳಲ್ಲೇ ಕಡ್ಡಾಯವಾಗಿ ನೋಂದಣಿ ಮಾಡಿಸಬೇಕು. ನಿಯಮಿತ ತಪಾಸಣೆ ಮೂಲಕ ರಕ್ತಹೀನತೆ ಪತ್ತೆ ಹಚ್ಚಿ, ಸುರಕ್ಷಿತ ಹೆರಿಗೆಗೆ ಆದ್ಯತೆ ನೀಡಬೇಕು. ಸಮುದಾಯ, ಪ್ರಾಥಮಿಕ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಗರಿಷ್ಠ ಹೆರಿಗೆಗಳನ್ನು ನಡೆಸುವ ಮೂಲಕ ತಾಯಿ–ಶಿಶು ಮರಣ ಪ್ರಮಾಣ ತಗ್ಗಿಸಬೇಕು. ತಾಯಿ ಕಾರ್ಡ್‌ಗಳಲ್ಲಿ ತಪಾಸಣೆಯ ಎಲ್ಲಾ ವಿವರಗಳನ್ನು ಕಡ್ಡಾಯವಾಗಿ ದಾಖಲಿಸಬೇಕು ಎಂದು ತಿಳಿಸಿದರು. ಹೆಚ್.ಪಿ.ವಿ ಲಸಿಕೆ ಅಭಿಯಾನ:ಜಿಲ್ಲೆಯಲ್ಲಿ ಹೆಚ್.ಪಿ.ವಿ ಲಸಿಕೆ ಪ್ರಗತಿ ಕುಂಠಿತಗೊಂಡಿದ್ದು, 14 ವರ್ಷದ ಹೆಣ್ಣು ಮಕ್ಕಳಿಗೆ ಲಸಿಕೆ ನೀಡಲು ಪೋಷಕರು ಮತ್ತು ಶಿಕ್ಷಕರಿಗೆ ಜಾಗೃತಿ ಮೂಡಿಸಬೇಕು. ಸ್ಥಳೀಯ ಮುಖಂಡರ ಸಹಕಾರದೊಂದಿಗೆ ಸಮುದಾಯ ಸಭೆಗಳನ್ನು ನಡೆಸಿ ಲಸಿಕೆಯ ಮಹತ್ವ ತಿಳಿಸಬೇಕು ಎಂದು ಸೂಚಿಸಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಮಾತನಾಡಿ, ಆಶಾ ಕಾರ್ಯಕರ್ತೆಯರು ಮತ್ತು ಆರೋಗ್ಯ ಸುರಕ್ಷಾ ಅಧಿಕಾರಿಗಳು ಗರ್ಭಿಣಿಯರ ಮನೆಗೆ ಭೇಟಿ ನೀಡಿ ನಿರಂತರ ಸಂಪರ್ಕದಲ್ಲಿರಬೇಕು. ಆಸ್ಪತ್ರೆಗಳಲ್ಲಿನ ಟಿವಿಗಳ ಮೂಲಕ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಪ್ರಸಾರ ಮಾಡಬೇಕು. ಬೇಸಿಗೆಯ ಹಿನ್ನೆಲೆಯಲ್ಲಿ ಶಾಖಾಘಾತ ಚಿಕಿತ್ಸೆಗೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ನಾಯಿ ಮತ್ತು ಹಾವು ಕಡಿತದ ಕುರಿತು ಶಾಲೆ ಹಾಗೂ ಪಂಚಾಯತ್ ಮಟ್ಟದಲ್ಲಿ ನಿರಂತರ ಜಾಗೃತಿ ಮೂಡಿಸಬೇಕು ಎಂದು ವೈದ್ಯಾಧಿಕಾರಿಗಳಿಗೆ ನಿರ್ದೇಶನ ನೀಡಿದರು. ಸಭೆಯಲ್ಲಿ ಜಿಲ್ಲಾ ಯೋಜನಾ ಅಭಿವೃದ್ಧಿ ಅಧಿಕಾರಿ ಡಾ.ಆರ್. ಅಬ್ದುಲ್ಲಾ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ ವಿ.ಕೆ., ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲ್ಲೂಕು ಆರೋಗ್ಯ ಅಧಿಕಾರಿಗಳು, ಎಲ್ಲಾ ಆಡಳಿತ ವೈದ್ಯಾಧಿಕಾರಿಗಳು ಉಪಸ್ಥಿತರಿದ್ದರು.

# ಎತ್ತಿನ ಬಂಡಿಯಲ್ಲಿ ಸರಕು ಸಾಗಾಣೆ : ಪರಿಷ್ಕೃತ ಧರ ಒಪ್ಪಂದ




• **ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ**

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೇತೃತ್ವದಲ್ಲಿ ಬಳ್ಳಾರಿ ನಗರದ ಎಪಿಎಂಸಿ ಎತ್ತಿನ ಬಂಡಿಗಳಲ್ಲಿ ಸರಕು ಸಾಗಾಣಿಕೆ ಮಾಡುವ ಕುರಿತು ಬಂಡಿ ಚಾಲಕರ ಸಂಘ, ಅಕ್ಕಿ ವರ್ತಕರ ಸಂಘ ಮತ್ತು ಬಳ್ಳಾರಿ ಕಿರಾಣಿ ಅಸೋಸಿಯೇಷನ್ ಮಧ್ಯೆ ಧರ ಪರಿಷ್ಕರಣೆ ಮಾಡಿ, ಶನಿವಾರ ಒಪ್ಪಂದ ಮಾಡಿಕೊಳ್ಳಲಾಗಿದೆ.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಅವ್ವಾರು ಮಂಜುನಾಥ್ ಹಾಗೂ ಗೌರವ ಕಾರ್ಯದರ್ಶಿಗಳಾದ ಕೆ.ಸಿ. ಸುರೇಶಬಾಬು ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ಬಂಡಿ ಚಾಲಕರ ಸಂಘದ ಪ್ರತಿನಿಧಿಗಳಾಗಿ ಬಿ. ರಾಜೇಶ್ ಮತ್ತು ನೂರ್, ಅಕ್ಕಿ ವರ್ತಕರ ಸಂಘದ ಅಧ್ಯಕ್ಷರಾದ ಜಿ. ಹನುಮೇಶ್, ಕಾರ್ಯದರ್ಶಿಗಳಾದ ಆರ್. ರಮೇಶ್ ಮತ್ತು ಬಳ್ಳಾರಿ ಕಿರಾಣಿ ಅಸೋಸಿಯೇಷನ್ನ ಪ್ರತಿನಿಧಿಯಾಗಿ ಬೆಲ್ಲಂಕೊಂಡ ವೀರಾಂಜಿನೇಯಲು ಅವರು ನೂತನ ಧರಪಟ್ಟಿ ಕರಾರು ಒಪ್ಪಂದಕ್ಕೆ ಸಹಿ ಮಾಡಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಅವ್ವಾರು ಮಂಜುನಾಥ್ ಹಾಗೂ ಗೌರವ ಕಾರ್ಯದರ್ಶಿಗಳಾದ ಕೆ.ಸಿ. ಸುರೇಶಬಾಬು ಅವರು, ಬಂಡಿ ಚಾಲಕರ ಸಂಘದ ಪದಾಧಿಕಾರಿಗಳು, ಸರಕು ಸಾಗಾಣಿಕೆಯ ವೆಚ್ಚ ಹೆಚ್ಚಳಕ್ಕೆ ನಮ್ಮ ಸಂಸ್ಥೆಯನ್ನು ಕೋರಿದಾಗ, ಸಂಬಂಧಿಸಿದವರ ಜಂಟಿ ಸಭೆಯನ್ನು ನಡೆಸಿ, ನೂತನ ಧರಪಟ್ಟಿಯನ್ನು ಸಿದ್ದಪಡಿಸಿ, ಒಪ್ಪಂದವನ್ನು ಮಾಡಲಾಯಿತು ಎಂದರು.

ಈ ಸಂದರ್ಭದಲ್ಲಿ ಸಂಸ್ಥೆಯ ಹಿರಿಯ ಉಪಾಧ್ಯಕ್ಷರಾದ ಎಸ್. ದೊಡ್ಡನಗೌಡ, ಖಜಾಂಚಿಗಳಾದ ಸಿ.ಎಸ್. ಸತ್ಯನಾರಾಯಣ, ಪತ್ರಿಕಾ ಮತ್ತು ಮಾಧ್ಯಮ ಚೇರ್ಮನ್ ಟಿ. ಶ್ರೀನಿವಾಸರಾವ್, ಈವೆಂಟ್ಸ್ ಕಮಿಟಿ ಚೇರ್ಮನ್ ನೇಕಾರ ನಾಗರಾಜ್, ಮ್ಯಾಗಜಿನ್ ಕಮಿಟಿ ಚೇರ್ಮನ್ ಕೌಡಿಕಿ ಹನುಮೇಶಬಾಬು, ವಿಶೇಷ ಆಹ್ವಾನಿತರಾದ ಕೆ.ಎಂ. ಭೋಗೇಶ್ ಸೇರಿ ಸಂಬಂಧಿಸಿದ ಸಂಘಟನೆಗಳ

## ಅರ್ಜಿ ಆಹ್ವಾನ

ಬಳ್ಳಾರಿ: ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 2026–27ನೇ ಶೈಕ್ಷಣಿಕ ಸಾಲಿಗೆ ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ಪರಿಶಿಷ್ಟ ಜಾತಿಯ ಅರ್ಹ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

5ನೇ ತರಗತಿಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಅರ್ಹತಾ ಪರೀಕ್ಷೆಯ ಮೂಲಕ ಈ ಪ್ರವೇಶ ಪಡೆಯಲು ಅವಕಾಶವಿದೆ. ಆಸಕ್ತ ಮತ್ತು ಅರ್ಹ ವಿದ್ಯಾರ್ಥಿಗಳು ಇಲಾಖೆಯ ಅಧಿಕೃತ ವೆಬ್‌ಸೈಟ್ ಮೂಲಕ ನಿಗದಿತ ಅವಧಿಯೊಳಗೆ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು ಮೇ 04 ಕೊನೆಯ ದಿನವಾಗಿರುತ್ತದೆ. ಮೇ 12 ರಂದು ಪ್ರವೇಶ ಪರೀ–ಕ್ಷೆ ನಡೆಯಲಿದೆ. ವಿದ್ಯಾರ್ಥಿಗಳು ಇಲಾಖೆಯ ಅಧಿಕೃತ ವೆಬ್‌ಸೈಟ್ (https://swd.karnataka.gov.in) ಗೆ ಭೇಟಿ ನೀಡಿ ಆನ್‌ಲೈನ್ ಮೂಲಕ ಪ್ರವೇಶಾತಿ ಅರ್ಜಿಗಳನ್ನು ಸಲ್ಲಿಸಬಹುದು.

ಪ್ರವೇಶಾತಿ ಪ್ರಕ್ರಿಯೆ ಹಾಗೂ ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರ ಕಚೇರಿ ಅಥವಾ ಮೊ.9480843023 ಗೆ ಸಂಪರ್ಕಿಸಬಹುದು ಎಂದು ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಸವಣ್ಣನವರ ತತ್ವಾದರ್ಶಗಳು ಮನುಕುಲಕ್ಕೆ ಸ್ಫೂರ್ತಿ: ಚರಂತಿಮಠ



• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ಕಾಯಕವೇ ಕೈಲಾಸ ಹಾಗೂ ದಾಸೋಹ ಪರಂಪರೆಯನ್ನು ಮನುಕುಲಕ್ಕೆ ಸಾರಿದ ವಿಶ್ವಗುರು ಬಸವಣ್ಣನವರ ತತ್ವ ಆದರ್ಶಗಳು, ಚಿಂತನೆಗಳು ಇಂದಿಗೂ ಮಾನವ ಕುಲಕ್ಕೆ ಸ್ಫೂರ್ತಿ ಮತ್ತು ಪ್ರೇರಣೆಯಾಗಿವೆ ಎಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಹೇಳಿದರು.

ನಗರದ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ಶ್ರೀ ಕಣವಿ ವೀರಭದ್ರೇಶ್ವರ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ಸೋಮವಾರ ನಡೆದ ಜಗಜ್ಯೋತಿ ಬಸವಣ್ಣನವರ ಜಯಂತಿ ಉತ್ಸವದ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಅವರು,

12ನೇ ಶತಮಾನದಲ್ಲಿ ಸಾಮಾಜಿಕ ಅಸಮಾನತೆ, ಜಾತಿವ್ಯವಸ್ಥೆ ಸೇರಿದಂತೆ ಹಲವು ಅನಿಷ್ಠ ಪದ್ಧತಿಗಳು ಆಚರಣೆಯಲ್ಲಿದ್ದ ಕಾಲದಲ್ಲಿ ತಮ್ಮ ಸರಳ ವಚನಗಳ ಮೂಲಕ ಸಮಾಜದಲ್ಲಿ ಸುಧಾರಣೆಗಳನ್ನು ತಂದವರು ಬಸವಣ್ಣನವರು ಎಂದರು.

ಕಾಯಕವೇ ಕೈಲಾಸ ಎಂದು ಕಲಿಸುಕೊಟ್ಟ ದಾಸೋಹ ಪರಂಪರೆಯನ್ನು ಜಗತ್ತಿಗೆ ಸಾರಿ ವಿಶ್ವಗುರುವಾದ ಬಸವಣ್ಣನವರ ತತ್ವ ಆದರ್ಶಗಳು,

ಚಿಂತನೆಗಳು ಇಂದಿಗೂ ಮಾನವ ಕುಲಕ್ಕೆ ಸ್ಫೂರ್ತಿ ಮತ್ತು ಪ್ರೇರಣೆಯಾಗಿವೆ ಎಂದ ಅವರು, ಧಯವೇ ಧರ್ಮದ ಮೂಲವಯ್ಯ, ದಯವಿಲ್ಲದ ಧರ್ಮ ಯಾವುದಯ್ಯ ದಯೆ ಬೇಕು ಸಕಲ ಪ್ರಾಣಿಗಳೆಲ್ಲರಲಿ ಎಂದು ಜ್ಞಾನದ ಬೆಳಕು ಚೆಲ್ಲಿ ಕ್ರಾಂತಿಯ ಬೀಜ ಬಿತ್ತಿದವರು ಬಸವಣ್ಣನವರು ಎಂದು ಹೇಳಿದರು.

ಸಾನಿಧ್ಯವಹಿಸಿದ್ದ ಟೀಕಿನಮಠದ ಮಲ್ಲಿಕಾರ್ಜುನ ಸ್ವಾಮಿಗಳು ಮಾತನಾಡಿ, ಬಸವಣ್ಣನವರು ತಮ್ಮ ವಚನಗಳಲ್ಲಿ ಬದುಕಿನ ಸಾರವನ್ನು ತಿಳಿಸಿದ್ದು, ಕರ್ನಾಟಕದ ಪಾಲಿಗೆ ಹನ್ನೆರಡನೇ ಶತಮಾನ ಎಂಬುದು ಬಹಳ ಮಹತ್ವದ್ದು, ಸಮಾಜದಲ್ಲಿ ಹೊಸ ಚಿಂತನೆ ರೂಪಗೊಂಡ ಕಾಲವದು. ಬಸವಣ್ಣವರ ಪ್ರತಿಯೊಂದು ವಚನಗಳು ಮನುಕುಲವನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯುವುದಕ್ಕೆ ಪ್ರೇರಣೆಯಾಗಿವೆ ಎಂದರು.

ಕಾರ್ಯಕ್ರಮಕ್ಕೂ ಮೊದಲು ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಆವರಣದಲ್ಲಿಯ ಬೀಳೂರು ಗುರುಬಸವ ಮಂದಿರದಲ್ಲಿ ಪೂಜೆ ಸಲ್ಲಿಸಿ ಸಕಲ ವಾದ್ಯ ವೈಭವಗಳೊಂದಿಗೆ ಬಸವಣ್ಣನವರ ಭಾವಚಿತ್ರ ಮೆರವಣಿಗೆ ನಡೆಯಿತು.

ಬಿ.ವಿ.ವಿ.ಎಸ್. ಆವರಣದಿಂದ ಕಾಲೇಜ್ ರಸ್ತೆಯ ಮೂಲಕ ಬಸವೇಶ್ವರ

ಸರ್ಕಲ್, ಸ್ಟೇಶನ್ ರಸ್ತೆ, ಪೊಲೀಸ್ ಚೌಕಿ, ವಲ್ಲಭಭಾಯಿ ಚೌಕ ಸುತ್ತುವರೆದು, ಟಾಂಗಾ ಸ್ಟ್ಯಾಂಡ್ ಪೊಲೀಸ್ ಚೌಕಿ, ಹಳೆಯ ಅಡತ್ ಬಜಾರ್, ಬಸವೇಶ್ವರ ಬ್ಯಾಂಕ್, ಟೀಕಿನಮಠ ಮುಂದೆ ಹಾಯ್ದು ಬೀಳೂರ ಶ್ರೀ ಗುರುಬಸವ ಮಂದಿರ ತಲುಪಿ ಮಂಗಲಗೊಂಡಿತು. ಮೆರವಣಿಗೆಯಲ್ಲಿ ಭಾಗಿಯಾಗಿದ್ದ ಬಣ್ಣ ಬಣ್ಣದಿಂದ ಶೃಂಗರಿಸಿದ ನೂರಾರು ಎತ್ತುಗಳು ನೆರೆದ ಜನರ ಗಮನ ಸೆಳೆದವು.

ಜಿ.ಎನ್.ಪಾಟೀಲ. ಪ್ರಕಾಶ ರೇವಡಿಗಾರ. ಮಹೇಶ ಅಥಣಿ, ಕುಮಾರಸ್ವಾಮಿ ಹಿರೇಮಠ(ಚಿತ್ತರಗಿ), ಬಸವರಾಜ ಇಂಡಿ, ಬಸವರಾಜು ಮುಕ್ಕುಪ್ಪಿ, ಮಲ್ಲಿಕಾರ್ಜುನ ಮಠ. ಸಂಗಣ್ಣ ಶಿರೂರ, ರಾಮಣ್ಣ ಜುಮನಾಳ, ಮಹೇಶ ಕಕ–ರೆಡ್ಡಿ, ಮಲ್ಲಿಕಾರ್ಜುನ ಹಂಡಿ, ಚಂದ್ರಶೇಖರ ಶೆಟ್ಟರ, ವಿರೇಶ ಉಪ್ಪಿನ, ಗುರುಬಸವ ಸೂಳಿಬಾವಿ, ರಾಜು ಪಾಟೀಲ, ಮಹಾಂತೇಶ ಶೆಟ್ಟರ, ವಿಜಯಕುಮಾರ ಅಂಗಡಿ, ಅಶೋಕ ಕರಡಿ, ಶಿವಾನಂದ ಶಹಬಾದಿ, ವೀರಣ್ಣ ಹಲಕುರ್ಕಿ, ಸುರೇಶಬಾಬು ನಿಡಗುಂದಿ, ರವಿ ಸರದೇಸಾಯಿ, ಪ್ರಭುಸ್ವಾಮಿ ಸರಗಣಾಚಾರಿ, ಸೇರಿದಂತೆ ಅಕ್ಕನ ಬಳಗದ ಅಧ್ಯಕ್ಷರು ಸದಸ್ಯರು ಸೇರಿದಂತೆ ಸಾವಿರಾರು ಜನ ಭಾಗವಹಿಸಿದ್ದರು.

# 22 ಕ್ಕೆ ಕೆ.ಜಿ.ಟಿ.ಟಿ.ಐ. ದಲ್ಲಿ ಕ್ಯಾಂಪಸ್ ಸಂದರ್ಶನ

• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ತೆಲಂಗಾಣದ ಸದಾಶಿವಪೇಟ್‌ನ ಎಂ.ಆರ್.ಎಫ್. ಲಿಮಿಟೆಡ್ (MRF Ltd) ಯವರು ಇದೇ ಏಪ್ರಿಲ್ 22ರಂದು ಬೆಳ್ಳಿಗ್ಗೆ 9.30 ಗಂಟೆಯಿಂದ ಕಲಬುರಗಿ ಕೆಜಿಟಿಟಿಐ ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಿಗೆ ಕ್ಯಾಂಪಸ್ ಸಂದರ್ಶನವನ್ನು ನಡೆಸಲಿದ್ದಾರೆ ಎಂದು ಕಲಬುರಗಿ ಕೆ.ಜಿ.ಟಿ.ಟಿ.ಐ. ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

BE/B.Tech ll (Except Computer Science Engg), DiplomaAllstream(ExceptComputerScienceEngg), B.Sc/ B.Com/ BA, BBA/ MBA, ITI (All trades), ಪಿಯುಸಿ (All stream) (ಪಾಸಾದ ಅಭ್ಯಥಿಗಳು ಅಥವಾ ಕೊನೆಯ ವರ್ಷದಲ್ಲಿ ಇರುವ (ಮೇ/ಜೂನ್–2026ರಲ್ಲಿ ಪೂರ್ಣಗೊಳ್ಳುವ) ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಬಹುದಾಗಿದೆ. ಅಭ್ಯರ್ಥಿಗಳ ವಯೋಮಿತಿ 18 ರಿಂದ 24 ವರ್ಷದೊಳಗಿರಬೇಕು.

ಆಸಕ್ತಿಯುಳ್ಳ ಅರ್ಹ ಅಭ್ಯಥಿಗಳು ತಮ್ಮ ವಿದ್ಯಾರ್ಹತೆ, ಆಧಾರ್ ಕಾರ್ಡ್, ಪ್ಯಾನ್, ಅನುಭವ ಪ್ರಮಾಣಪತ್ರ ಹಾಗೂ ಇತ್ತೀಚಿನ ಬಯೋಡೇಟಾದೊಂದಿಗೆ ಸಂದರ್ಶನಕ್ಕೆ ಹಾಜರಾಗಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

# ಎನ್.ಎಸ್.ಎಸ್ ವಾರ್ಷಿಕ ಶಿಬಿರ ಮುಕ್ತಾಯ ಸಮಾರಂಭ

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ವೀರಶೈವ ವಿದ್ಯಾವರ್ಧಕ ಸಂಘದ ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಶಿಬಿರದ ಮುಕ್ತಾಯ ಸಮಾರಂಭ ಇಂದು ಕೊರ್ಲಗುಂದಿ ಗ್ರಾಮದ ಶ್ರೀ ಹಾಲುಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಜರುಗಿತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀಮತಿ ಕಾತ್ಯಾಯಿನಿ ಎಂ ಮರಿದೇವಯ್ಯ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಧೂಪಂ ಸತೀಶ್ ಅವರು ಭಾಗವಹಿಸಿದ್ದರು. ಕೊರ್ಲಗುಂದಿ ಗ್ರಾಮದವರಾದ ಜಿ ಚಂದ್ರಶೇಖರ್ ರೆಡ್ಡಿ ಅವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮಹಾವಿದ್ಯಾಲಯದ ಸಸ್ಯಶಾಸ್ತ್ರ ವಿಭಾಗದ ಉಪನ್ಯಾಸಕರಾದ ಡಾ. ಬಸವರಾಜೇಶ್ವರಿ, ರಾಸಾಯನಶಾಸ್ತ್ರ ವಿಭಾಗದ ಉಪನ್ಯಾಸಕರಾದ ಬಸವರಾಜ್ ಹೂಗಾರ್, ವಾಣಿಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಅನುಪಮಾ ಕೆ, ಎಂ.ಕಾಂ ವಿಭಾಗದ ಉಪನ್ಯಾಸಕರಾದ ಶ್ರೀಮತಿ ದಿವ್ಯ ಬೂದೂರು, ಎನ್ ಎಸ್ ಎಸ್ ಅಧಿಕಾರಿಗಳಾದ ವಿಜಯೇಂದ್ರ ರಂಗ ಪ್ರಸಾದ್ ಹಾಗೂ ಚೊಳೇಂದ್ರ ಭೂಪಾಲ್, ದೈಹಿಕ ಶಿಕ್ಷಣ ನಿರ್ದೇಶಕರಾದ ಅಶೋಕ್ ಜಿ, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಎನ್ ಎಸ್ ಎಸ್ ಅಧಿಕಾರಿಗಳಾದ ವಿಜಯೇಂದ್ರ ರಂಗ ಪ್ರಸಾದ್ ಇವರು ಏಳು ದಿನಗಳ ಎನ್ ಎಸ್ ಎಸ್ ವರದಿಯನ್ನು ವಾಚನ ಮಾಡಿದರು. ವಿದ್ಯಾರ್ಥಿನಿಯರಾದ ಕುಮಾರಿ ರಾಜೇಶ್ವರಿ ಎಚ್.ಜಿ ಮತ್ತು ಆರತಿ ಹೆಚ್.ಜಿ ಏಳು ದಿನಗಳ ಎನ್ ಎಸ್ ಎಸ್ ಶಿಬಿರದ ಅನುಭವವನ್ನು ಹಂಚಿಕೊಂಡರು, ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಧೂಪಂ ಸತೀಶ್ ಸರ್ ಅವರು ಎನ್ ಎಸ್ ಎಸ್ ಶಿಬಿರ ಕುರಿತು ವಿದ್ಯಾರ್ಥಿಗಳು ಏಳು ದಿನಗಳ ಕಾಲ ಶ್ರಮಿಸಿದ್ದನ್ನು ಶ್ಲಾಘಿಸಿದರು. ಮುಖ್ಯ ಅಥಿತಿಯಾಗಿ ಆಗಮಿಸಿದ ಡಾ. ಗೋವಿಂದ ರಾಜು ಅವರು ಎನ್ ಎಸ್ ಎಸ್ ಶಿಬಿರಗಳ ಮಹತ್ವ ಕುರಿತು ತಿಳಿಸಿದರು ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀಮತಿ ಕಾತ್ಯಾಯಿನಿ ಎಂ ಮರಿದೇವಯ್ಯ ಅವರು ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಎನ್ ಎಸ್ ಎಸ್ ಶಿಬಿರದಲ್ಲಿ ವಿದ್ಯಾರ್ಥಿನಿಯರು ಭಾಗವಹಿಸುವುದರಿಂದ ಅವರ ವ್ಯಕ್ತಿತ್ವ ವಿಕಸನ ಆಗುತ್ತದೆ ಎಂದು ತಿಳಿಸಿದರು. ಈ ಕಾರ್ಯಕ್ರಮದ ನಿರೂಪಣೆಯನ್ನು ಕೆ ಎಂ ಚೈತನ್ಯವರು ಮಾಡಿದರು ಮತ್ತು ಸ್ವಾಗತ ಭಾಷಣವನ್ನು ಕೆ ಎಂ ಅನುಷಾ ಅವರು ಮಾಡಿದರು ಹಾಗೂ ವಂದನಾರ್ಪಣೆಯನ್ನು ಎನ್ ಎಸ್ ಎಸ್ ಅಧಿಕಾರಿಗಳಾದ ಚೊಳೇಂದ್ರ ಭೂಪಾಲ್ ನೆರವೇರಿಸಿದರು.

## ರುದ್ರಭೂಮಿಯಲ್ಲಿ ಸಿಲಿಕಾನ್ ಛೇಂಬರ ಅಳವಡಿಕೆ

# ರುದ್ರಭೂಮಿ ಅಭಿವೃದ್ಧಿಗೆ ಧರ್ಮಸ್ಥಳದ ನೆರವು: ಚನ್ನಕೇಶವ



• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಹಿಂದೂ ರುದ್ರಭೂಮಿ ಅಭಿವೃದ್ಧಿಗೆ ವಿವಿಧ ಕಾರ್ಯಕ್ರಮ ರೂಪಿಸಲಾಗಿದ್ದು, ಅಗತ್ಯ ಪರಿಕರ ಅಳವಡಿಸಲು ಆರ್ಥಿಕ ನೆರವು ನೀಡಲಾಗುತ್ತಿದೆ ಎಂದು ಯೋಜನೆಯ ಜಿಲ್ಲಾ ಯೋಜನಾಧಿಕಾರಿ ಚನ್ನಕೇಶವ ಹೇಳಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ತಾಲೂಕಿನ ಬೆನಕಟ್ಟಿ ಗ್ರಾಮದ ರುದ್ರಭೂಮಿಯಲ್ಲಿ ಅಳವಡಿಸಲಾಗಿರುವ ಸಿಲಿಕಾನ್ ಛೇಂಬರನ ಪೂಜಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ರಾಜ್ಯಾದ್ಯಂತ ಅನೇಕ ಕಡೆಗಳಲ್ಲಿ ರುದ್ರಭೂಮಿ ಅಭಿವೃದ್ಧಿಗೆ ಆರ್ಥಿಕ ನೆರವು ನೀಡಲಾಗಿದೆ ಎಂದರು.

ಮರಣ ಹೊಂದಿದ ವ್ಯಕ್ತಿಯ ಶವ ಸಂಸ್ಕಾರವನ್ನು ವ್ಯವಸ್ಥಿತವಾಗಿ ಮತ್ತು ಗೌರವಯುತವಾಗಿ ನೆರವೇರಿಸುವ ಮಾನವೀಯ ಉದ್ದೇಶದಿಂದ ಹಿಂದೂ ರುದ್ರಭೂಮಿ ಅಭಿವೃದ್ಧಿ ಕಾರ್ಯಕ್ರಮ ಜಾರಿಗೊಳಿಸಲಾಗಿದ್ದು, ಇದರನ್ವಯ ಬಾಗಲಕೋಟೆ ಜಿಲ್ಲೆಯಲ್ಲಿ 10 ಕ್ಕೂ ಹೆಚ್ಚು ರುದ್ರಭೂಮಿಗಳಲ್ಲಿ ಸಿಲಿಕಾನ್ ಛೇಂಬರ ಅಳವಡಿಸಲಾಗಿದೆ. ಜೊತೆಗೆ 3–4 ರುದ್ರಭೂಮಿಗಳಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ ಎಂದು ಚನ್ನಕೇಶವ ಹೇಳಿದರು.

ತಾಲ್ಲೂಕು ಯೋಜನಾಧಿಕಾರಿ ಬಸವರಾಜ್ ಮಾತನಾಡಿ, ಹಿಂದೂ ರುದ್ರಭೂಮಿ ಅಭಿವೃದ್ಧಿ ಕಾರ್ಯಕ್ರಮದನ್ವಯ ರಾಜ್ಯಾದ್ಯಂತ ಗ್ರಾಮೀಣ ಭಾಗದ ಸ್ಮಶಾನಗಳ ನವೀಕರಣ ಮತ್ತು ನಿರ್ವಹಣೆಗೆ ಅಗತ್ಯ ಸಲಕರಣೆಗಳನ್ನು ನೀಡಲಾಗುತ್ತಿದೆ. ಬಾಗಲಕೋಟೆ ಜಿಲ್ಲೆಯಲ್ಲೂ ಸಹ ಈ ಯೋಜನೆಯಡಿ 12 ಕ್ಕೂ ಹೆಚ್ಚು ರುದ್ರಭೂಮಿಗಳನ್ನು ನವೀಕರಣಗೊಳಿಸಲಾಗಿದೆ ಎಂದು ಹೇಳಿದರು.

ಬೆನಕಟ್ಟಿ ಗ್ರಾಮಸ್ಥರು ಹಾಗೂ ಸ್ಥಳೀಯ ಗ್ರಾಮ ಪಂಚಾಯತಿ ವ್ಯವಸ್ಥೆಯ ಮನವಿಯ ಮೇರೆಗೆ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ ನೇತೃತ್ವದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಗ್ರಾಮದ ರುದ್ರಭೂಮಿಯಲ್ಲಿ 1.51 ಲಕ್ಷ ರೂ.ಗಳ ವೆಚ್ಚದ ಸಿಲಿಕಾನ್ ಛೇಂಬರ ಅಳವಡಿಸಲಾಗಿದೆ.

ಪೂಜಾ ಕಾರ್ಯಕ್ರಮದಲ್ಲಿ ಶೇಖರಯ್ಯಸ್ವಾಮಿ ಘಂಟಿಮಠ, ನೀಲಪ್ಪ ಪೆಟ್ಲೂರ, ತಿಮ್ಮಣ್ಣ ಸನ್ನಪ್ಪನವರ, ಶಂಕರ ಕುದರಿ, ಹನಮಂತ ಸನ್ನಪ್ಪನವರ, ಅಶೋಕ ದಾಸಪ್ಪನವರ, ಮುತ್ತಪ್ಪ ಬಾಳಕ್ಕನವರ, ಮುತ್ತುರಾಜ ಅರಕೇರಿ, ರವಿ ಅರಿಷಿಣಗೋಡಿ, ನೀಲಪ್ಪ ಬಾಳಕ್ಕನವರ, ನಿಂಗಪ್ಪ ಹುಡೇದಮನಿ, ನಿಂಗಣ್ಣ ಯಡಹಳ್ಳಿ, ಹನಮಂತ ಅರಕೇರಿ, ನೀಲಪ್ಪ ಅಮಾತೆಪ್ಪನವರ, ಬಾಲಪ್ಪ ಆಲೂರ, ಅರ್ಜುನ ಮಾದರ, ದುರ್ಗಪ್ಪ ಮಾದರ ಹಾಗೂ ಧರ್ಮಸ್ಥಳ ಯೋಜನೆಯ ಸೇವಾ ಪ್ರತಿನಿಧಿಗಳು, ಸ್ವಸಹಾಯ ಸಂಘದ ಸದಸ್ಯರು ಇದ್ದರು.

# ನೆಟ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ


• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕೆ–ಸೆಟ್ ಯುಜಿಸಿ–ನೆಟ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ಆಯೋಜಿಸಿದೆ. ಆಸಕ್ತರು ನೋಂದಾಯಿಸಿಕೊಳ್ಳಬಹುದಾಗಿದೆ.

ರಾಜ್ಯ ಮಟ್ಟದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ (ಕೆ–ಸೆಟ್) ಹಾಗು ಯುಜಿಸಿ ನಡೆಸಲಿರುವ ರಾಷ್ಟ್ರ ಮಟ್ಟದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ (ಯುಜಿಸಿ–ನೆಟ್) ಮತ್ತು ಕಿರಿಯ ಶಿಷ್ಯ ವೇತನ ಸಂಶೋಧನ ಸಹಾಯಕ (ಜಿ.ಆರ್.ಎಫ್) ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ಮೈಸೂರಿನ ಕೇಂದ್ರ ಕಚೇರಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ.

ಆಸಕ್ತರು ಏ.24 ರೊಳಗಾಗಿ ಬೆಳಿಗ್ಗೆ 10 ರಿಂದ ಸಂಜೆ 04.30 ಗಂಟೆಯವರೆಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ದೂ.0821–2515944 ಗೆ ಸಂಪರ್ಕಿಸಬಹುದು ಎಂದು ಕರಾಮುವಿ ಬಳ್ಳಾರಿ ಪ್ರಾದೇಶಿಕ ಕೇಂದ್ರದ ಪ್ರಾದೇಶಿಕ ನಿರ್ದೇಶಕ ನಾಗೇಶ್ ಎಂ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಸವಣ್ಣನವರ ನುಡಿ ಪಾಲನೆ ಅಗತ್ಯ ಮಳಿಯಪ್ಪಯ್ಯ ಶ್ರೀಅಭಿಮತ



• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ಸ್ಥಳಿಯ ವಿದ್ಯಾಗಿರಿ 22ನೇಯ ರಸ್ತೆಯ ಈಶ್ವರ ದೇವಸ್ಥಾನದಲ್ಲಿ ಬಸವ ಜಯಂತಿಯನ್ನು ಶೃದ್ಧಾಭಕ್ತಿಯಿಂದ ಆಚರಿಸಲಾಯಿತು.

ಸೋಮವಾರ ಮುಂಜಾನೆ ಕುಂಭಮೇಳದೊಂದಿಗೆ ಬಸವಣ್ಣನವರ ಭಾವಚಿತ್ರದ ಮೆರವಣಿಗೆ ಅದ್ದೂರಿಯಾಗಿ ನಡೆಯಿತು. ನಂತರ ನಡೆದ ಕಾರ್ಯಕ್ರಮದ ದಿವ್ಯ ಸಾನಿಧ್ಯವಹಿಸಿದ್ದ ಮುರನಾಳ ಮಳೆರಾಜೇಂದ್ರಸ್ವಾಮಿ ಮಠದ ಪೂಜ್ಯರಾದ ಮಳಿಯಪ್ಪಯ್ಯ ಮಹಾಸ್ವಾಮಿಗಳು ಮಾತನಾಡಿ, ಬಸವಣ್ಣನವರ ಕುರಿತಾಗಿ ಕೇವಲ ಭಾಷಣ ಹಾಗೂ ಉಪನ್ಯಾಸಗಳನ್ನು ಮಾಡಿದರೆ ಸಾಲದು. ಪ್ರತಿಯೊಬ್ಬರೂ ಅವರ ನೀಡಿದ ಸಂದೇಶವನ್ನು ಪಾಲಿಸಿ ಬದುಕಿನಲ್ಲಿ ಅಳವಡಿಸಿಕೊಂಡು ಸಮ ಸಮಾಜ ನಿರ್ಮಾಣದಲ್ಲಿ ಕಾರ್ಯಪ್ರವೃತ್ತರಾಗಬೇಕಿದೆ ಎಂದರು.

ಜಿ.ಬಿ.ಕರ್ಜಗಿ ಅಧ್ಯಕ್ಷತೆವಹಿಸಿ ಮಾತನಾಡಿದರು. ಎಸ್.ವಿ.ಚವಾಡಪೂರ, ಬಸವರಾಜ ಚಿನಿವಾಲರ, ಮನೋಹರ ಬ್ಯಾಹಟ್ಟಿ, ಮಲ್ಲಿಕಾರ್ಜುನ ಶೆಲ್ಲಿಕೇರಿ, ಮಾಗಿ, ಸೋಮರೆಡ್ಡಿ, ಅಂಗಡಿ, ವೈಜಾಪುರ, ಕಂಬಳಿ, ಬಜೆಟ್ಟಿ, ಕಾಳಪ್ಪ ಪತ್ತಾರ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಗ್ರಾಮೀಣ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಬಳ್ಳಾರಿ ಗ್ರಾಮೀಣ ಜೆಸ್ಕಾಂ ವ್ಯಾಪ್ತಿಯ 110/11ಕೆ.ವಿ ಸೋಮಸಮುದ್ರ ಉಪ–ಕೇಂದ್ರದ ವಿದ್ಯುತ್ ವಿತರಣಾ ಕೇಂದ್ರದಲ್ಲಿ 4ನೇ ಮಾಸಿಕ ನಿರ್ವಹಣೆ ಮತ್ತು ದುರಸ್ತಿ ಕಾರ್ಯ ಕೈಗೊಂಡಿರುವುದರಿಂದ ಏ.22 ರಂದು ಬೆಳಿಗ್ಗೆ 08 ರಿಂದ ಮಧ್ಯಾಹ್ನ 03 ಗಂಟೆಯವರೆಗೆ 110/11ಕೆ.ವಿ ಸೋಮಸಮುದ್ರ ವಿದ್ಯುತ್ ಉಪ–ಕೇಂದ್ರ ಮತ್ತು 33/11ಕೆ.ವಿ ಗುಡದೂರು ವಿದ್ಯುತ್ ಉಪಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ವಿವಿಧ 11ಕೆ.ವಿ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

*ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು:*

ಎಫ್–1 ಎನ್.ಜೆ.ವೈ ಬಾಲಾಜಿ ನಗರ ಕ್ಯಾಂಪ್ ಮಾರ್ಗದ ಕರ್ಲಗುಂದಿ, ವಿಜಯನಗರ ಕ್ಯಾಂಪ್, ಜಾಲಿಬೆಂಜಿ, ಬಾಲಾಜಿ ನಗರ ಕ್ಯಾಂಪ್, ಜ್ಯಾಲಿಬೆಂಜಿ. ಎಫ್–11 ಐ.ಪಿ ಸೆಟ್ ಫೀಡರ್ ಸೋಮಸಮುದ್ರ ಮಾರ್ಗದ ಸೋಮಸಮುದ್ರ ವಕ್ರಾಣಿ ಕ್ಯಾಂಪ್, ಲಕ್ಷಿ ▯▯ನಗರ ಕ್ಯಾಂಪ್, ವೀರಾಂಜಿನೇಯ ಕ್ಯಾಂಪ್, ಕೋಳೂರು, ಮದಿರೆ, ಕೊಳಗಲ್ಲು, ಭಾಗ್ಯನಗರ ಕ್ಯಾಂಪ್, ಮಲ್ಲಾರೆಡ್ಡಿ ಕ್ಯಾಂಪ್, ಕೃಷಿ ಪ್ರದೇಶಗಳು.

ಎಫ್–10 ಶ್ರೀಧರಗಡ್ಡೆ ಎನ್.ಜೆ.ವೈ ಫೀಡರ್ ಮಾರ್ಗದ ಸೋಮಸಮುದ್ರ, ವಕ್ರಾಣಿ ಕ್ಯಾಂಪ್, ಲಕ್ಷಿ

▯▯ನಗರ ಕ್ಯಾಂಪ್, ವೀರಾಂಜಿನೇಯ ಕ್ಯಾಂಪ್, ಕೋಳೂರು, ಮದಿರೆ, ಭಾಗ್ಯನಗರ ಕ್ಯಾಂಪ್, ಮಲ್ಲಾರೆಡ್ಡಿ ಕ್ಯಾಂಪ್, ಕೋಳೂರು ಕ್ರಾಸ್, ದಮ್ಮೂರು, ಡಿ.ಕಗ್ಗಲ್, ವಿ.ಟಿ.ಕ್ಯಾಂಪ್.

ಎಫ್–4 ಐ.ಪಿ ಸೆಟ್ ಕರ್ಲಗುಂದಿ ಫೀಡರ್ ಮಾರ್ಗದ ಕರ್ಲಗುಂದಿ, ಬಾಲಾಜಿನಗರ ಕ್ಯಾಂಪ್, ಜ್ಯಾಲಿಬೆಂಜಿ, ಶ್ರೀಧರಗಡ್ಡ, ವಿಜಯನಗರ ಕ್ಯಾಂಪ್ ಕೃಷಿ ಪ್ರದೇಶಗಳು. ಎಫ್–5 ಡಾಕ್ಟರ್ ಕ್ಯಾಂಪ್ ಮಾರ್ಗದ ಶ್ರೀಧರಗಡ್ಡೆ, ಗುಡಾರ್ ನಗರ, ಎಸ್‌ಆರ್‌ಕೆ ಲೇಔಟ್ 1 ಮತ್ತು 2 ಪ್ಯೂಪಿಲ್ ಟ್ರೀ ಸ್ಕೂಲ್, ಬಸವೇಶ್ವರ ಲೇ▯ಔಟ್, ಎನ್.ಆರ್ ರಾಮಮೂರ್ತಿ ಮತ್ತು ಡಾಕ್ಟರ್ ಕ್ಯಾಂಪ್. ಎಫ್–10 ಸಿಟಿ ಫೀಡರ್ ಮಾರ್ಗದ ವಕ್ರಾಣಿ ಕ್ಯಾಂಪ್.

ಎಫ್–01 ಡಿ.ಕಗ್ಗಲ್ ಐಪಿ ಮಾರ್ಗದ ಡಿ.ಕಗ್ಗಲ್ ಕೃಷಿ ಪ್ರದೇಶಗಳು. ಎಫ್–02 ಗುಡುದೂರು ಐಪಿ ಮಾರ್ಗದ ಗುಡುದೂರು ಕೃಷಿ ಪ್ರದೇಶಗಳು. ಎಫ್–03 ಹಂದಿಹಾಳ್ ಐಪಿ ಮಾರ್ಗದ ಹಂದಿಹಾಳ್ ಚಾನಾಳ್ ಕೃಷಿ ಪ್ರದೇಶಗಳು. ಎಫ್–04 ಗುಡುದೂರು ಎನ್.ಜೆ.ವೈ ಮಾರ್ಗದ ಹಂದಿಹಾಳ್, ಚಾನಾಳ್, ಗುಡುದೂರು ಗ್ರಾಮಗಳು. ಎಫ್–05 ಚಾನಾಳ್ ಐಪಿ ಮಾರ್ಗದ ಚಾನಾಳ್ ಕೃಷಿ ಪ್ರದೇಶಗಳು. ಎಫ್–06 ತಾಳೂರು ಐಪಿ ಮಾರ್ಗದ ಹಡ್ಲಿಗಿ, ಹೀರೆ ಹಡ್ಲಿಗಿ, ಬರಸಕೋಡು, ತಾಳೂರು ಕೃಷಿ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹಾಗಾಗಿ ಸಾರ್ವಜನಿಕರು, ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆದಿ ಶಂಕರಾಚಾರ್ಯರ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ಭಾರತ ಆದ್ಯ ದಾರ್ಶನಿಕರಲ್ಲಿ ಪ್ರಮುಖರಾದ ಆದಿ ಶಂಕರಾಚಾರ್ಯರ ಜಯಂತಿಯನ್ನು ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ ನೀತಿ ಸಂಹಿತೆ ಹಿನ್ನಲೆಯಲ್ಲಿ ಜಿಲ್ಲಾಡಳಿತ ವತಿಯಿಂದ ಮಂಗಳವಾರ ಸರಳವಾಗಿ ಆಚರಿಸಲಾಯಿತು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಶಂಕರಾಚಾರ್ಯರ ಭಾವಚಿತ್ರಕ್ಕೆ ಜಿಲ್ಲಾಧಿಕಾರಿ ಸಂಗಪ್ಪ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ ಸೇರಿದಂತೆ ಇತರೆ ಅಧಿಕಾರಿಗಳು ಪುಷ್ಪಾರ್ಪಣೆ ಸಲ್ಲಿಸಿ ಗೌರವ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಶಂಕರಾಚಾರ್ಯರ ಜೀವನ, ತತ್ವ ಮತ್ತು ಭಾರತೀಯ ಸಂಸ್ಕೃತಿಗೆ ನೀಡಿದ ಅಮೂಲ್ಯ ಕೊಡುಗೆಗಳನ್ನು ಸ್ಮರಿಸಲಾಯಿತು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಪ್ರಭಾಕರ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಜಿ.ಮನ್ನಿಕೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಕಾಂಬಳೆ, ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಜಿ.ಎಸ್.ಹಿತ್ತಲಮನಿ, ಆಯುಷ ಇಲಾಖೆಯ ಅಧಿಕಾರಿ ಹಿರೇಮಠ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ರಮೇಶ ಸೂಳಿಕೇರಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಮಹನೀಯರ ಪುತ್ಥಳಿ ಶಂಕುಸ್ಥಾಪನೆ ಹಿನ್ನೆಲೆ

# ಶೆಡ್ ತೆರವು ವ್ಯಾಪಾರಸ್ಥರ ಬದುಕು ಸಂಕಷ್ಟಕ್ಕೆ



• ಮಲ್ಲಮ್ಮ ನುಡಿ ವಾರ್ತೆ, ಕುಕನೂರು

ಪಟ್ಟಣದ ಸೌಂದರ್ಯೀಕರಣ ಹಾಗೂ ಬಸವಣ್ಣನವರ ಪುತ್ಥಳಿ ನಿರ್ಮಾಣದ ಹಿನ್ನೆಲೆಯಲ್ಲಿ ಪಟ್ಟಣ ಪಂಚಾಯಿತಿ ರಸ್ತೆ ಬದಿ ಅಂಗಡಿ ಮತ್ತು ಶೆಡ್‌ಗಳ ತೆರವು ಕಾರ್ಯಾಚರಣೆ ಕೈಗೊಂಡಿದೆ.

ಇದರಿಂದ ದಶಕಗಳಿಂದ ಇದೇ ವ್ಯಾಪಾರವನ್ನು ನಂಬಿಕೊಂಡಿದ್ದ ನೂರಾರು ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. “ಸ್ವಚ್ಛತೆ ಇರಲಿ, ಆದರೆ ನಮ್ಮ ಹೊಟ್ಟೆ ಮೇಲೆ ಹೊಡೆಯಬೇಡಿ” ಎಂಬ ವ್ಯಾಪಾರಸ್ಥರ ಆಕ್ರಂದನ ಕೇಳಿಬರುತ್ತಿದೆ.

ಶನಿವಾರ ನಡೆದ ಕಾರ್ಯಾಚರಣೆಯಲ್ಲಿ ಟೀ ಅಂಗಡಿಗಳು, ಹೋಟೆಲ್‌ಗಳು, ಸೈಕಲ್ ಅಂಗಡಿಗಳು ಸೇರಿದಂತೆ ಹಲವು ರಸ್ತೆಬದಿ ಮಳಿಗೆಗಳನ್ನು ತೆರವುಗೊಳಿಸಲಾಯಿತು. ಹಲವು ವರ್ಷಗಳಿಂದ ಜೀವನೋಪಾಯವಾಗಿದ್ದ ಈ ಅಂಗಡಿಗಳು ನೆಲಸಮವಾಗಿವೆ.

ಮೇ 4ರಂದು ಇದೇ ಸ್ಥಳದಲ್ಲಿ ಶಾಸಕ ಬಸವರಾಜ್ ರಾಯರೆಡ್ಡಿ ಸೇರಿದಂತೆ ಗಣ್ಯರ ಸಮ್ಮುಖದಲ್ಲಿ ಜಗಜ್ಯೋತಿ ಬಸವಣ್ಣ, ಸಂಗೊಳ್ಳಿ ರಾಯಣ್ಣ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗಳ ಶಂಕುಸ್ಥಾಪನೆ ನಡೆಯಲಿದ್ದು, ಈ ಸ್ಥಳದಲ್ಲಿ ಬಸವಣ್ಣನವರ ಸ್ಮಾರಕ ನಿರ್ಮಾಣ ಉದ್ದೇಶಿಸಿ ತೆರವು ಕಾರ್ಯಾಚರಣೆ ನಡೆ–ಯುತ್ತಿದೆ ಎಂದು ತಿಳಿದುಬಂದಿದೆ. ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಅಂಗಡಿಗಳ ಹಿಂಭಾಗದಲ್ಲೇ ಸ್ಮಾರಕ ನಿರ್ಮಾಣವಾಗಲಿದೆ ಎನ್ನಲಾಗಿದೆ.

ಒಂದು ಕಡೆ ಸಾಲ ಪಡೆದು ವ್ಯಾಪಾರ ನಡೆಸುತ್ತಿದ್ದ ಸಣ್ಣ ವ್ಯಾಪಾರಿಗಳು ಈಗ ಅಂಗಡಿಗಳಿಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದು, ಸಾಲ ತೀರಿಸುವುದೇ ದೊಡ್ಡ ಸಮಸ್ಯೆಯಾಗಿದೆ. “20–30 ವರ್ಷಗಳಿಂದ ಇದೇ ಜಾಗದಲ್ಲಿ ವ್ಯಾಪಾರ ನಡೆಸುತ್ತಿದ್ದೇವೆ. ನಮಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು, ಈ ಕುರಿತು ವ್ಯಾಪಾರಸ್ಥರು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸ್ಥಳಕ್ಕೆ ಆಗಮಿಸಿದ ಸಂದರ್ಭದಲ್ಲಿ ಮನವಿ ಮಾಡಿದ್ದಾರೆ. ಇಲ್ಲವಾದರೆ ಬದುಕು ಕಷ್ಟಕರವಾಗಲಿದೆ,” ಎಂದು ವ್ಯಾಪಾರಸ್ಥರು ತಿಳಿಸಿದರು.

## ಶಿವಾನಂದ ತಗಡೂರು ಅವರಿಗೆ ಬಸವ ಜಯಂತಿಯಲ್ಲಿ ಅಭಿನಂದನೆ



**ಮೈಸೂರು:** ಕಲಾಮಂದಿರದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಅವರು ಅಭಿನಂದಿಸಿದರು.

ಬಸವ ಬಳಗಗಳ ಒಕ್ಕೂಟ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮತ್ತು ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳು ಒಟ್ಟಾಗಿ ಸಂಘಟಿಸಿದ್ದ ಈ ಕಾರ್ಯಕ್ರಮದಲ್ಲಿ ಪದ್ಮಶ್ರೀ ಡಾ.ಎಸ್.ಜಿ.ಸುಶೀಲಮ್ಮ, ಐಎಎಸ್ ಅಧಿಕಾರಿ ನಿತೇಶ್ ಪಾಟೀಲ್, ಐಪಿಎಸ್ ಅಧಿಕಾರಿ ಸೀಮಾ ಲಾಟ್ಕರ್, ಚಿನ್ನಸ್ವಾಮಿ ವಡ್ಡಗೆರೆ ಸೇರಿದಂತೆ ಒಂಬತ್ತು ಗಣ್ಯರನ್ನು ಪುರಸ್ಕರಿಸಲಾಯಿತು.

ಕಾರ್ಯಕ್ರಮದಲ್ಲಿ ಸಿದ್ಧಗಂಗಾ ಮಠದ ಕಿರಿಯ ಶ್ರೀ ಶಿವಸಿದ್ದೇಶ್ವರ ಸ್ವಾಮಿಜಿ, ದೇವನೂರು ಮಠದ ಸ್ವಾಮೀಜಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಡಾ.ಸಿ.ಸೋಮಶೇಖರ್ ಮತ್ತಿತರರು ಭಾಗವಹಿಸಿದ್ದರು.

## ಅಸಾಧಾರಣ ಮೇಧಾವಿ ಶಂಕರಾಚಾರ್ಯ

**ಹುಬ್ಬಳ್ಳಿ:** ಶಂ ಎಂದರೆ ಒಳಿತು ಎಂದರ್ಥ. ಕರ ಎಂದರೆ ಮಾಡುವವ.



ಲೋಕಕ್ಕೆಲ್ಲ ಸದಾ ಒಳ್ಳೆಯದನ್ನೇ ಮಾಡುವ ಪರಶಿವನಿಗೆ ಶಂಕರ ಎನ್ನುವುದು ಅನ್ವರ್ಥಕವಾದ ಹೆಸರು. ತನ್ನ ಸ್ವಭಾವವೇ ಆದ ಒಳಿತು ಮಾಡುವಿಕೆಗಾಗಿ ಅವನು ಮತ್ತೊಂದು ರೂಪ ತಳೆದಾಗ ಶಂಕರಾಚಾರ್ಯರ ಅವತಾರವಾಯಿತು ಎನ್ನುತ್ತಾರೆ ವಿದ್ವಾಂಸರು. ಪರಶಿವನ ಜ್ಞಾನ ಅವತಾರವಾಗಿ ಧರೆಗಿಳಿದವರು ಶಂಕರರು. ಶಂಕರಾಚಾರ್ಯರ ಜಯಂತಿಯು (ಶಂಕರ ಜಯಂತಿ) ಭಾರತೀಯ ತತ್ವಜ್ಞಾನ, ಸನಾತನ ಧರ್ಮ ಮತ್ತು ಸಂಸ್ಕೃತಿಯ ಇತಿಹಾಸದಲ್ಲಿ ಅತ್ಯಂತ ಮಹತ್ವದ ದಿನವಾಗಿದೆ. ಇದು ಜಗದ್ಗುರು ಆದಿ ಶಂಕರಾಚಾರ್ಯರ ಜನ್ಮದಿನವನ್ನು ಆಚರಿಸುವ ಹಬ್ಬವಾಗಿದೆ. ಇದರ ಮಹತ್ವವನ್ನು ಈ ಕೆಳಗಿನ ಅಂಶಗಳ ಮೂಲಕ ತಿಳಿಯಬಹುದು.


**ಅದ್ವೈತ ವೇದಾಂತದ ಪುನರುತ್ಥಾನ:** ಎಂಟನೇ ಶತಮಾನದಲ್ಲಿ ಸನಾತನ ಧರ್ಮವು ಹಾದಿ ತಪ್ಪಿ, ಮೂಢನಂಬಿಕೆ ಮತ್ತು ವಿವಿಧ ಪಂಥಗಳ ಸಂಘರ್ಷದಲ್ಲಿದ್ದಾಗ, ಶಂಕರಾಚಾರ್ಯರು ಅದ್ವೈತ ವೇದಾಂತ ("ಬ್ರಹ್ಮ ಸತ್ಯಂ ಜಗನ್ಮಿಥ್ಯಾ" – ಬ್ರಹ್ಮವೇ ಸತ್ಯ, ಜಗತ್ತು ಮಿಥ್ಯೆ) ಸಿದ್ಧಾಂತವನ್ನು ಪುನರ್ ಸ್ಥಾಪಿಸಿ ಧರ್ಮವನ್ನು ರಕ್ಷಿಸಿದರು.

**ಧಾರ್ಮಿಕ ಏಕತೆ:** ಭಾರತದ ನಾಲ್ಕು ದಿಕ್ಕುಗಳಲ್ಲಿ (ಶೃಂಗೇರಿ, ದ್ವಾರಕಾ, ಪುರಿ, ಜೋಷಿಮಠ) ನಾಲ್ಕು ಮಠಗಳನ್ನು ಸ್ಥಾಪಿಸುವ ಮೂಲಕ, ದೇಶವನ್ನು ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ಒಂದುಗೂಡಿಸಿದರು. ಈ ಜಯಂತಿಯು ಆ ಏಕತೆಯ ಸಂಕೇತವಾಗಿದೆ.

**ಜ್ಞಾನ ಮತ್ತು ಭಕ್ತಿಯ ಸಮನ್ವಯ:** ಶಂಕರಾಚಾರ್ಯರು ಕೇವಲ ಜ್ಞಾನ ಮಾರ್ಗಿಗಳಾಗಿರದೆ, ಸೌಂದರ್ಯ ಲಹರಿ, ಭಜ ಗೋವಿಂದಂನಂತಹ ಕೃತಿಗಳ ಮೂಲಕ ಭಕ್ತಿ ಮಾರ್ಗವನ್ನೂ ಬೋಧಿಸಿದರು. ಅವರ ಜೀವನ ಮತ್ತು ಬೋಧನೆಗಳು ಜ್ಞಾನ, ಭಕ್ತಿ ಮತ್ತು ಶಿಸ್ತಿನ ಮಹತ್ವವನ್ನು ನೆನಪಿಸುತ್ತವೆ.

**ಸನಾತನ ಧರ್ಮದ ರಕ್ಷಣೆ:** ಸನಾತನ ಧರ್ಮದ ತತ್ವ ಸಿದ್ಧಾಂತಗಳನ್ನು ಬಲಪಡಿಸಿ, ಉಪನಿಷತ್ತುಗಳು, ಭಗವದ್ಗೀತೆ ಮತ್ತು ಬ್ರಹ್ಮಸೂತ್ರಗಳಿಗೆ ಭಾಷ್ಯಗಳನ್ನು (ವ್ಯಾಖ್ಯಾನ) ಬರೆಯುವ ಮೂಲಕ ವೈದಿಕ ಸಂಪ್ರದಾಯವನ್ನು ಉಳಿಸಿದರು. ಶಂಕರಾಚಾರ್ಯ ಜಯಂತಿ ಎಂಬುದು ಕೇವಲ ಜನ್ಮದಿನವಲ್ಲ, ಬದಲಾಗಿ ಜ್ಞಾನ, ಅಧ್ಯಾತ್ಮ ಮತ್ತು ಭಾರತೀಯ ಸಂಸ್ಕೃತಿಯ ಬೇರುಗಳನ್ನು ಸ್ಮರಿಸುವ ಮತ್ತು ಅವುಗಳನ್ನು ಪೋಷಿಸುವ ಪವಿತ್ರ ದಿನವಾಗಿದೆ.

## ಆದಿಗುರು ಶಂಕರಾಚಾರ್ಯ ಜಯಂತಿ



**ಸಿಂಧನೂರು:** ಶಂಕರಾಚಾರ್ಯರು ಎಂಟು ವರ್ಷದವರಿವಾಗಲೇ ನಾಲ್ಕು ವೇದಗಳನ್ನು, 11ನೇ ವಯಸ್ಸಿಗೆ ಸರ್ವಶಾಸ್ತ್ರಗಳನ್ನು ಕಲಿತು, 16ನೇ ವಯಸ್ಸಿಗೆ ಬರುವಷ್ಟರಲ್ಲಿ ಭಾಷ್ಯಗಳನ್ನು ಬರೆದರು. ಅವರು ಅದ್ವೈತ ಸಿದ್ಧಾಂತದ ಪ್ರತಿಪಾದಕರಾಗಿದ್ದರು ಎಂದು ಉಪನ್ಯಾಸಕ ಮನೋಜ್ ಕುಮಾರ್ ಬಾಪಟ್ಲ ಹೇಳಿದರು. ಅವರು ಮಂಗಳವಾರ ತಹಶೀಲ್ದಾರ್ ಕಚೇರಿಯಲ್ಲಿ ಆದಿ ಗುರು ಶಂಕರಾಚಾರ್ಯರ ಜಯಂತೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ಜಗತ್ತಿನಲ್ಲಿ ಧರ್ಮದ ಪುನರ್ ಸ್ಥಾಪನೆಗಾಗಿ ಆಗಾಗ ಮಹಾತ್ಮರು ಜನಿಸಿದ್ದು ಐತಿಹಾಸಿಕ ಸತ್ಯ. ಅಂತಹ ಮಹಾತ್ಮರ ಸಾಲಿನಲ್ಲಿ ಶಂಕರಾಚಾರ್ಯರು ಒಬ್ಬರು. ಅವರು ದೇವರಲ್ಲಿ ನಂಬಿಕೆ ಇಡಿ, ಸಜ್ಜನರ ಸಹವಾಸ ಮಾಡಿ,ದೀನ– ದಲಿತರಿಗೆ ಸಹಾಯ ಮಾಡಿ,ಇದ್ದುದರಲ್ಲಿ ತೃಪ್ತ ಹಾಗೂ ಸರಳ ಜೀವನ ನಡೆಸಲು ಸದಾ ಉಪದೇಶಿಸುತ್ತಿದ್ದರು ಎಂದು ವಿವರಿಸಿದರು. ಶಾಸಕ ಹಂಪನಗೌಡ ಬಾದರ್ಲಿ ಶಂಕರಾಚಾರ್ಯರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸಿದರು. ತಹಸಿಲ್ದಾರ್ ಅರುಣ್ ಎಚ್ .ದೇಸಾಯಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವೈ. ಅನಿಲಕುಮಾರ್ ,ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಎಂ.ದೊಡ್ಡ ಬಸವರಾಜ, ತಾಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷ ಕೆ. ಗೋವಿಂದರಾವ್ ,ಕಾರ್ಯದರ್ಶಿ ಆನಂದ ಗೌರ್ಕರ್, ಮುಖಂಡರಾದ ನರಸಿಂಹ ಆಚಾರ್ಯ ಮಠಾಧಿಕಾರಿ, ಈರೇಶ್ ಇಲ್ಲೂರು, ಎಚ್. ಎನ್.ಬಡಿಗೇರ, ವೆಂಕಟರಾವ್ ಬಂಡಿ, ಗುಂಡುರಾವ್ ಚನ್ನಳ್ಳಿ, ನಾರಾಯಣರಾವ್ ದೇಸಾಯಿ, ಭೀಮಸೇನ ಜಾಗೀರ್ದಾರ್, ಅವಿನಾಶ ಬಂಡಿ ಭಾಗವಹಿಸಿದ್ದರು.

# ಬಸವಣ್ಣನವರ ಕಾಯಕ ತತ್ವ ಅನುಕರಣೀಯ

• ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ

ಜಗಜ್ಯೋತಿ ಬಸವೇಶ್ವರರ ಕಾಯಕ ತತ್ವ ಸರ್ವಕಾಲಕ್ಕೂ ಅನುಕರಣೀಯ ಎಂದು ಶಾಸಕ ನೇಮರಾಜ್ ನಾಯಕ್ ಹೇಳಿದರು.

ಹಗರಿಬೊಮ್ಮನಹಳ್ಳಿ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಇಂದು ನೂತನವಾಗಿ ನವೀಕರಣಗೊಂಡು ಬಸವಣ್ಣ ಪುತ್ಥಳಿಯನ್ನು ಶಾಸಕ ಕೆ ನೇಮಿರಾಜ ನಾಯ್ಕ ರಿಮೋಟ್ ಹಾಕುವ ಮೂಲಕ ಅನಾವರಣ ಗೊಳಿಸಿದರು. ಈ ಸಂದರ್ಭದಲ್ಲಿ ಮರಿಯಮ್ಮನಹಳ್ಳಿ ಮಲ್ಲಿಕಾರ್ಜುನ ಸ್ವಾಮಿ, ನಂದಿಪುರ ಮಹೇಶ್ವರ ಸ್ವಾಮಿ, ಹಾಲಸ್ವಾಮಿ ಮಠದ ಹಾಲ ಸಿದ್ದೇಶ್ವರ ಸ್ವಾಮಿ, ಬಾಚಿಗೊಂಡನಹಳ್ಳಿ ಶಿವ ಮಹಾಂತ ಸ್ವಾಮಿ, ಕಡಲಬಾಳು ಶಾಖ ಗವಿಮಠದ ಮರಿ ಮಹಾಂತ ಸ್ವಾಮಿ, ಪ್ರಮುಖರಾದ ಬಾದಾಮಿ ಮೃತ್ಯುಂಜಯ, ವೈ ಮಲ್ಲಿಕಾರ್ಜುನ, ಕೊಟ್ರೇಶ್ ಶೆಟ್ಟರ್, ಕಿನ್ನಾಳ್ ಸುಭಾಷ್ ಭಾಗವಹಿಸಿದ್ದರು,

ಪಟ್ಟಣದಲ್ಲಿ ಆಯೋಜನೆ ಮಾಡಿದ್ದ ಸಭೆಯ ಕಾರ್ಯಕ್ರಮ ಉದ್ಘಾಟನೆ ಮಾಡಿ ಮಾತನಾಡಿದ ಕೆ.ನೇಮರಾಜ ನಾಯ್ಕ ಅವರು 12ನೇ ಶತಮಾನದಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳನ್ನು ಸಾರಿದ ಅನುಭವ



ಮಂಟಪದಲ್ಲಿ ಬಸವಣ್ಣನವರು ಹನ್ನೆರಡನೇ ಶತಮಾನದ ಮಹಾನ್ ಸಮಾಜದ ಸುಧಾರಕ ಬಸವಣ್ಣನವರು ಅನುಭವ ಮಂಟಪದಲ್ಲಿ ಆ ಕಾಲದಲ್ಲೇ ಒಂದು ವಿಶಿಷ್ಟವಾದ ಚಿಂತನ ವೇದಿಕೆಯಾಗಿತ್ತು. ಇಲ್ಲಿನ ಸಮಾಜದ ಎಲ್ಲಾ ವರ್ಗದ ಜನರು ಸೇರಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವ ಆವರಣ ಪಡೆದಿದ್ದರು, ಇದು ನಿಜವಾದ ಪ್ರಜಾಪ್ರಭುತ್ವದ ಆಧಾರವಾಗಿತ್ತು ನುಡಿದಂತೆ ನಡೆಯುತ್ತಿದ್ದರು , ಇಂದಿನ ಸಂಸದೀಯ ವ್ಯವಸ್ಥೆ ಮಹಿಳೆಯರಿಗೆ ಅನ್ಯಾಯವಾಗುತ್ತಿದೆ ಅಂದಿನ ಅಕ್ಕಮಹಾದೇವಿ ಅವರಿಗೆ ಪ್ರಶಸ್ತಿಯನ್ನು ದೊರಕಿತ್ತು ಇಂದು ಮಹಿಳೆಯರಿಗೆ ದೊರಕುತ್ತಿಲ್ಲ ಎಂದು ಅಭಿಪ್ರಾಯಪಟ್ಟರು. ಬಸವಣ್ಣ ಜಾತಿ, ಧರ್ಮ, ಲಿಂಗ ಭೇದವಿಲ್ಲದ ಎಲ್ಲರಿಗೂ ಸಮಾನ ಹಕ್ಕು ನೀಡಿದ ಮಹಾನದಾರ್ಶನಿಕರಾಗಿದ್ದರು, ಅನುಭವ ಮಂಟಪ ಕೇವಲ ಧಾರ್ಮಿಕ ವೇದಿಕೆ ಮಾತ್ರವಲ್ಲ ಅದು ಸಾಮಾಜಿಕ ಮತ್ತು ನೈತಿಕ ಮೌಲ್ಯಗಳ ಚರ್ಚೆ ವೇದಿಕೆಯಾಗಿತ್ತು ಎಂದು ಹೇಳಿದರು.

2012ರಲ್ಲಿ ಅನಾವರಣಗೊಂಡಿತ್ತು ಮತ್ತು ಇಂದು ನಿಮ್ಮೆಲ್ಲರ ಸಹನೆ ಸಹಕಾರ ಆಸೆಯಂತೆ ಅದ್ಭುತವಾಗಿ ಬಸವಣ್ಣನವರ ಸರ್ಕಲ್ ಪುತ್ಥಳಿ ಅಚ್ಚುಕಟ್ಟಾಗಿ ಸುಮಾರು 65 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗಿದೆ ಎಂದು ಹೇಳಿದರು, ಇಂದಿನ ನೂತನ ಬಸಣ್ಣವರ ಪುತ್ಥಳಿಯನ್ನು ಅಚ್ಚುಕಟ್ಟಾಗಿ ನಿರ್ಮಿಸಿರುವ ವಿಜಯ್ ಕುಮಾರ್ ಸಂಗಡಿಗರಿಗೆ ಧನ್ಯವಾದ ತಿಳಿಸಿದರು. ಪ್ರಸ್ತಿಹಿಕವಾಗಿ ಮಾತನಾಡಿದ ಬಾದಾಮಿ ಮೃತ್ಯುಂಜಯ (ಮುತ್ತಣ್ಣ ) ಇಂದು ಶಾಸಕರ ಅಮೃತ ಹಸ್ತದಿಂದ ಶ್ರೀ ಬಸವೇಶ್ವರ ಪುತ್ಥಳಿ ಅನಾವರಣಗೊಂಡಿದೆ ನಮ್ಮೆಲ್ಲರಿಗೂ ಹರ್ಷ ತಂದಿದೆ ಎಂದರು, ಪೂಜ್ಯರು ಆಶೀರ್ವಚನ ನೀಡಿದರು. ನಿರೂಪಣೆಯನ್ನು ಶಿವಶಂಕರ ಸ್ವಾಮಿ ನಿರ್ವಹಿಸಿದರು ಸ್ವಾಗತ ಇಟಗಿ ಪ್ರಭಾಕರ್ ನಿರ್ವಹಿಸಿದರು, ಪ್ರಾರ್ಥನೆ ಶ್ರೀ ಶಾರದಾ ಮಂಜುನಾಥ್, ರೈತ ಗೀತೆ ಮಹಾಂತೇಶ್, ಹನುಮೇಶ್, ಕಲಾವಿದರು ನಿರ್ವಹಿಸಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಶಿವಕುಮಾರ್ ಗೌಡ್ರು ಉಪ ತಾಶಿಲ್ದಾರರು, ಕಮಲಮ್ಮ, ಹಿಂದೂಮತಿ ಮೇಡಂ, ಮಂಜುನಾಥ್ ಗೌಡ್ರು ಆನಂದ ದೇವನಹಳ್ಳಿ , ಜೆ ಎಂ ಜಗದೀಶ್, ಕನ್ನಿಹಳ್ಳಿ ಚಂದ್ರಶೇಖರ್, ಬಡಿಗೇರ್ ಸಿದ್ದರಾಜು, ಉಪ್ಪಾರ್ ಕನಕಪ್ಪ, ಹಾಗೂ ಸಮಾಜದ ಗಣ್ಯ ವ್ಯಕ್ತಿಗಳು ಯುವಕರು ಮಹಿಳೆಯರು ಉಪಸ್ಥಿತರಿದ್ದರು.

## ಸಮಾಜ ಸುಧಾರಕ ಬಸವಣ್ಣ ಜಯಂತಿ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ಬಸವ ಜಯಂತಿಯನ್ನು ಸರ್ಕಾರ ಬಹಳ ಶ್ರದ್ಧೆಯಿಂದ ಮಾಡುತ್ತಿದೆ. ಬಸವಣ್ಣ ಅವರು ಒಬ್ಬ ಸಮಾಜ ಸುಧಾರಕರು. ಸಮಾಜದಲ್ಲಿರುವ ಜಾತಿ ಅಸಮಾನತೆ ಹೋಗಬೇಕು, ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು

ತಾಲ್ಲೂಕಿನ ಮಾದಹಳ್ಳಿ ಮಠದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ಬಸವ ಸಮಿತಿಯ ವತಿಯಿಂದ ಅಧ್ಯಕ್ಷ ಹಂದನಹಳ್ಳಿ ಸೋಮಶೇಖರ್ ಹಾಗೂ ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ನೇತೃತ್ವದಲ್ಲಿ ಬಸವ ಜಯಂತಿ ಹಾಗೂ ಬಸವದ್ವಾರ ಉದ್ಘಾಟನೆ ಕಾರ್ಯಕ್ರಮ ಮಾತನಾಡಿ ಜಾತಿರಹಿತ ವರ್ಗ ರಹಿತ ಸಮಾಜ, ನಿರ್ಮಾಣ ಆಗಬೇಕು ಎಂದು ಬಸವಣ್ಣ ಬಯಸಿದರು. ಬಸವಣ್ಣ ಅವರು ಮೇಲ್ಜಾತಿಯಲ್ಲಿ ಹುಟ್ಟಿದ್ದೇನೇ ಎಂದು ಹೇಳಿಕೊಳ್ಳಲಿಲ್ಲ. ನಾನು ಅಸ್ಪಶ್ಯ ಜಾತಿಯಲ್ಲಿ ಹುಟ್ಟಿದ್ದೇನೆ ಎಂದು ಹೇಳಿಕೊಂಡರು. ಬಸವಣ್ಣ ಅವರನ್ನು ಮಾನವತಾವಾದಿ ಎಂದು ನಾವು ಕರೆಯುತ್ತೇವೆ. ಸಮಾನತೆ, ಭ್ರಾತೃತ್ವದ ಮತ್ತು ಸಾಮಾಜಿಕ



ನ್ಯಾಯ ಇವು ನಮ್ಮ ಸಂವಿಧಾನದ ಪಿಲ್ಲರ್ ಗಳು. ಇದನ್ನೇ ಬಸವಣ್ಣ ಕೂಡ ಹೇಳಿದರು.

.ನಮ್ಮ ಸರ್ಕಾರ ಬಸವಣ್ಣ ಅವರನ್ನು ಸಾಂಕೃತಿಕ ನಾಯಕ ಎಂದು ಕ್ಯಾಬಿನೆಟ್ ನಲ್ಲಿ ತೀರ್ಮಾನ ಮಾಡಿ ಸರ್ಕಾರದ ಆದೇಶ ಹೊರಡಿಸಿದ್ವಿ. ನಾನು 2013 ರಲ್ಲಿ ನಾನು ಮುಖ್ಯಮಂತ್ರಿ ಆದಾಗ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಫೋಟೋ ಇಡಲೇಬೇಕು ಎಂದು ಆದೇಶ ಮಾಡಿದೆ. ಹಾಲಿ ಹಾಗೂ ಮಾಜಿ ಶಾಸಕರು ಕೆಲವು ಬೇಡಿಕೆಗಳನ್ನು ಇಟ್ಟಿದ್ದು, ಇಬ್ಬರ ಬೇಡಿಕೆಗಳನ್ನು ಈಡೇರಿಸುವ ಕೆಲಸ ಮಾಡುತ್ತೇನ ವಿದೇಶಗಳಲ್ಲಿ ಕೂಡ ಇಂದು ಬಸವ ಜಯಂತಿಯನ್ನು ಆಚರಣೆ ಮಾಡುತ್ತಾರೆ ಎಂದು ತಿಳಿಸಿದರು.

## ವಿದ್ಯಾರ್ಥಿಗಳ ಸಾಧನೆಯೇ ಸಾಕ್ಷಿ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ತಾಲ್ಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ವಿಜ್ಞಾನ ಪಿಯು ಕಾಲೇಜಿನ ವಿದ್ಯಾರ್ಥಿ ವಿಶ್ವರಾಜ ಅಶೋಕ ಮರಪಳ್ಳಿ ಜೆಇಇ ಮೇನ್ಸ್ ಪರೀಕ್ಷೆಯಲ್ಲಿ 90.09 ಪರ್ಸೆಂಟೈಲ್ ಪಡೆದು ಅಂಗವೈಕಲ್ಯ ಕೋಟಾದಡಿಯಲ್ಲಿ ರಾಷ್ಟ್ರಮಟ್ಟದಲ್ಲಿ ಮೊದಲನೇ ರ್ಯಾಂಕ್ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾನೆ ಎಂದು ಪ್ರಾಚಾರ್ಯ ಬಸವರಾಜ ಮೊಳಕೀರೆ ತಿಳಿಸಿದ್ದಾರೆ.

**ಸಾಧಕ ವಿದ್ಯಾರ್ಥಿಗಳ ವಿವರ:** ಪ್ರೀತಂ ಧೂಳಪ್ಪಾ 99.77 ಪರ್ಸೆಂಟೈಲ್, ಓರ್ಘಾಸ್ ಜೈನ್ 99.74, ಶಿವಾಂಗ ಮೂಲಂಗೆ 99.70, ವಿವೇಕ ವಿಜಯಕುಮಾರ 99.56, ಉಲ್ಲಾಸ ದೇವೇಂದ್ರ 99.45, ಅಜಿಂಕ್ಯಾ ಸತೀಶ 99.22, ನಾರಾಯಣರೆಡ್ಡಿ ರವೀಂದ್ರ ರೆಡ್ಡಿ 99.11, ಜಯಂತ ಚವ್ಹಾಣ 99.09, ನಿಧಿ ಅಶೋಕ 99, ರವಿಕುಮಾರ ಬಾಬುರಾವ್ 99, ಶ್ರೀಶೈಲ್ ಜಗನ್ನಾಥ 99, ಅರುಣ ಝುಳಕಿ 99, ಸೋಹಂಕುಮಾರ ನಾಗರಾಜು 99, ಆದರ್ಶ ರೆಡ್ಡಿ ಶ್ರೀಮಂತರೆಡ್ಡಿ 99, ರಿಷಭ್ ರಾಘವೇಂದ್ರ 98.47, ಋಗ್ವೇದ ಪಂಢರಿನಾಥ 98.47, ಆದಿತ್ಯ ಅವಧೇಶಕುಮಾರ 98.45, ಸಾಕ್ಷಿ ಹಣಮಂತರಾವ್ 98.38, ಶಿವಕುಮಾರ ವಿಶ್ವನಾಥ 98.16, ಕಾರ್ತಿಕ ದಿಗಂಬರ 98, ವೈಭವ ಸಿದ್ದಯ್ಯ 98, ಕಿಶನಸಿಂಗ್ ಶ್ರೀನಾರಾಯಣ 98, ಶ್ರೇಯಾಸ್ ಹಿಬಾರೆ 98, ಆರ್.ವಿ.ಅನಂತ 97.90, ಕಿರಣ ಶರಣಪ್ಪ 97.84, ಶೇಯಾ ಉಡಚಣ 97.69, ಸೇರಿದಂತೆ ಸುಮಾರು 200 ವಿದ್ಯಾರ್ಥಿಗಳು ಜೆಇಇ ಅಡ್ವಾನ್ಸ್ ಪರೀಕ್ಷೆಗೆ ಅರ್ಹತೆ ಪಡೆದಿದ್ದಾರೆ.

**ನಮ್ಮ ಕಾಲೇಜಿನ ಸುಮಾರು 200 ವಿದ್ಯಾರ್ಥಿಗಳು ಜೆಇಇ ಅಡ್ವಾನ್ಸ್ ಪರೀಕ್ಷೆಗೆ ಅರ್ಹತೆ ಪಡೆಯುವ ಮೂಲಕ ಪ್ರತಿಭೆಗೆ ಗ್ರಾಮೀಣ, ಪಟ್ಟಣ ಎಂಬ ಭೇದವಿಲ್ಲ. ಗುಣಾತ್ಮಕ ಶಿಕ್ಷಣ ನೀಡಿದರೆ ಸಾಮಾನ್ಯ ವಿದ್ಯಾರ್ಥಿಯೂ ಅಸಾಮಾನ್ಯ ಪ್ರತಿಭೆ ನೀಡುತ್ತಾನೆ ಎಂಬುದಕ್ಕೆ ವಿದ್ಯಾರ್ಥಿಗಳ ಸಾಧನೆಯೇ ಸಾಕ್ಷಿ.**

**–ಬಸವಲಿಂಗ ಪಟ್ಟದ್ದೇವರು, ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ**

# ಶರಣ ಭಾರತ ಕಾಯಕ ಪ್ರಶಸ್ತಿ -2026-27 ಪ್ರಕಟ

• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ

ಶರಣರ ಕರ್ಮಭೂಮಿ ಬಸವಕಲ್ಯಾಣದಲ್ಲಿ ದಿವ್ಯಜೀವನ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಶರಣ ಭಾರತ ಸಂಶೋಧನಾ ಮತ್ತು ತರಬೇತಿ ಸಂಸ್ಥೆ ಪ್ರಾರಂಭವಾಗಿದೆ ಈ ಸಂಸ್ಥೆಯು ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯದ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡು ಸಂಶೋಧನೆ ಪ್ರಕಟಣೆ–ಪ್ರಶಸ್ತಿ ಪುರಸ್ಕಾರ ವಚನ ಸಾಹಿತ್ಯ ಪ್ರಚಾರ ಮಾಡಲು ಯೋಜನೆ ಹಮ್ಮಿಕೊಂಡಿದ್ದು ಬಸವಾದಿ ಶರಣ ಸಾಹಿತ್ಯ ಕುರಿತು ಸೇವೆ ಸಲ್ಲಿಸಿದವರಿಗೆ ಜಿಲ್ಲಾ ರಾಜ್ಯ ಮತ್ತು ರಾಷ್ಟ್ರೀಯ ಪ್ರಶಸ್ತಿಯನ್ನು ಬಸವ ಜಯಂತಿಯ ಸಂದರ್ಭದಲ್ಲಿ ನೀಡಲಾಗುವದು. 2026–27ನೇ ಸಾಲಿನ ಪ್ರಶಸ್ತಿಯು ಸಾಹಿತಿ ಗೊ.ರು. ಚನ್ನಬಸಪ್ಪ ಮತ್ತು ಪರಿಶುದ್ಧ ರಾಜಕಾರಣಿ ಬಸವರಾಜ ಪಾಟೀಲ ಸೇಡಂರವರಿಗೆ ರಾಷ್ಟ್ರೀಯ "ಶರಣ ಭಾರತ ಕಾಯಕ" ಪ್ರಶಸ್ತಿಯನ್ನು ಘೋಷಿಸಲಾಗಿದೆ. ರಾಜ್ಯಮಟ್ಟದ ಪ್ರಶಸ್ತಿಗೆ ಜಗದ್ಗುರು ಸಿದ್ಧರಾಮೇಶ್ವರ



ಮಹಾಸ್ವಾಮಿಗಳು ಆಯ್ಕೆಯಾಗಿದ್ದಾರೆ.

ಇದೆ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ಪ್ರಶಸ್ತಿಗಳು ಈ ಕೆಳಗಿನವರಿಗೆ ನೀಡಲಾಗಿದೆ.

1]ಶ್ರೀಮತಿ ಮೀನಾಕುಮಾರಿ ಬೊರಾಳಕರ ಕ್ಷೇತ್ರ ಆಡಳಿತ 2] ಶ್ರೀಶೈಲ ಹುಡೆದ ನಿ.ಸ.ನೌಕರರು ಕ್ಷೇತ್ರ ಕನ್ನಡ ಭಾಷೆ, 3] ವಿಠ್ಠಲರಾವ ತಲಾಠಿ ನಿ.ಸ.ನೌಕರರು. ಕ್ಷೇತ್ರ



ಕಂದಾಯ, 4] ಬಸವರಾಜ ಬೇಲೂರೆ ನಿ.ಸ.ನೌಕರರು ಕ್ಷೇತ್ರ ಕೃಷಿ, 5] ಶ್ರೀ ಭೀಮಾಶಂಕರ ಮಾಶಾಳಕರ ನಿ.ಸ.ನೌಕರರು ಕ್ಷೇತ್ರ ಶಿಕ್ಷಣ 6] ನೈಯುಮೋದ್ದಿನ ಚಾಬುಕಸವಾರ ಕ್ಷೇತ್ರ ಪತ್ರಿಕಾ, 7] ಪಾಂಡುರಂಗ ಅಣ್ಣೆಪ್ಪಾ ಕ್ಷೇತ್ರ ಹೇರ್ ಕಟಿಂಗ್ 8] ಶ್ಯಾಮರಾವ ಸಿಂಗ್ ನಿ.ಸ.ನೌಕರರು ಕ್ಷೇತ್ರ ವಕೀಲರು 9] ಮಲ್ಲಿಕಾರ್ಜುನ



ಶಶಿಧರ ಕ್ಷೇತ್ರ–ಗ್ರೂಪ್ ಡಿ. ನೌಕರ 10] ಕಾಶಿಬಾಯಿ ಗಂಡ ಸಿದ್ಧಲಿಂಗಪ್ಪ ಕ್ಷೇತ್ರ ಶೌಚಾಲಯ ಸ್ವಚ್ಛತೆ ಕೂಲಿ, 11] ಡಾ॥ ಐಶ್ವರ್ಯ ಮಂಠಾಳೆ ಕ್ಷೇತ್ರ ವೈದ್ಯಕೀಯ ಆಯ್ಕೆ ಆಗಿದ್ದಾರೆ ಎಂದು ಶರಣ ಭಾರತ ಸಂಶೋಧನಾ ಮತ್ತು ತರಬೇತಿ ಸಂಸ್ಥೆ ಸಂಯೋಜಕರಾದ ಗುರುನಾಥ ಗಡ್ಡೆ ಅವರು ತಿಳಿಸಿದ್ದಾರೆ.

# ಮಾದರಿ ಕಾರ್ಯ; ಪಕ್ಷಿಗಳ ಬಾಯಾರಿಕೆಗೆ ಅರವಟ್ಟಿಗೆ



ವರ್ತಮಾನ–ವಿಜಯ
● ಮಧೂರ ತಿಳಗೂಳಕರ
ಜಿಲ್ಲಾ ವರದಿಗಾರರು

ಬಿರು ಬಿಸಿಲಿನ ತಾಪಮಾನದಿಂದ ನೀರಿನ ಕೊರತೆಯಿಂದ ಎಲ್ಲೆಡೆ ಪಕ್ಷಿ ಸಂಕುಲ ಸಂಕಷ್ಟಕ್ಕೆ ಸಿಲುಕುತ್ತಿರುವುದು ಸಾಮಾನ್ಯ ದೃಶ್ಯವಾಗಿದೆ, ಆದರೆ ವಿಜಯಪುರ ಜಿಲ್ಲೆಯ ತಾಳಿಕೋಟಿ ತಾಲೂಕಿನ ಗಡಿ ಸೋಮನಾಳ ಗ್ರಾಮದ ಯುವಕರ ತಂಡ ಕೈಗೊಂಡಿರುವ ವಿನೂತನ ಕಾರ್ಯ ಪರಿಸರ ಪ್ರೇಮಿಗಳ ಗಮನ ಸೆಳೆದಿದೆ....

ಹೌದು ನಿರುಪಯುಕ್ತ ಪ್ಲಾಸ್ಟಿಕ್ ಬಾಟಲಿಗಳನ್ನು ಮರುಬಳಕೆ ಮಾಡಿ ಗಿಡಮರಗಳಿಗೆ ಅರವಟ್ಟಿಗೆಗಳನ್ನು ಕಟ್ಟುವ ಮೂಲಕ ಪಕ್ಷಿಗಳಿಗೆ ಕುಡಿಯುವ ನೀರು ಒದಗಿಸುವ ಕಾರ್ಯಕ್ಕೆ ಯುವಕರು ಮುಂದಾಗಿರುವುದು ಅದೇಷ್ಟೋ ಪಕ್ಷಿಗಳು ಬಾಯಾರಿಕೆ ನೀಗಿಸಿಕೊಳ್ಳಲು ಸಹಾಯವಾಗಿದೆ.

ಗ್ರಾಮದ ರಸ್ತೆ ಬದಿಯ ಗಿಡಗಳು, ಅರಣ್ಯ ಇಲಾಖೆಯಿಂದ ನೆಡಲಾದ ಸಸಿಗಳು ಹಾಗೂ ಹಳ್ಳಿಯಲ್ಲಿನ ಮರಗಳಿಗೆ ಬಾಟಲಿಯಿಂದ ತಯಾರಿಸಲಾದ ಅರವಟ್ಟಿಗೆಗಳನ್ನು ಕಟ್ಟಿ ಪ್ರತಿದಿನ ನೀರು ತುಂಬುವ ಕಾರ್ಯವನ್ನು ಸಮಾನ ಮನಸ್ಕ ಯುವಕರು ನಡೆಸುತ್ತಿದ್ದಾರೆ.... ದಿನಂಪ್ರತಿ ಈ ಕಾಯಕದಿಂದ ಚಿಟುಗುಬ್ಬಿ, ಗಿಳಿ, ಕಾಗೆ, ಕೋಗಿಲೆ, ಮರಕುಟಕ, ಗೊಬ್ಬಚ್ಚಿ ಸೇರಿದಂತೆ ವಿವಿಧ ಬಣ್ಣದ ಪಕ್ಷಿಗಳು ಗುಂಪು ಗುಂಪಾಗಿ ಬಂದು ನೀರು



ಕುಡಿಯುತ್ತಿರುವುದು ಕಂಡುಬರುತ್ತಿದೆ. ಮಧ್ಯಾಹ್ನದ ಬಿಸಿಲಿನ ಹೊತ್ತಿನಲ್ಲಿ ಈ ಗಿಡಮರಗಳು ಪಕ್ಷಿಗಳಿಗೆ ಆಶ್ರಯ ತಾಣವಾಗಿ ಮಾರ್ಪಟ್ಟಿದೆ..

**ಯುವಕರ ಮಾದರಿ ಕಾರ್ಯಕ್ಕೆ ಸಿದ್ದಲಿಂಗ ಶ್ರೀಗಳ ಪ್ರೇರಣೆ:** ಶ್ರೀ ಖಾಸ್ಗತೇಶ್ವರ ಮಠದ ಬಾಲ ಸೇವಯೋಗಿ ಸಿದ್ದಲಿಂಗ ಶ್ರೀಗಳ ಮಾರ್ಗದರ್ಶನ ಮತ್ತು ಪ್ರೇರಣೆಯಿಂದ ಈ ಕಾರ್ಯ ಆರಂಭವಾಗಿದೆ. "ಅಜ್ಜನ ನಡೆಗೆ ಹಳ್ಳಿ ಕಡೆಗೆ" ಎಂಬ ಕಾರ್ಯಕ್ರಮದ ಮೂಲಕ ಪರಿಸರ ಸಂರಕ್ಷಣೆ, ಪ್ರಾಣಿ–ಪಕ್ಷಿ ಸಂಕುಲ ಉಳಿವು ಹಾಗೂ ಸಮಾಜಮುಖಿ ಕಾರ್ಯಗಳ ಕುರಿತು ಯುವಕರಿಗೆ ತಿಳಿವಳಿಕೆ ನೀಡಲಾಗಿತ್ತು. ಈ ಸಂದೇಶದಿಂದ ಪ್ರೇರಿತಗೊಂಡ ಗಡಿ ಸೋಮನಾಳ ಗ್ರಾಮದ ಶ್ರೀ ಬಸವ ಚೇತನ ಗ್ರಾಮೀಣಾಭಿವೃದ್ಧಿ ಸಂಘದ ಯುವಕರು ತಕ್ಷಣ ಕಾರ್ಯಕ್ಕೆ ಮುಂದಾಗಿದ್ದು ಸಾವಿರ ಗಿಡಗಳಿಗೆ ಅರವಟ್ಟಿಗೆ ಗುರಿಯನ್ನು ಹಾಕುವ ಹೊಂದಿದೆ ಇನ್ನು ನೀರು ಕುಡಿದು ಎಲ್ಲೆಂದರಲ್ಲಿ ಬಿಸಾಕುವ ನಿರುಪಯುಕ್ತ ಬಿಸ್ಲೇರಿ ಬಾಟಲಿಗಳನ್ನು ಸಂಗ್ರಹಿಸಿ ಅವುಗಳನ್ನು ಕತ್ತರಿಸಿ ನೀರು ತುಂಬುವ ಅರವಟ್ಟಿಗೆಗಳಾಗಿ ರೂಪಿಸಲಾಗಿದೆ. ಬಳಿಕ ಅವುಗಳನ್ನು ಗಿಡಗಳಿಗೆ ಕಟ್ಟಲಾಗಿದ್ದು, ದಿನವೂ ನೀರು ತುಂಬುವ ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ ಸಾವಿರಕ್ಕೂ ಹೆಚ್ಚು ಗಿಡಗಳಿಗೆ ಅರವಟ್ಟಿಗೆಗಳನ್ನು ನಿರ್ಮಿಸಿರುವ ಯುವಕರು ಮುಂದಿನ ದಿನಗಳಲ್ಲಿ ಇನ್ನಷ್ಟು ವಿಸ್ತರಿಸುವ ಯೋಜನೆ ಹೊಂದಿದ್ದು, ಮತ್ತಷ್ಟು ಜನರಿಗೆ ಪ್ರೇರಣೆಯಾಗಿದ್ದಾರೆ.

ಇನ್ನು ಅರವಟ್ಟಿಗೆಗಳನ್ನು ಹಾಕಿದ ನಂತರ ಪಕ್ಷಿಗಳ ಸಂಚಾರ ಹೆಚ್ಚಳವಾಗಿದ್ದು ಯುವಕರಿಗೆ ಮತ್ತಷ್ಟು ಹುಮ್ಮಸ್ಸಿನೊಂದಿಗೆ ಕೆಲಸ ಮಾಡಲು ಸಹಾಯವಾಗಿದೆ ಎನ್ನುತ್ತಾರೆ, ಇನ್ನು ಅರವಟ್ಟಿಗೆಗಳನ್ನು ಈ ಪ್ರದೇಶದಲ್ಲಿ ಅಳವಡಿಸಿದ ನಂತರ ಪಕ್ಷಿಗಳ ಸಂಚಾರ ಹೆಚ್ಚಾಗಿದ್ದು ಬೆಳಿಗ್ಗೆ ಮತ್ತು ಮಧ್ಯಾಹ್ನದ ಹೊತ್ತಿನಲ್ಲಿ ನೂರಾರು ಪಕ್ಷಿಗಳು ನೀರು ಕುಡಿಯಲು ಬರುತ್ತಿರುವುದು ಗ್ರಾಮಸ್ಥರ ಗಮನ ಸೆಳೆಯುತ್ತಿದೆ. ಕೆಲವು ಪಕ್ಷಿಗಳು ಇದೇ ಗಿಡಗಳಲ್ಲಿ ನೆಲೆಸಲು ಪ್ರಾರಂಭಿಸಿರುವುದು ಪರಿಸರ ಸಮತೋಲನದ ದೃಷ್ಟಿಯಿಂದ ಉತ್ತಮ ಬೆಳವಣಿಗೆಯಾಗಿದೆ...

ಇಂದಿನ ತಂತ್ರಜ್ಞಾನ ಯುಗದಲ್ಲಿ ಪರಿಸರ ಜಾಗೃತಿ ಅತ್ಯಗತ್ಯ ಮಾನವನ ಬದುಕು ವೇಗವಾಗಿ ಬದಲಾಗುತ್ತಿರುವಂತೆ ಪಕ್ಷಿಗಳ ನೆಲೆಗಳು ಕಡಿಮೆಯಾಗುವುದು ಮರಗಳ ಮಾರಣಹೋಮ ನೀರಿನ ಕೊರತೆ ಮತ್ತು ಪ್ಲಾಸ್ಟಿಕ್ ತ್ಯಾಜ್ಯದ ಹೆಚ್ಚಳದಿಂದ ಪಕ್ಷಿ ಸಂಕುಲಕ್ಕೆ ಅಪಾಯ ಎದುರಾಗುತ್ತಿದೆ. ಇಂತಹ ಸಂದರ್ಭದಲ್ಲಿ ನಿರುಪಯುಕ್ತ ಪ್ಲಾಸ್ಟಿಕ್ ಬಾಟಲಿಗಳನ್ನು ಉಪಯೋಗಿಸಿ ಪಕ್ಷಿಗಳಿಗೆ ಆಶ್ರಯ ಮತ್ತು ನೀರಿನ ವ್ಯವಸ್ಥೆ ಮಾಡಿರುವುದು ಪರಿಸರ ಜಾಗೃತಿ ಮೂಡಿಸುವ ಕಾರ್ಯಕ್ಕೆ ಗ್ರಾಮಸ್ಥರಿಂದ ಪ್ರಶಂಸೆ ವ್ಯಕ್ತವಾಗಿದೆ, ಗ್ರಾಮಸ್ಥರು ಯುವಕರ ಕಾರ್ಯವನ್ನು ಶ್ಲಾಘಿಸಿದ್ದಾರೆ. ಸುಲಭವಾಗಿ ಮಾಡಬಹುದಾದ ಈ ಪ್ರಯತ್ನವನ್ನು ಇತರೆ ಗ್ರಾಮಗಳೂ ಅನುಸರಿಸಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಶಾಲಾ ವಿದ್ಯಾರ್ಥಿಗಳಿಗೂ ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಲು ಈ ಕಾರ್ಯ ಸಹಕಾರಿಯಾಗಲಿದೆ ಎಂದು ಹಿರಿಯರು ತಿಳಿಸಿದ್ದಾರೆ.

ಇನ್ನು ಈ ಮಾದರಿ ಕಾರ್ಯದಲ್ಲಿ ಶ್ರೀ ಬಸವಚೇತನ ಗ್ರಾಮೀಣಾಭಿವೃದ್ಧಿ ಸಂಘದ ಅಧ್ಯಕ್ಷ ಸಂಗಮೇಶ ಹರವಾಳ, ಕಾರ್ಯದರ್ಶಿ ಗುರುರಾಜ ಕಾಜಗಾರ, ಪದಾಧಿಕಾರಿಗಳಾದ ಗೌಡ ಬಿರಾದಾರ, ವಡವಡಗಿ, ಕುಮಾರ ಹರವಾಳ, ವಿಜಯಕುಮಾರ ಸಾಸನೂರ, ರಮೇಶ ಹರಳ ಸೇರಿದಂತೆ ಅನೇಕ ಯುವಕರು ಸಕ್ರಿಯವಾಗಿ ಭಾಗವಹಿಸಿದ್ದಾರೆ.

ನಮ್ಮ ಮುಂದಿನ ಪೀಳಿಗೆಗೆ ನಾವು ಉಳಿಯಬೇಕಾದ ಪರಿಸರ , ಪ್ರಾಣಿ ಪಕ್ಷಿಗಳ ರಕ್ಷಣೆ ಅನಿವಾರ್ಯ ಒಟ್ಟಿನಲ್ಲಿ ಪರಿಸರ ಮತ್ತು ಪಕ್ಷಿ ಸಂಕುಲ ಉಳಿಸಲು ಯುವಕರು ಕೈಗೊಂಡಿರುವ ಈ ವಿನೂತನ ಪ್ರಯತ್ನ ಇತರ ಪ್ರದೇಶಗಳಿಗೆ ಹಾಗೂ ಮತ್ತಷ್ಟು ಜನರಿಗೆ ಮಾದರಿಯಾಗಲಿ ಎಂಬುದು ನಮ್ಮ ಆಶಯ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)